ಡಾ. ಶಿವರಾಮ ಕಾರಂತರ ಶೈಕ್ಷಣಿಕ ಚಿಂತನೆಗಳು ಮತ್ತು ಪ್ರಯೋಗಗಳು: ಒಂದು ಮರುಚಿಂತನೆ

ಕನ್ನಡ ವಿಶ್ವವಿದ್ಯಾಲಯ, ಹಂಪಿಗೆ

ಎಂ.ಫಿಲ್ ಪದವಿಗಾಗಿ ಸಾದರಪಡಿಸಿದ ಸಂಪ್ರಬಂಧ

ಸಂಶೋಧಕಿ

ತುಳಸಿ ಕುಮಾರಿ

ಮಾರ್ಗದರ್ಶಕರು

ಪ್ರೊ. ಎ.ವಿ.ನಾವಡ

೨೦೦೮

ಡಾ. [illegible] ಅವರ ಕೃತಿಗಳ [illegible] ಮತ್ತು [illegible]:

ಒಂದು ಅಧ್ಯಯನ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ಎಂ.ಫಿಲ್ ಪದವಿಗಾಗಿ ಸಲ್ಲಿಸಿರುವ ಸಂಪ್ರಬಂಧ

ಸಂಶೋಧಕ[illegible]

[illegible]

ಮಾರ್ಗದರ್ಶಕರು

[illegible]

[illegible]

[illegible]

[illegible]

ಡಾ. ಶಿವರಾಮ ಕಾರಂತರ ಶೈಕ್ಷಣಿಕ ಚಿಂತನೆಗಳು ಮತ್ತು ಪ್ರಯೋಗಗಳು: ಒಂದು ಮರುಚಿಂತನೆ

ಕನ್ನಡ ವಿಶ್ವವಿದ್ಯಾಲಯ, ಹಂಪಿಗೆ

ಎಂ.ಫಿಲ್ ಪದವಿಗಾಗಿ ಸಾದರಪಡಿಸಿದ ಸಂಪ್ರಬಂಧ

ಸಂಶೋಧಕಿ

ತುಳಸಿ ಕುಮಾರಿ

ಮಾರ್ಗದರ್ಶಕರು

ಪ್ರೊ. ಎ.ವಿ.ನಾವಡ

೨೦೦೯

ಕರ್ನಾಟಕ ಥಿಯೋಲಾಜಿಕಲ್ ಸಂಶೋಧನಾ ಕೇಂದ್ರ

ಬಲ್ಮಠ, ಮಂಗಳೂರು

ಯೋಗ್ಯತಾ ಪತ್ರ

ತುಳಸಿ ಕುಮಾರಿ ಅವರು ನನ್ನ ಸಲಹೆ ಮತ್ತು ಮಾರ್ಗದರ್ಶನದಲ್ಲಿ **'ಡಾ. ಶಿವರಾಮ ಕಾರಂತರ ಶೈಕ್ಷಣಿಕ ಚಿಂತನೆಗಳು ಮತ್ತು ಪ್ರಯೋಗಗಳು – ಒಂದು ಮರುಚಿಂತನೆ'** ಎಂಬ ಶೀರ್ಷಿಕೆಯ ಈ ಸಂಪ್ರಬಂಧವನ್ನು ಎಂ.ಫಿಲ್ ಪದವಿ ಪ್ರಾಪ್ತಿಗಾಗಿ ಕನ್ನಡ ವಿಶ್ವವಿದ್ಯಾಲಯ, ಹಂಪಿಗೆ ಸಲ್ಲಿಸಬೇಕೆಂದು ಸಿದ್ಧಪಡಿಸಿದ್ದಾರೆ. ಈ ಸಂಪ್ರಬಂಧವು ಸಂಶೋಧಕಿಯ ಸ್ವಂತ ಪರಿಶ್ರಮ, ಅಭಿಪ್ರಾಯ ಸಂಗ್ರಹ, ಬೋಧನೆ ಮತ್ತು ಸಂಶೋಧನೆಯ ಫಲಸ್ವರೂಪವಾಗಿದೆ. ಇವರು ಸಂಪ್ರಬಂಧದ ವಿಷಯವನ್ನು ಅಥವಾ ಇದರ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಲಿ ಅಥವಾ ಇನ್ನಿತರ ಉದ್ದೇಶಗಳಿಗಾಗಿಯಾಗಲಿ ಬಳಸಿಕೊಂಡಿಲ್ಲ.

ಕರ್ನಾಟಕ ಥಿಯೋಲಾಜಿಕಲ್ ಸಂಶೋಧನಾ ಕೇಂದ್ರ
ಬಲ್ಮಠ, ಮಂಗಳೂರು.

ಪ್ರೊ. ಎ.ವಿ.ನಾವಡ
ಸಂಶೋಧನಾ ಮಾರ್ಗದರ್ಶಕರು

ಪ್ರಮಾಣ ಪತ್ರ

ಕನ್ನಡ ವಿಶ್ವವಿದ್ಯಾಲಯ, ಹಂಪಿಗೆ ಎಂ.ಫಿಲ್ ಪದವಿಗಾಗಿ ಸಾದರಪಡಿಸಿದ **'ಡಾ. ಶಿವರಾಮ ಕಾರಂತರ ಶೈಕ್ಷಣಿಕ ಚಿಂತನೆಗಳು ಮತ್ತು ಪ್ರಯೋಗಗಳು – ಒಂದು ಮರುಚಿಂತನೆ'** ಎಂಬ ಶೀರ್ಷಿಕೆಯ ಈ ಸಂಪ್ರಬಂಧವು ಈ ಸಂಶೋಧಕಿಯ ಸ್ವತಂತ್ರ ಕೃತಿಯಾಗಿದ್ದು ವಿಶ್ಲೇಷಣೆ ಮತ್ತು ಅಧ್ಯಯನದ ಫಲೋದಯವಾಗಿದೆ. ಮಂಗಳೂರಿನ ಕರ್ನಾಟಕ ಥಿಯೋಲಾಜಿಕಲ್ ಸಂಶೋಧನಾ ಕೇಂದ್ರದಲ್ಲಿ ಪ್ರೊ. ಎ.ವಿ.ನಾವಡ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ ಈ ಸಂಪ್ರಬಂಧವನ್ನು ಬೇರಾವುದೇ ಪದವಿ, ಡಿಪ್ಲೋಮ ಅಥವಾ ತತ್ಸಮಾನ ಉಪಾಧಿಗಳ ಪ್ರಾಪ್ತಿಗಾಗಿ ಅಥವಾ ಆರ್ಥಿಕ ಲಾಭಕ್ಕಾಗಿ ಇಡಿಯಾಗಿ ಅಥವಾ ಬಿಡಿಯಾಗಿ ಬಳಸಿಕೊಂಡಿಲ್ಲವೆಂದು ನಾನು ಈ ಮೂಲಕ ದೃಢಪಡಿಸುತ್ತೇನೆ.

Thulasikumari

ಕರ್ನಾಟಕ ಥಿಯೋಲಾಜಿಕಲ್ ಸಂಶೋಧನಾ ಕೇಂದ್ರ — ತುಳಸಿ ಕುಮಾರಿ

ಬಲ್ಮಠ, ಮಂಗಳೂರು.

ಡಾ. ಶಿವರಾಮ ಕಾರಂತರ ಶೈಕ್ಷಣಿಕ ಚಿಂತನೆಗಳು ಮತ್ತು ಪ್ರಯೋಗಗಳು: ಒಂದು ಮರುಚಿಂತನೆ

ಅಧ್ಯಾಯ ವಿವರಗಳು

೧. ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ

೧. ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ

೧.೧ ಪ್ರಸ್ತಾವನೆ

ಶಿಕ್ಷಣ ರಂಗ ನಿರಂತರ ಪರಿವರ್ತನೆಯ ಆಶಯವುಳ್ಳ ಕ್ಷೇತ್ರ. ಹೀಗಾಗಿ ಕಾಲದಿಂದ ಕಾಲಕ್ಕೆ ಬದಲಾವಣೆಗಳು ನಡೆಯುತ್ತಾ ಬಂದಿದೆ. ಸುಧಾರಣೆಯ ಕಾಳಜಿಯುಳ್ಳ ಪ್ರಯತ್ನಗಳು ನಿರಂತರವಾಗಿ ಬೇರೆ ಬೇರೆ ಚಿಂತಕರಿಂದ, ಜಿಜ್ಞಾಸುಗಳಿಂದ ನಡೆದಿದೆ. ಹೀಗೆ ಪ್ರಯೋಗ, ಪ್ರಯತ್ನಗಳನ್ನು ಮಾಡಿದವರಲ್ಲಿ ಕೆಲವರು ಶಿಕ್ಷಣ ಕ್ಷೇತ್ರದಿಂದಲೇ ಬಂದವರಾದರೆ, ಇನ್ನು ಕೆಲವರು ಒಟ್ಟು ಸಾಮಾಜಿಕ ಪರಿವರ್ತನೆಯ ತುಡಿತವುಳ್ಳವರಾಗಿ ತೊಡಗಿಸಿಕೊಂಡವರಾಗಿದ್ದು ಆ ಸಂದರ್ಭದಲ್ಲಿ ಶಿಕ್ಷಣ ಕ್ಷೇತ್ರದ ಬಗೆಗೂ ಚಿಂತನೆ ನಡೆಸಿದವರಿದ್ದಾರೆ. ಶಿಕ್ಷಣ ರಂಗದ ಸಮಕಾಲೀನ ಧೋರಣೆಗಳನ್ನು, ಸಮಸ್ಯೆಗಳನ್ನು ಬಹಳ ತಳಸ್ಪರ್ಶಿಯಾಗಿ ಅಧ್ಯಯನ ನಡೆಸಿದ ಕೆಲವರೂ ಈ ಬಗ್ಗೆ ಸ್ವಯಂ ಚಿಂತನೆಯ ಬೆಳಕನ್ನು ಹರಿಸಿದ್ದಾರೆ.

ಕನ್ನಡದ ಸಂದರ್ಭದಲ್ಲಿ ತನ್ನನ್ನು ತಾನು ಬಹು ಕ್ಷೇತ್ರಗಳಲ್ಲಿ ಏಕಕಾಲದಲ್ಲಿ ತೊಡಗಿಸಿಕೊಂಡ ಡಾ. ಶಿವರಾಮ ಕಾರಂತರನ್ನು ಕಾದಂಬರಿಕಾರರಾಗಿ ಗುರುತಿಸಲ್ಪಟ್ಟಂತೆ ಓರ್ವ ಶಿಕ್ಷಣ ಚಿಂತಕ, ಪ್ರಯೋಗಶೀಲ ವ್ಯಕ್ತಿ ಎಂಬಂತೆ ಗುರುತಿಸಲಾಗಿಲ್ಲ. ಕಾರಂತರು ಒಂದು ಬಗೆಯ ಸ್ಥಿತ್ಯಂತರದ ಕಾಲದಲ್ಲಿ ತಮ್ಮ ಶಿಕ್ಷಣವನ್ನು ಪಡೆದವರು. ಪ್ರಾಚೀನ ಪರಂಪರೆಯ ಐಗಳ ಮಠ ಮತ್ತು ಆಧುನಿಕ ಆಂಗ್ಲ ಶಿಕ್ಷಣಗಳೆರಡಕ್ಕೂ ಒಂದು ಬಗೆಯ ಕೊಂಡಿಯಾಗಿ ಬೆಳೆದವರು. ತಮ್ಮ ಕಾಲದ ಶಿಕ್ಷಣ ಪದ್ಧತಿಯ ಕುಂದು ಕೊರತೆ, ಸಮಸ್ಯೆಗಳು ಮತ್ತು ಸುಧಾರಣೆಯ ಮಾರ್ಗ ಇವೆಲ್ಲವುಗಳ ಬಗೆಗೆ ಕಾರಂತರು ಒಬ್ಬ ಶಿಕ್ಷಣತಜ್ಞನಷ್ಟೇ ಅಧಿಕೃತವಾಗಿ ಮಾತನಾಡಿದ್ದಾರೆ. ಚಿಂತನೆಯನ್ನು ಸ್ವಯಂ ಪ್ರಯೋಗಕ್ಕೆ ಒಳಪಡಿಸಿದ್ದಾರೆ. ಅವುಗಳ ಸಫಲತೆಯನ್ನೂ, ಕೆಲವೊಮ್ಮೆ ನಿರೀಕ್ಷಿತ ಪ್ರಮಾಣದ ಸಹಕಾರವಿಲ್ಲದೆ ಸೋಲನ್ನೂ ಕಂಡಿದ್ದಾರೆ. ಶಿಕ್ಷಣ ಕ್ಷೇತ್ರದ ಇಂತಹ ಅಪೂರ್ವ ಪ್ರಯೋಗಶೀಲ ಡಾ.ಶಿವರಾಮ ಕಾರಂತರ ಶೈಕ್ಷಣಿಕ ಚಿಂತನೆಗಳು, ವಿಶಿಷ್ಟತೆ, ಪ್ರಯೋಗಗಳ ಅನನ್ಯತೆಯ ತಿಳುವಳಿಕೆ ಉಂಟಾಗಬೇಕಾದರೆ ಇವುಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ಸಮಗ್ರವಾಗಿ ಪರಿಶೀಲಿಸಬೇಕು. ಔಪಚಾರಿಕ ಶಿಕ್ಷಣ ವ್ಯವಸ್ಥೆಯೊಳಗೆ ಬಹಳ ಶಿಕ್ಷಣ ಪಡೆದವರೂ ಅಲ್ಲದ, ಶಿಕ್ಷಕನಾಗಿ ಕೆಲಸದಲ್ಲಿ ತೊಡಗಿಸಿಕೊಂಡರೂ ಅಲ್ಲದ ಡಾ.ಶಿವರಾಮ ಕಾರಂತರ ಶೈಕ್ಷಣಿಕ ಚಿಂತನೆಯ ಸಾರವನ್ನು ಅರಿತುಕೊಳ್ಳಬೇಕಾದರೆ ಒಂದು ಸಮಗ್ರ ಅಧ್ಯಯನ ನಡೆಯಬೇಕು.

೧.೨ ಅಧ್ಯಯನದ ಉದ್ದೇಶ ಮತ್ತು ಸ್ವರೂಪ

ಡಾ. ಶಿವರಾಮ ಕಾರಂತರು ಶಿಕ್ಷಣ ಕ್ಷೇತ್ರದ ಒಬ್ಬ ಅನನ್ಯ ಸಾಧಕ. ೧೯೩೧ರ ಹೊತ್ತಿಗೆಯೇ ಮೊತ್ತ ಮೊದಲಿಗೆ ಶಿಕ್ಷಣ ಕ್ಷೇತ್ರದಲ್ಲೇ ವಿಶಿಷ್ಟವೆಂದೆನ್ನಬಹುದಾದ 'ಮಕ್ಕಳಕೂಟ' ಎಂಬ ಶಿಕ್ಷಣ ಶಿಬಿರವನ್ನು ಕಾರಂತರು ಆಯೋಜಿಸುವ ಮೂಲಕ ಶಿಕ್ಷಣ ಕೇತ್ರದಲ್ಲಿ ಹೊಸತನವೊಂದನ್ನು ಬಿತ್ತಿದರು. ಆ ಮೂಲಕ ಮಕ್ಕಳಲ್ಲಿ ಕಲಿಕೆಯ ಸಾಧ್ಯತೆಯ ಬಗೆಗಿನ ಹೊಸ ತಿಳುವಳಿಕೆಯ ಅನಾವರಣಕ್ಕೆ ಕಾರಣಕರ್ತರಾದರು. ಈ ಶಿಬಿರದಲ್ಲಿ ಮಕ್ಕಳು ಬೋಧನೆಗಿಂತ ಕಲಿಕೆಯ ಆವರಣದ ಪ್ರಚೋದನೆಯಿಂದ ಕ್ರಿಯಾಶೀಲರಾಗಿ ಕಲಿಯುತ್ತಿದ್ದುದನ್ನು ಮತ್ತು ಸ್ವಯಂ ವಿವೇಚನಾಶಕ್ತಿಯಿಂದ ಚಟುವಟಿಕೆಗಳನ್ನು ನಡೆಸುತ್ತಿದ್ದುದನ್ನು ಮುಂದೆ ಕಾರಂತರು ಗುರುತಿಸುತ್ತಾರೆ. ಮಕ್ಕಳ ಸೃಷ್ಟಿಕ್ರಿಯೆಯನ್ನು ಗುರುತಿಸಲು ಈ ಶಿಬಿರ ಯಶಸ್ವಿಯಾದಾಗ ಕಾರಂತರ ಮನಸ್ಸಿನಲ್ಲಿ ಪ್ರತ್ಯಕ್ಷವಾಗಿ ತಾನೇ ಒಂದು ಶಿಕ್ಷಣ ವಿಧಾನವನ್ನು ರೂಪಿಸಿ, ಅದನ್ನು ಕೊಡುವ ವಿಷಯದಲ್ಲಿ ಮೂಡಿದ ಕಲ್ಪನೆಯೇ 'ಬಾಲವನ'. ಮುಂದೆ ಈ ಬಾಲವನದ ಮೂಲಕ ಒಂದಷ್ಟು ವಿಶಿಷ್ಟ ಬಗೆಯ ಪ್ರಯೋಗಗಳನ್ನು ನಡೆಸುತ್ತಾರೆ. ಆ ಪ್ರಯೋಗದಲ್ಲಿ ಕೂಡ ಮಕ್ಕಳ ಕಲಿಕೆಯ ಆವರಣ ಕಲಿಕೆಯ ಕುತೂಹಲವನ್ನು ಹುಟ್ಟಿಸುವ ಬಗೆಯಲ್ಲಿ ಇರುವುದನ್ನು ಗುರುತಿಸುತ್ತಾರೆ. ಕೇವಲ ಬಾಲವನದ ಪ್ರಯೋಗವನ್ನು ಮಾತ್ರವಲ್ಲ, ಶಿಕ್ಷಣಕ್ಕೆ ಬೇಕಾದ ಮೂಲ ಸಲಕರಣೆಗಳಲ್ಲಿ ಒಂದಾದ ಪಠ್ಯ ಪುಸ್ತಕದ ರಚನೆಯನ್ನು ಮಾಡುತ್ತಾರೆ. 'ಸಿರಿಗನ್ನಡ ಪಾಠ ಮಾಲೆ', 'ಓದುವ ಆಟ' ಮೊದಲಾದ ಪಠ್ಯಗಳನ್ನು ತಯಾರು ಮಾಡುತ್ತಾರೆ. ಮಕ್ಕಳ ಶಿಕ್ಷಣಕ್ಕೆ ಪೂರಕವಾದ 'ಬಾಲಪ್ರಪಂಚ', 'ವಿಜ್ಞಾನ ಪ್ರಪಂಚ', 'ಪ್ರಾಣಿ ಪ್ರಪಂಚ' 'ಚಿತ್ರಮಯ ದಕ್ಷಿಣ ಕನ್ನಡ' ಮೊದಲಾದ ಪುಸ್ತಕಗಳನ್ನು ಪ್ರಕಟಿಸುತ್ತಾರೆ. ವಯಸ್ಕರ ಶಿಕ್ಷಣಕ್ಕಾಗಿ ಪಠ್ಯ ಪುಸ್ತಕಗಳನ್ನೂ, ಓದಲು ಸಹಾಯಕವಾಗುವ ಪುಸ್ತಕಗಳನ್ನೂ ಬರೆಯುತ್ತಾರೆ. ಜೊತೆಗೆ ಶಿಕ್ಷಣಕ್ಕೆ ಸಂಬಂಧಿಸಿದಂತೆ, ಶಿಕ್ಷಣ ಕ್ಷೇತ್ರದ ಸಮಸ್ಯೆಗಳು, ಭಾಷಾ ಶಿಕ್ಷಣ ಮೊದಲಾದ ಹತ್ತಾರು ವಿಷಯಗಳ ಕುರಿತು ಭಾಷಣಗಳನ್ನು ನೀಡಿದ್ದಾರೆ.

ಪ್ರಸ್ತುತ ಈ ಅಧ್ಯಯನವು ಲಭ್ಯವಿರುವ ಈ ಎಲ್ಲಾ ಅಂಶಗಳನ್ನು ಅಧ್ಯಯನಕ್ಕೆ ಒಳಪಡಿಸುವ ಉದ್ದೇಶವನ್ನು ಹೊಂದಿದೆ. ಆ ಮೂಲಕ ಕಾರಂತರ ಶೈಕ್ಷಣಿಕ ಚಿಂತನೆ, ಪ್ರಯೋಗಗಳನ್ನು ಅಧ್ಯಯನದ ಚೌಕಟ್ಟಿನೊಳಗೆ ತಂದು ಅವುಗಳ ವಿಶಿಷ್ಟತೆಯನ್ನು ಮತ್ತು ಅನನ್ಯತೆಯನ್ನು, ಅವುಗಳ ಇತ್ಯಾತ್ಮಕ ಹಾಗೂ ನೇತ್ಯಾತ್ಮಕ ಅಂಶಗಳನ್ನು ಶೋಧಿಸುವ ಉದ್ದೇಶವನ್ನು ಹೊಂದಿದೆ. ಈ ಕುರಿತು ಈವರೆಗೆ ಹೆಚ್ಚಿನ ಅಧ್ಯಯನಗಳು ನಡೆಯದೇ ಇರುವುದರಿಂದ ಈ ಅಧ್ಯಯನವು ಮಹತ್ವದ್ದಾಗುತ್ತದೆ.

ಈ ಅಧ್ಯಯನವು ಕಾರಂತರ ಶೈಕ್ಷಣಿಕ ಚಿಂತನೆಯನ್ನು ಮತ್ತು ಪ್ರಯೋಗಶೀಲತೆಯನ್ನು ಸಮಗ್ರವಾಗಿ ಗ್ರಹಿಸಿ ಅವುಗಳನ್ನು ಸಮಕಾಲೀನ ನೆಲೆಯಿಂದ ವಿವೇಚಿಸುವ ಪ್ರಯತ್ನವಾಗಿದೆ.

ಕಾರಂತರೇ ತಮ್ಮ ಪ್ರಯೋಗದ ಸಾಧ್ಯತೆಯ ಮಿತಿಗಳನ್ನು ಹೇಳಿಕೊಂಡಿರುವುದರಿಂದ ಒಟ್ಟನಲ್ಲಿ ಈ ಪ್ರಯೋಗದ ಮೂಲಕ ಕಂಡುಕೊಳ್ಳಲಾದ ಮಕ್ಕಳ ಸೃಷ್ಟಿಶೀಲತೆಯನ್ನು ಹಾಗೂ ಪ್ರಯೋಗದ ಇನ್ನಿತರ ಮುಖಗಳನ್ನು ಶೋಧಿಸುವ ಮುಖ್ಯ ಉದ್ದೇಶವನ್ನು ಹೊಂದಿದೆ.

ಕಾದಂಬರಿಕಾರರಾಗಿ ಮಾತ್ರ ಬಹುವಾಗಿ ಗುರುತಿಸಲ್ಪಟ್ಟ ಕಾರಂತರ ಪ್ರಯೋಗಶೀಲತೆಯ ಅನನ್ಯ ನೆಲೆಗಳು ಹಾಗೂ ಅನ್ಯ ಕ್ಷೇತ್ರಗಳ ಸಂಕ್ಷಿಪ್ತ ಪರಿಚಯವನ್ನು ಮಾಡಿಕೊಡುವ ಈ ಅಧ್ಯಯನದಲ್ಲಿ, ಕಾರಂತರು ಮಕ್ಕಳ ಶಿಕ್ಷಣ ಮತ್ತು ಮಕ್ಕಳ ಮನೋವಿಕಾಸಕ್ಕಾಗಿ ಬರೆದ ಬೇರೆ ಬೇರೆ ಬಗೆಯ ಸೃಜನಶೀಲ ಮತ್ತು ಸೃಜನೇತರ ಸಾಹಿತ್ಯಗಳ ವೈಶಿಷ್ಟ್ಯವನ್ನು ಕೂಡ ಗುರುತಿಸುತ್ತದೆ. ಆ ಮೂಲಕ ಕಾರಂತ ಎಂಬ ವ್ಯಕ್ತಿತ್ವದ ಪ್ರಯೋಗಶೀಲತೆಯ ಮುಖಗಳ ಜೊತೆಗೆ ಶಿಕ್ಷಣ ಸಂಬಂಧಿ ಪ್ರಯೋಗಗಳನ್ನು ಕೂಡ ಇಟ್ಟು ನೋಡಲು ಅವಕಾಶ ಒದಗಿ ಬರುತ್ತದೆ. ಈ ಹಿನ್ನೆಲೆಯಿಂದ ಈ ಸಂಪ್ರಬಂಧವು ಪ್ರಯೋಗಶೀಲತೆಯ ಬಹು ಮಗ್ಗಲುಗಳನ್ನು ಮರು ಚಿಂತನೆಗೆ ಒಳಪಡಿಸುತ್ತದೆ.

ಕಾರಂತರು ಸ್ವೋಪಜ್ಞ ಶಿಕ್ಷಣ ಚಿಂತಕರಲ್ಲ. ಅವರು ಬೇರೆ ಬೇರೆ ಶಿಕ್ಷಣ ತಜ್ಞರ ಚಿಂತನೆಗಳಿಂದ ಪ್ರಭಾವಿತರಾದವರು, ಆ ಮೂಲಕ ಕೊನೆಗೆ ತನ್ನದೇ ಆದ ಒಂದು ಶೈಕ್ಷಣಿಕ ಸಿದ್ಧಾಂತವನ್ನು ಕಟ್ಟಿಕೊಂಡವರು ಎಂಬ ಮಾತು ಇದೆ. ಈ ಅಧ್ಯಯನವು ಈ ಮಾತನ್ನು ಭಿನ್ನ ಬಗೆಯಿಂದ ಪರಿಶೀಲಿಸಿ, ಕಾರಂತರ ಶೈಕ್ಷಣಿಕ ಚಿಂತನೆಯ ವಿಶಿಷ್ಟತೆಯನ್ನು ಗುರುತಿಸುವ ಪ್ರಯತ್ನವನ್ನು ಮಾಡುತ್ತದೆ.

ಭಾಷಾ ಕಲಿಕೆಯ ಬಗೆಗೆ ಕಾರಂತರು ಒಬ್ಬ ಭಾಷಾ ವಿಜ್ಞಾನಿಯಂತೆ ಬಹಳ ವೈಜ್ಞಾನಿಕ ದಾರಿಯನ್ನು ಕಂಡುಕೊಂಡಿದ್ದರು. ಆ ಬಗೆಯಲ್ಲೇ ಭಾಷಾ ಕಲಿಕೆಯನ್ನು ಮಾಡಿದರು. ಈ ಕಲಿಕಾ ವಿಧಾನದ ಸ್ವರೂಪ ಹಾಗೂ ವಿಶಿಷ್ಟತೆಯನ್ನು ಗುರುತಿಸುವಲ್ಲಿ ಈ ಅಧ್ಯಯನವು ಮಹತ್ವದ ಪ್ರಯತ್ನವನ್ನು ಮಾಡುತ್ತದೆ.

ಒಟ್ಟನಲ್ಲಿ ಈ ಅಧ್ಯಯನವು ಕಾರಂತರ ಸಮಗ್ರ ಶೈಕ್ಷಣಿಕ ವಿಚಾರಕ್ಕೆ ಸಂಬಂಧಿಸಿದ ವಿಷಯಗಳನ್ನು ವಿಶ್ಲೇಷಣೆ ಮಾಡಿ ಅದರ ಸಾಧ್ಯತೆಗಳನ್ನು ಗುರುತಿಸುವ ಮಾದರಿಯದ್ದಾಗಿರುತ್ತದೆ.

೧.೩ ಅಧ್ಯಯನದ ವ್ಯಾಪ್ತಿ

ಕಾರಂತರು ಓರ್ವ ಪ್ರಯೋಗಶೀಲ ವ್ಯಕ್ತಿಯಾದುದರಿಂದ ಅವರ ಪ್ರಯೋಗಗಳು ಹಲವು ಕ್ಷೇತ್ರಗಳನ್ನು ವ್ಯಾಪಿಸಿಕೊಂಡಿದೆ. ಈ ಪ್ರಯೋಗಗಳು ಅನೇಕ ಸಲ ಒಂದಕ್ಕೆ ಇನ್ನೊಂದು ಪೂರಕವಾಗಿಯೂ ನಡೆದದ್ದಿದೆ. ಪ್ರಸ್ತುತ ಅಧ್ಯಯನದ ವ್ಯಾಪ್ತಿ ಕಾರಂತರ ಬದುಕು ಮತ್ತು ಒಟ್ಟು ಪ್ರಯೋಗಶೀಲತೆಯನ್ನು ಪರಿಚಯಾತ್ಮಕವಾಗಿ ಕೊಟ್ಟು ಅವರು ಶಿಕ್ಷಣ ರಂಗದಲ್ಲಿ ನಡೆಸಿದ ಪ್ರಯೋಗ,

ಚಿಂತನೆಗಳನ್ನಷ್ಟೆ ಅಧ್ಯಯನಕ್ಕೆ ತೆಗೆದುಕೊಂಡಿದೆ. ಹೀಗಾಗಿ ಈ ಸಂಪ್ರಬಂಧದ ವ್ಯಾಪ್ತಿಯು ಬಹಳ ಸ್ಪಷ್ಟವಾಗಿದ್ದು, ಇದಕ್ಕೆ ಕೆಲವು ನಿರ್ದಿಷ್ಟ ಗ್ರಂಥಗಳನ್ನೇ ಮೂಲ ಆಕರಗಳಾಗಿ ಬಳಸಿಕೊಳ್ಳಲಾಗುತ್ತದೆ.

ಮೂಲ ಆಕರಗಳೆಂದು ಗುರುತಿಸಬಹುದಾದ ಶಿವರಾಮ ಕಾರಂತರ 'ಹುಚ್ಚು ಮನಸ್ಸಿನ ಹತ್ತು ಮುಖಗಳು', 'ಸ್ಮೃತಿ ಪಟಲದಿಂದ', ಮಾಲಿನಿ ಮಲ್ಯ ಸಂಪಾದಿಸಿರುವ 'ಶಿವರಾಮ ಕಾರಂತರ ಲೇಖನಗಳು ಸಂ–೨', 'ಸಿರಿಗನ್ನಡ ಪಾಠ ಮಾಲೆ', 'ಓದುವ ಆಟ', 'ಬಾಲಪ್ರಪಂಚ' ಸಂಪುಟಗಳು, 'ವಿಜ್ಞಾನ ಪ್ರಪಂಚ' ಸಂಪುಟಗಳು, 'ಪ್ರಾಣಿ ಪ್ರಪಂಚ' ಸಂಪುಟಗಳು, 'ವಯಸ್ಕರ ಶಿಕ್ಷಣ ಪಠ್ಯ'ಗಳು ಕಾರಂತರ ಮಕ್ಕಳ ಸಾಹಿತ್ಯ ಎಂದು ಗುರುತಿಸಲಾಗುವ ಕತೆ, ಗೀತೆಗಳು ಈ ಅಧ್ಯಯನದ ವ್ಯಾಪ್ತಿಗೆ ಒಳಪಡುತ್ತದೆ. ಕೆಲವು ಪುಸ್ತಕಗಳನ್ನು ಪರಿಚಯಾತ್ಮಕವಾಗಿಯಷ್ಟೇ ಬಳಸಿಕೊಂಡಿದ್ದು, 'ಕಾರಂತರ ಲೇಖನಗಳು ಸಂಪುಟ–೨', 'ಸ್ಮೃತಿ ಪಟಲದಿಂದ', 'ಹುಚ್ಚು ಮನಸ್ಸಿನ ಹತ್ತುಮುಖಗಳು' ಹಾಗೂ ಕಾರಂತರ ಪಾಠಮಾಲೆಗಳನ್ನು ವಿವರವಾಗಿ ಪರಿಶೀಲಿಸಲಾಗಿದೆ. ಇವೆಲ್ಲವುಗಳನ್ನು ವಿಮರ್ಶಾತ್ಮಕ ವಿಶ್ಲೇಷಣೆಯನ್ನು ಮಾಡಲಾಗಿದೆ.

ಕಾರಂತರ ಗ್ರಹಿಕೆಯ ಶಿಕ್ಷಣವನ್ನು ಅವರ ಬೇರೆ ಬೇರೆ ಸಂದರ್ಭದ ಮಾತುಗಳ ಮೂಲಕ ಒಟ್ಟಂದದಲ್ಲಿ ಮರು ನಿರೂಪಿಸಲಾಗಿದೆ. ಅಲ್ಲಲ್ಲಿ ಹರಡಿರುವ ಮಾತಿನ ಕಟ್ಟುಗಳನ್ನೇ ಒಂದು ಸಾವಯವ ಸಂಬಂಧದಲ್ಲಿ ನಿರೂಪಿಸಲಾಗಿದೆ. ಬಾಲವನದ ಪ್ರಯೋಗಗಳು, ಮಕ್ಕಳ ಕೂಟದ ಪ್ರಯೋಗಗಳನ್ನು ಅವುಗಳ ಲಕ್ಷಣದೊಂದಿಗೆ ವಿವರಿಸುತ್ತಾ, ಆ ಎಲ್ಲವುಗಳ ಇತ್ಯಾತ್ಮಕ ಮತ್ತು ನೇತ್ಯಾತ್ಮಕ ಮುಖವನ್ನು ವಿಶ್ಲೇಷಿಸುವುದು ಈ ಅಧ್ಯಯನದ ವ್ಯಾಪ್ತಿಗೆ ಬರುತ್ತದೆ. ಅವರ ಪಠ್ಯದ ಲಕ್ಷಣಗಳನ್ನು, ವಿಶಿಷ್ಟತೆಯನ್ನು ಹೇಳುತ್ತಾ, ಅವುಗಳ ಮಿತಿಯನ್ನೂ ಕೂಡ ಚರ್ಚಿಸಲಾಗುವುದು. ಇನ್ನೊಂದು ಮುಖ್ಯ ಅಂಶವೆಂದರೆ ಕಾರಂತರ ಶಿಕ್ಷಣ ಚಿಂತನೆಯ ಮೇಲೆ ಪ್ರಭಾವ ಬೀರಿರುವ ರೂಸೊ, ಟ್ಯಾಗೋರ್ ಮೊದಲಾದವರ ಪ್ರಭಾವಗಳೇನು ಎಂಬುದನ್ನು ಗುರುತಿಸಿ ಅವರ ಪ್ರಯೋಗಗಳ ಜೊತೆ ಕಾರಂತರ ಪ್ರಯೋಗಗಳನ್ನು ಹೋಲಿಸಿ ನೋಡಲಾಗುತ್ತದೆ.

ಹೀಗೆ ಕಾರಂತರ ಶಿಕ್ಷಣ ಚಿಂತನೆಯ ಸಮಗ್ರ ಸಂಗತಿಗಳನ್ನು ಈ ಅಧ್ಯಯನವು ತನ್ನ ವ್ಯಾಪ್ತಿಗೆ ತೆಗೆದುಕೊಳ್ಳುತ್ತದೆ. ಈ ನಿಟ್ಟಿನಲ್ಲಿ ಇದೊಂದು ಸಮಗ್ರ ಅಧ್ಯಯನವಾಗುತ್ತದೆ.

೧.೪ ಹಿಂದಣ ಅಧ್ಯಯನದ ಹೆಜ್ಜೆಗಳು

ಕಾರಂತರ ಸಾಹಿತ್ಯಮುಖದ ಬೇರೆ ಬೇರೆ ನೆಲೆಗಳು ಕನ್ನಡದಲ್ಲಿ ಅಧ್ಯಯನಕ್ಕೆ ಒಳಗಾಗಿದ್ದರೂ, ಕಾರಂತರ ಶೈಕ್ಷಣಿಕ ಚಿಂತನೆಗಳ ಬಗೆಗೆ, ಅವರ ಪ್ರಯೋಗಶೀಲತೆಯ ಬಗೆಗೆ ಅದರ ಇತ್ಯಾತ್ಮಕ ಮತ್ತು ನೇತ್ಯಾತ್ಮಕ ಮುಖಗಳನ್ನು ಗುರುತಿಸುವಂತೆ ಈವರೆಗೆ ಸಮಗ್ರ ಅಧ್ಯಯನಗಳು ನಡೆದಿಲ್ಲ ಎಂದರೆ

ಆಶ್ಚರ್ಯವಾಗುತ್ತದೆ. ಕಾರಂತರು ಬಹಳ ದೊಡ್ಡ ಪ್ರಮಾಣದಲ್ಲಿ ಶಿಕ್ಷಣದ ಕುರಿತು ತಮ್ಮ ಪ್ರಯೋಗ ವೈಶಿಷ್ಟ್ಯ, ಚಿಂತನೆಗಳನ್ನು ಹೇಳಿಕೊಂಡರೂ, ಕನ್ನಡದ ವಿಮರ್ಶೆಗಳು, ಸಂಶೋಧನೆಗಳು ಅವರ ಈ ಚಿಂತನೆಗಳನ್ನು ಸಮಗ್ರವಾಗಿ ಎಲ್ಲಿಯೂ ಚಿಂತನೆಗೆ ಒಡ್ಡಿಲ್ಲ.

ಬಹಳ ಕ್ವಚಿತ್ತಾಗಿ ಅಲ್ಲಲ್ಲಿ ಈ ಬಗೆಯ ಒಂದಷ್ಟು ಚರ್ಚೆ, ಚಿಂತನೆ, ವಿಮರ್ಶೆಗಳು ನಡೆದಿದೆ. ಇದರಲ್ಲಿ ಸ್ವಲ್ಪ ಮಟ್ಟಿಗೆ ಬಹು ವಿಷಯಗಳನ್ನು ಮತ್ತು ಇತಿಮಿತಿಗಳನ್ನು ಬಹಳ ಮುಕ್ತವಾಗಿ ಚರ್ಚಿಸಿರುವುದು ಡಾ. ಮಹಾಬಲೇಶ್ವರ ರಾವ್ ಅವರ 'ಶಿಕ್ಷಣ – ಕಾರಂತರ ದೃಷ್ಟಿ-ಸೃಷ್ಟಿ' ಎಂಬ ಕೃತಿ. ಮಂಗಳೂರು ವಿ.ವಿ. ಪ್ರಕಟಿಸಿರುವ ಕಾರಂತರ ಲೇಖನಗಳು ಸಂ-೨ರ ಸಂಪಾದಕಿ ಬಿ.ಮಾಲಿನಿ ಮಲ್ಯ ಆ ಸಂಪುಟಕ್ಕೆ ಬರೆದ 'ಸಂಪಾದಕೀಯ ಟಿಪ್ಪಣಿ'ಗಳು ಈ ಬಗೆಗೆ ಸ್ವಲ್ಪ ಹೆಚ್ಚು ಬೆಳಕು ಚೆಲ್ಲುತ್ತದೆ. ಇನ್ನು ಉಳಿದಂತೆ, ಅವರ ಮಕ್ಕಳ ಸಾಹಿತ್ಯದ ಕುರಿತಂತೆ ಡಾ. ಬಿ. ಜನಾರ್ದನ ಭಟ್ ಅವರ 'ಕಾರಂತರ ಮಕ್ಕಳ ಸಾಹಿತ್ಯ' ಎಂಬ ಲೇಖನ, ಡಾ. ಬಿ.ವಿ. ಮಹೀದಾಸ್ ಅವರ, "ಕಾರಂತರು ಮತ್ತು ಶಿಕ್ಷಣ, ಕಾರಂತರ ಶಿಕ್ಷಣದ ಪರಿಕಲ್ಪನೆ" ಎಂಬ ಲೇಖನವನ್ನು ಗುರುತಿಸಬಹುದು. ಇನ್ನುಳಿದಂತೆ, ಕಾರಂತರ ಅಭಿನಂದನ ಗ್ರಂಥ 'ಕಾರಂತ ಪ್ರಪಂಚ'ದಲ್ಲಿ ಬಂದಿರುವ, ಯು.ಎಲ್. ಆಚಾರ್ಯರ 'ಬಾಲ ಜಗತ್ತು ಮತ್ತು ಅದ್ಭುತ ಜಗತ್ತು' ಎಂಬ ಲೇಖನ, ಶೇಖರ ಇಡ್ಯ ರ 'ಶಿಕ್ಷಕ' ಲೇಖನ ಈ ನಿಟ್ಟಿನಲ್ಲಿ ಗಮನಾರ್ಹವಾದುದು. ಶ್ರೀ ನಾಗ ಐತಾಳರು ಸಂಪಾದಿಸಿರುವ 'ಕಾರಂತ ಚಿಂತನ – ಕಡಲಾಚೆಯ ಕನ್ನಡಿಗರಿಂದ' ಪುಸ್ತಕದಲ್ಲಿನ ಎಚ್.ಎಸ್. ಜಯಸ್ವಾಮಿಯವರ ಲೇಖನ, ಮನು ಬಳಿಗಾರ್ ಸಂಪಾದಿಸಿದ 'ಬಹುಮುಖಿ'ಯ ಹಾ.ಮ. ನಾಯಕರ ಲೇಖನಗಳನ್ನು ಇಲ್ಲಿ ಉಲ್ಲೇಖಿಸಬಹುದು. ಇಲ್ಲಿನ ಕೆಲವು ಲೇಖನಗಳಷ್ಟೇ ವಿಮರ್ಶಾತ್ಮಕವಾಗಿದ್ದು, ಉಳಿದಂತೆ ಕೇವಲ ಪರಿಚಯಾತ್ಮಕವಾಗಿ ಅಷ್ಟೇ ಇದೆ.

ಈ ಎಲ್ಲಾ ಅಧ್ಯಯನಗಳನ್ನು ಬಳಸಿಕೊಳ್ಳುತ್ತಾ ಈ ಲೇಖನಗಳು ವ್ಯಕ್ತಪಡಿಸುವ ಮನೋಧರ್ಮಗಳನ್ನು ಜೊತೆಗಿಟ್ಟುಕೊಂಡು ಒಟ್ಟಿನಲ್ಲಿ ಕಾರಂತರ ಚಿಂತನೆಗಳನ್ನು ಮತ್ತು ಪ್ರಯೋಗಗಳನ್ನು ಭಿನ್ನ ಅಯಾಮಗಳಿಂದ ಶೋಧಿಸುತ್ತಾ, ಕಾರಂತರ ಚಿಂತನೆಯ ಅನನ್ಯತೆಯನ್ನು ವಿಶಿಷ್ಟ ಎಂದು ಪರಿಭಾವಿಸುತ್ತಲೇ ಅವುಗಳ ಒಳನೋಟಗಳನ್ನು, ಸೂಕ್ಷ್ಮತೆಗಳನ್ನು, ಮಿತಿಯನ್ನು ತಾತ್ವಿಕವಾಗಿ ಹುಡುಕುವ ಮಾದರಿಯಲ್ಲಿ ಈ ಅಧ್ಯಯನ ನಡೆಯುತ್ತದೆ.

೨. ಕಾರಂತರ ಬದುಕು-ಬರವಣಿಗೆ ಮತ್ತು ಪ್ರಯೋಗಶೀಲತೆ

೨.೧ ಕಾರಂತರ ಬದುಕು-ಬರಹ

೨.೨ ಪ್ರಯೋಗಶೀಲ ಕಾರಂತರು

೨. ಕಾರಂತರ ಬದುಕು-ಬರವಣಿಗೆ ಮತ್ತು ಪ್ರಯೋಗಶೀಲತೆ

೨.೧ ಕಾರಂತರ ಬದುಕು-ಬರಹ

ಕಳೆದ ಶತಮಾನದ ಮೊದಲ ದಶಕದ ಎರಡನೆಯ ವರ್ಷ ಅಕ್ಟೋಬರ್ ತಿಂಗಳಿನ ಹತ್ತನೆಯ ದಿನ ಕಡಲತಡಿಯ ಭಾರ್ಗವ ಎಂದೇ ಪ್ರಸಿದ್ಧರಾದ ಕಾರಂತರನ್ನು ಜಗತ್ತಿಗೆ ನೀಡಿದ ಸಂಭ್ರಮದ ದಿನ. ಕರಾವಳಿಯ ಕೋಟದಲ್ಲಿ ವಾಸಿಸುತ್ತಿದ್ದ ಶ್ರೀ ಶೇಷ ಕಾರಂತ ಮತ್ತು ಶ್ರೀಮತಿ ಲಕ್ಷ್ಮೀ ಕಾರಂತರ ೯ ಮಂದಿ ಮಕ್ಕಳಲ್ಲಿ ಕಾರಂತರು ನಾಲ್ಕನೆಯವರು.

ಕಾರಂತರ ಎಳವೆಯು ಸಮೃದ್ಧಿಯದಾಗಿರದಿದ್ದರೂ, ಕಾರ್ಪಣ್ಯರಹಿತವಾದುದಾಗಿತ್ತು. ತೀರಾ ಚಿಕ್ಕ ವಯಸ್ಸಿನಲ್ಲಿಯೇ ತಮ್ಮ ಪರಿಸರ, ಅದರಲ್ಲಿ ಬೊಬ್ಬಳಿ ತೆರೆಗಳನ್ನು ದಡಕ್ಕೆ ಹೋಲಿಸಲು ಕಡಲು ಮತ್ತು ಹಿನ್ನೆಲೆಗೆ ನಿಂತ ಪಶ್ಚಿಮ ಘಟ್ಟದ ಸಾಲುಗಳು ಕಾರಂತರ ಮೇಲೆ ಪ್ರಭಾವ ಬಿದ್ದಿವೆ.

"ಸಮೀಪದ ನೋಟಕ್ಕೆ ತಳಮಳಭರಿತವಾಗಿಯೇ ಇರುವ ಎಂದೂ ಜಡವಾಗದ, ಎಂದೂ ಸ್ತಬ್ಧವಾಗದ ಆದರೆ ತುಸು ಎತ್ತರದಲ್ಲಿ ನಿಂತು ಅದರ ವಿಶಾಲ ನೋಟವನ್ನು ವೀಕ್ಷಿಸಿದಾಗ ಪರಮ ಸಂತುಷ್ಟ ಜೀವನ ಅವರದ್ದು"[೧] ಎನಿಸುವ ಕಾರಂತರ ಇಡಿಯ ಬದುಕಿಗೊಡ್ಡಿದ ಪ್ರತಿಮೆಯೂ ಅನುಭವಗಳ ಮೂಲಕ ಹಾಯಿಸುತ್ತಾ, ಪೋಷಕ ದ್ರವ್ಯಗಳ ಸಿಂಪರಣೆಯಿಂದ ಹದಗೊಳಿಸುತ್ತಾ ಅನ್ಯಾನ್ಯ ಆಕೃತಿಗಳನ್ನು ಪಡೆದ ಕಾರಂತರ ಸಾಧನೆಯು ವಿಶಿಷ್ಟವಾದುದು.

ಹಳ್ಳಿಯ ಮುಗ್ಧವಾದ, ಮುಕ್ತವಾದ, ತುಂಬು ಕುಟಂಬದ, ಸಾಂಪ್ರದಾಯಿಕ ಮನೆತನ ಒಳ ಜಗತ್ತುಗಳೆರಡೂ ಕಾರಂತರ ಕಲಾದೃಷ್ಟಿಯನ್ನು, ಸಮಷ್ಟಿ ಪ್ರಜ್ಞೆಯನ್ನು ತಿದ್ದಿದುದು. ತನ್ನ ಜೀವನದಲ್ಲಿ ಬೇರೆ ಬೇರೆ ವಿಷಯವನ್ನು ತಿಳಿಯಬೇಕು ಎನ್ನುವ ಅಸ್ಪಷ್ಟ ಆಕಾಂಕ್ಷೆಗೆ ಎಡೆಮಾಡಿಕೊಟ್ಟವು.

ಶಿಕ್ಷಣ ರಂಗದಲ್ಲಿ ಬಾಲಕ ಶಿವರಾಮ ಕಾರಂತರು ಅಂತಹ ಮೇಧಾವಿಯೇನಾಗಿರಲಿಲ್ಲ. ಕಂಠಪಾಠ ಮಾಡಿ ಕಲಿಯುವ ಶಿಕ್ಷಣಕ್ರಮ ಇವರಿಗೆ ಇಷ್ಟವಾಗುತ್ತಿರಲಿಲ್ಲ. ಕಾರಂತರ ವಿದ್ಯಾಭ್ಯಾಸ ಮೊದಲ ದಿನಗಳಲ್ಲಿ ಸರಕಾರೀ ಶಾಲೆಗಳ ಜೊತೆ ಜೊತೆಯಲ್ಲಿಯೇ ಐಗಳ ಮಠಗಳು ಆಗಿದ್ದವು. ಎಳೆಯ ಕಾರಂತರು ದಾಖಲಾದುದು ಮನೆಯ ಸಮೀಪದ ಶಿವಾಲಯದ ಯಾಗಶಾಲೆಯಲ್ಲಿ ನಡೆಯುತ್ತಿದ್ದ "ಸರಕಾರಿ ಶಾಲೆಗೆ" ಆ ಆವರಣದಲ್ಲಿದ್ದ ಗೂಬೆ, ಕಾಡು ಪಾರಿವಾಳ, ಬಾವಲಿ, ಮಾಳಬೆಕ್ಕು ಎಲ್ಲವನ್ನು ಕಾರಂತರು ತಮ್ಮ ಬಂಧು ವರ್ಗಕ್ಕೆ ಸೇರಿಸಿಕೊಂಡಿದ್ದರು ಮುಂದೆ ತಮ್ಮೊಳಗೆ ಮೊಳೆಯಲಿರುವ ಪರಿಸರ ಸಂವಾದಿ ನಿಲುವಿಗೆ ಮೂಲ ಪ್ರೇರಣೆಯನ್ನು ಪಡೆದುಕೊಂಡಿದ್ದರು.

ಕಾರಂತರು ಊರ ನೆರೆಯೂರುಗಳ ಜಾತ್ರೆ, ಬಲಿ ತೆಪ್ಪೋತ್ಸವಗಳಿಗೆ ಕುತೂಹಲದಿಂದ ಹೋಗುತ್ತಿದ್ದರು. ದೇವಸ್ಥಾನಕ್ಕಾಗಿ ಬಡಗಿಗಳು ರಥವನ್ನು ಕೆತ್ತುವಾಗ, ಚಿತ್ರ ಬಿಡಿಸುವಾಗ ಉತ್ಸಾಹದಿಂದ ನೋಡುತ್ತಿದ್ದರು. ಕಲೆಯ ಸಾನ್ನಿಧ್ಯದಲ್ಲಿ ಅನುಭವಿಸುತ್ತಿದ್ದ ಈ ವಿಷಯವನ್ನು ಒಡಲಿನಲ್ಲಿಯೇ ಅದರ ಬಗೆಗಿನ ಅರಿವನ್ನು ವಿಸ್ತರಿಸಿಕೊಳ್ಳಬೇಕೆಂಬ ಹಂಬಲದಿಂದ ಬೀಜವು ಹುದುಗಿಕೊಂಡಿದ್ದಿರಬೇಕು.

ಕೋಟ ಪರಿಸರದಲ್ಲಿ ನಡೆಯುತ್ತಿದ್ದ "ನಾಗಮಂಡಲ" ಎಂಬ ನಾಗಾರಾಧನೆಯಲ್ಲಿ ಇರುವ ನೃತ್ಯ ವಿನ್ಯಾಸಗಳಲ್ಲಿ ಕಾರಂತರ ಆಸಕ್ತಿಯನ್ನು ಕುದುರಿಸಿತು. ಪಾತ್ರಿಯ ಕಲೆಯೊಲಿತ, ಪದಗತಿಗಳೆಲ್ಲವೂ ಆ ಮುಗ್ಧ ಮನಸ್ಸಿನಲ್ಲಿ ಊರಿ ನಿಂತು, ಯಕ್ಷಗಾನದ ಹೆಜ್ಜೆಗಾರಿಕೆಯಂಥ ಕಲಾ ಸೂಕ್ಷ್ಮಗಳ ಪರಿಣತಿಯಲ್ಲಿ ಪರಿಣಿಸಿದವು.

ಹೀಗೆ ಕೌಟುಂಬಿಕ ಸಂಸ್ಕಾರಗಳ, ವಾತಾವರಣಗಳು, ಪ್ರಕೃತಿಯ ಸೊಬಗು, ಸಾಂಸ್ಕೃತಿಕ ಸಂಪತ್ತುಗಳನ್ನು ಕೊಟ್ಟಂತಹ ಕೋಟ ಗ್ರಾಮವು ಕಾರಂತರ ಪ್ರಜ್ಞೆಯನ್ನು ವಿಭಿನ್ನ ಸಂಸ್ಕಾರಗಳಿಗೆ ಒಳಪಡಿಸಿತು.

ಮಾಧ್ಯಮಿಕ ವಿದ್ಯಾಭ್ಯಾಸ ಪಡೆಯುತ್ತಿರುವಾಗ ಕಂಪೆನಿ ನಾಟಕಗಳು, ಹಾಡುಗಳು ಅವರಿಗೆ ಪ್ರಿಯವೆನ್ನಿಸತೊಡಗಿದವು. ಎ.ವಿ. ವರದಾಚಾರ್ಯರ ನಾಟಕ ಕಂಪೆನಿ, ಗುಬ್ಬಿ ಕಂಪೆನಿ, ಶಿರಹಟ್ಟಿ ವೆಂಕೋಬರಾಯರ ಕಂಪೆನಿ ಮುಂತಾದ ಆ ಕಾಲದ ಪ್ರಖ್ಯಾತ ನಾಟಕ ಮಂಡಳಿಗಳ ಮೂಲಕ ಈ ಕಲಾಪ್ರಕಾರದ ವಿವಿಧ ಮುಖಗಳನ್ನು ಗುರುತು ಮಾಡಿಕೊಳ್ಳತೊಡಗಿದರು. ಹೀಗೆ ಅವರಲ್ಲಿ ಕಲಾಪ್ರೇಮ ಹಂತ ಹಂತವಾಗಿ ಮೂಡುತ್ತಿರುವಾಗ ೧೯೨೦ರಲ್ಲಿ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ನಂತರ ಮುಂದಿನ ವಿದ್ಯಾಭ್ಯಾಸಕ್ಕಾಗಿ ಮಂಗಳೂರಿನ ಸರಕಾರಿ ಕಾಲೇಜನ್ನು ಸೇರಿದರು. ಇಲ್ಲಿಂದ ಅವರ ಬದುಕಿನಲ್ಲಿ ಮಹತ್ತರವಾದ ತಿರುವೊಂದನ್ನು ಕಂಡರು. ಆಗ ಗಾಂಧೀಜಿಯವರ ಅಸಹಕಾರದ ಸಂದೇಶ ಇಡೀ ನಾಡಿನಾದ್ಯಂತ ಪಸರಿಸಿದ ಸಮಯ. ಈ ಕರೆಯನ್ನು ಕಡೆಗಣಿಸುವುದು ಕಾರಂತರಿಂದ ಸಾಧ್ಯವಾಗಲಿಲ್ಲ. ೧೯೨೨ನೆಯ ಇಸವಿ, ಫೆಬ್ರವರಿ ತಿಂಗಳ ೧೦ನೆಯ ದಿನಾಂಕವು ಕಾಲೇಜಿನಲ್ಲಿ ಅಭ್ಯಾಸದ ಕೊನೆಯ ದಿನವಾಯಿತು.

ಆ ಮೇಲಿನ ಅಲ್ಪಾವಧಿಯಲ್ಲಿ ಕಾರಂತರು ರಾಷ್ಟ್ರೀಯ ಚಳುವಳಿಯಲ್ಲಿ ಸಕ್ರಿಯ ಭಾಗೀದಾರರಾದರು. ಬೇರೆ ಬೇರೆ ವಿಷಯಗಳ ಬಗೆಗೆ ಉಪನ್ಯಾಸ ನೀಡುವಲ್ಲಿ ಜನರಿಗೆ ಪರಿಚಿತರಾದರು. ಕಾಂಗ್ರೆಸ್ಸಿನ ಪ್ರಚಾರಕ್ಕೋಸ್ಕರ ಊರೂರಿಗೆ ತಿರುಗಿದ ಕಾರಣದಿಂದ ಈ ನೆಲದ ಭೌಗೋಳಿಕ ಲಕ್ಷಣಗಳು, ಜನರ ಜೀವನ ವಿಧಾನಗಳು ತಾವಾಗಿಯೇ ಪರಿಚಿತವಾದವು. ಈ

ಅನುಭವದ ಮೊತ್ತವು ಅವರ ಸಾಹಿತ್ಯ ಕೃತಿಗಳಲ್ಲಿ ಬರುವ ಒಳ ವಿವರಗಳ ಅಧಿಕೃತತೆಗೆ ಸ್ವಲ್ಪ ಮಟ್ಟಿಗೆ ಕಾರಣವಾಯಿತು.

ಸುಖ-ಸಂಕಷ್ಟ, ದಾರಿದ್ರ್ಯ-ಧನ, ಒಳಿತು ಕೆಡುಕುಗಳ ದ್ವಂದ್ವಗಳಿಗೆ ಕಾರಂತರ ಸೃಜನಶೀಲ ಪ್ರಜ್ಞೆಯು ಆಶ್ರಯವನ್ನು ನೀಡುತ್ತಲೇ ಇತ್ತು. ಅವುಗಳನ್ನೆಲ್ಲಾ ಜೋಪಾನವಾಗಿ ತಮ್ಮ ಬರಹಗಳ ಅವಶ್ಯಕತೆಗಳಿಗನುಸಾರವಾಗಿ ಬಳಸಿಕೊಂಡರು.

"ಸಾಮಾಜಿಕ ಅಸಮಾನತೆ ಅನ್ಯಾಯಗಳಿಗೆ ಕೆರಳಿ ಅವರು ನುಡಿಯುವಾಗ ರೂಪಕಾದಿಗಳನ್ನು ಏರ್ಪಡಿಸಿದಾಗ ರಕ್ತಕಾಣಿಕೆಗಳ ದರ್ಶನದಿಂದ ಅವರ ಮನಸ್ಸು ಹಿಮ್ಮೆಟ್ಟಿದುದಲ್ಲ. ವ್ಯಕ್ತಿ ಸ್ವಾತಂತ್ರ್ಯ ಅವರ ಜೀವನದ ಅಡಿಗಲ್ಲು, ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಸ್ವತಂತ್ರನಾದ ವ್ಯಕ್ತಿ ಮಾತ್ರ ಚೈತನ್ಯಪ್ರದನಾಗಬಲ್ಲ. ಅವನ ಸಮಸ್ತ ಶಕ್ತಿಯನ್ನೂ ಬೆಳೆಸುವ ಆವರಣವನ್ನು ಸೃಷ್ಟಿಸಿದಲ್ಲದೆ ಆ ವ್ಯವಸ್ಥೆಗೆ ಬೆಲೆಯೇ ಇಲ್ಲ ಎಂಬುದು ಅವರ ನಂಬಿಕೆ. ವ್ಯಕ್ತಿ ಬೆಳೆದು ಪ್ರತಿಯೊಬ್ಬನೂ ಸತ್ಪ್ರಜೆಯಾಗ ಬೇಕಾದರೆ ತನ್ನ ನಿಷ್ಪಕ್ಷವಾದ ಸ್ವತಂತ್ರವಾದ, ನಿರ್ಭೀತ ಸಲಹೆಯನ್ನು, ಯಾರ ಯಾವ ನಿರ್ಬಂಧವೂ ಇಲ್ಲದೆ ತಿಳಿಸುವಂತಾಗಬೇಕು ಎಂದೇ ತಮ್ಮ ವ್ಯಕ್ತಿ ಗುಣವನ್ನು ಸಮಾಜದ ಹಿತಸಾಧನೆಯ ಕಾರ್ಯಕ್ಕೆ ದುಡಿಸಿದ್ದಾರೆ, ಎಂಬ ಮಾತುಗಳಿಂದ ಅವರ ವ್ಯಕ್ತಿತ್ವ ಎಷ್ಟು ವಿಶಾಲವಾಗಿ ಬೆಳೆದಿದೆ ಎಂಬುದನ್ನು ತಿಳಿಯಬಹುದು.

೧೯೨೬ರ ಹೊತ್ತಿಗೆ ಕಾರಂತರಿಗೆ ಯೋಗಾಸನ, ಪ್ರಾಣಾಯಾಮಗಳ ಬಗೆಗೆ ಆಸಕ್ತಿ ಮೂಡಿತು. ಲೋನಾವಳದ ಕೈವಲ್ಯ ಧಾಮದ ಕುವಲಯಾನಂದರು ಮತ್ತು ಕಾಂಗ್ರಿ ಗುರುಕುಲದವರು ಇವುಗಳ ಶಾಸ್ತ್ರೀಯ ಪರಿಚಯವನ್ನು ಅವರಿಗೆ ಮಾಡಿಸಿಕೊಟ್ಟರು. ಮುಂದೆ ಕಾರಂತರ ಉಪನ್ಯಾಸ ಕಾರ್ಯಕ್ರಮಗಳ ಜೊತೆಗೆ ಯೋಗಾಸನಗಳ ಪ್ರಾತ್ಯಕ್ಷಿತೆಗಳೂ ಸೇರಿಕೊಂಡವು.

ವಿವಾಹವೆನ್ನುವುದು ಇಹದ ಬದುಕಿನ ಸಂಪನ್ನತೆಗೆ ಅನಿವಾರ್ಯವಾದ ಒಂದು ಸಂಸ್ಕಾರವೆನ್ನುವ ಅರಿವು ಕಾರಂತರಲ್ಲಿ ಮೂಡತೊಡಗಿತು. ತನ್ನ ಅಭಿಪ್ರಾಯಗಳಿಗೆ ಸಹಕಾರ ನೀಡುವ ಸಹಧರ್ಮಿಣೀಯ ಅಗತ್ಯವು ಅವರನ್ನು ಕಾಡತೊಡಗಿತು. ಈ ಭಾವ ಬಲಿತು ಆ ಕಾಲಕ್ಕೆ ಅಪೂರ್ವವಾಗಿದ್ದ ಅಂತರ್‌ಜಾತೀಯ ವಿವಾಹದ ಮೂಲಕ ಲೀಲಾ ಅವರನ್ನು ಸಹಧರ್ಮಿಣಿಯನ್ನಾಗಿ ಸ್ವೀಕರಿಸುವುದಕ್ಕೆ ನಾಲ್ಕಾರು ವರ್ಷಗಳೇ ತಗುಲಿದವು.

ಬದುಕು ಮತ್ತು ಬದುಕಿಗೆ ಆಧಾರವಾಗಿರುವ ಸಮಾಜದ ಬಗೆಗಿನ ಆಸ್ಥೆಗಳೇ ಅವರನ್ನು ಬೆಳೆಸಿದವು. ದೇಶದ ಶ್ರೇಷ್ಠ ಸನ್ಮಾನಗಳೆಲ್ಲವೂ ಅವರಿಗೆ ದೊರಕುವಂತೆ ಮಾಡಿದವು. ಜ್ಞಾನಪೀಠ ಪ್ರಶಸ್ತಿ, ಅನೇಕ ವಿಶ್ವವಿದ್ಯಾಲಯಗಳಿಂದ ಗೌರವ ಡಾಕ್ಟರೇಟ್, ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ,

ಕರ್ನಾಟಕದ ಪ್ರತಿಷ್ಠಿತ ಪಂಪ ಪ್ರಶಸ್ತಿ ಮತ್ತು ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿದ್ದರು. ಕಾರಂತರು ಕರಾವಳಿಗೆ ಒಂದು ವರವಾದರು.

ತಮ್ಮ ಸುತ್ತನ ಜನ್ನರನ್ನು ಗಾಢವಾಗಿ ಪ್ರೀತಿಸಿದುದರಿಂದ ವ್ಯಕ್ತಿ ಗೌರವವನ್ನು ಎತ್ತಿ ಹಿಡಿಯುವ ಪ್ರವೃತ್ತಿಯಿದ್ದುದರಿಂದಲೇ, ತಮ್ಮ ಪದ್ಮಭೂಷಣ ಪ್ರಶಸ್ತಿಯನ್ನು ಭಾರತ ಸರಕಾರಕ್ಕೆ ಹಿಂತಿರುಗಿಸುವ ನಿರ್ಲಿಪ್ತಿಯು ಅವರಿಗೆ ಸಾಧ್ಯವಾಯಿತು. ತುರ್ತು ಪರಿಸ್ಥಿತಿಯನ್ನು ಪ್ರತಿಭಟಿಸಿದ ಅವರ ಕೆಲವು ಸಾಲುಗಳು ಹೀಗಿವೆ.

"ಯಾವುದೇ ವ್ಯಕ್ತಿಗೂ ಯಾವುದೇ ನೆಪದಿಂದ ಅನ್ಯ ಪ್ರಜೆಗಳ ವ್ಯಕ್ತಿ ಸ್ವಾತಂತ್ರ್ಯವನ್ನು ಅಪಹರಿಸಲು ಹಕ್ಕಿದೆ ಎಂದು ನಾನು ತಿಳಿಯುವುದಿಲ್ಲ. ಲೇಖಕನಾದ ನಾನು, ಭಾರತದ ಜನಗಳಿಗಾಗಿರುವ ಈ ಅಪಚಾರಗಳನ್ನು ಪ್ರತಿಭಟಿಸಲೇಬೇಕಾಗಿದೆ. ಏನಿಲ್ಲದೆ ಹೋದರೂ ನನ್ನ ಆತ್ಮ ಸಾಕ್ಷಿಗೆ ಸಮಾದಾನ ಕೊಡುವ ಸಲುವಾಗಿ ನನಗೆ ಸಲ್ಲಿಸಿದ ಬಿರುದನ್ನು ಹಿಂತಿರುಗಿಸುತ್ತಿದ್ದೇನೆ" ಎನ್ನುವ ಕಾರಂತರ ಮಾತಿನಿಂದ ಅವರ ವ್ಯಕ್ತಿತ್ವ ಮತ್ತಷ್ಟು ಬೆಳೆಯುತ್ತದೆ. "ನಾನು ಪರಿಪೂರ್ಣನೂ ಆಗಿಲ್ಲ, ಪೂರ್ಣತೆಯ ಒಂದಂಶವೂ ಆಗಿಲ್ಲ"[೩] ಎಂದು ಹೇಳುವ ಕಾರಂತರು ಬರೆದುದು ಅಲ್ಲಿ ಬರೆಯದೆ ಉಳಿಸಿದುದು ಅಧಿಕ. ಆದರೆ ಬರೆದುದೆಲ್ಲವೂ ಪಾದರಸದ ಚುರುಕಿನ ಓಡಾಟವು ಗ್ರಹಿಸಿಕೊಂಡ ಹೊಸ ಹೊಸ ಪ್ರದೇಶಗಳ ಅನುಭವಗಳಿಂದ ಪುಷ್ಟವಾದವುಗಳು. ಭೂ ಭಾಗದ ಚಾರಿತ್ರಿಕ ವಿವರಗಳು ವಾಸ್ತು ವರ್ಣನೆ, ಭೌಗೋಳಿಕಾಂಶಗಳಾಚೆಗೂ ತಮ್ಮ ಬರಹಗಳ ವ್ಯಾಪ್ತಿಯನ್ನು ಕಾರಂತರು ಗುರುತಿಸಿಕೊಂಡಿದ್ದಾರೆ.

ಕಾರಂತರು ಸೃಜನಶೀಲತೆಯ ಬಗ್ಗೆ ಯಾರೂ ಸಂದೇಹಪಡಲು ಅಶಕ್ಯ. ಬಹುಮುಖಿ ಪ್ರತಿಭೆ ಕನ್ನಡ ಸಾಹಿತ್ಯದಲ್ಲೇ ವಿರಳ. ಅವರ ವಿಪುಲ ಸೃಷ್ಟಿ ತಾನೇ ತಾನಾಗಿ ನಿಲ್ಲುವಂಥದ್ದು. ಅವರು ಸೃಷ್ಟಿಸಿದ ಪಾತ್ರಗಳನ್ನು ಅವರು ಜೀವಂತಗೊಳಿಸಬಲ್ಲರು. ಆ ಮೂಲಕ ಒಂದು ಜಗತ್ತನ್ನು ಸೃಷ್ಟಿಸಿದ್ದಾರೆ. ಅವರ ಪಾತ್ರಗಳ ವೈವಿಧ್ಯ ಸಾಕ್ಷಾತ್ ಬ್ರಹ್ಮನೇ ಸೋಲು ಒಪ್ಪಿಕೊಳ್ಳುವಂತಾಗಿದೆ. ಅತೀ ಶ್ರೀಮಂತ ವರ್ಗ ಒಂದನ್ನು ಬಿಟ್ಟು ಉಳಿದೆಲ್ಲಾ ವರ್ಗಗಳು ಅವರ ಜಗತ್ತಿನ್ನಲಿ ಪ್ರತಿನಿಧಿತಗೊಂಡಿದೆ. ಇಷ್ಟು ವೈವಿಧ್ಯಪೂರ್ಣ ಜೀವನ ಸರಣಿಯನ್ನು ಇವರ ಬರಹದಲ್ಲಿ ಸ್ಪಷ್ಟವಾಗಿ ಕಂಡುಬರುತ್ತದೆ. ಇಷ್ಟು ವಿಸ್ತಾರ ದರ್ಶನ ಅವರಲ್ಲಿ ಇದೆ. ಕರ್ನಾಟಕದ ಮೂಲೆ ಮೂಲೆಗೂ ಅವರು ಪ್ರಯಾಣ ಮಾಡಿ ವಿವಿಧ ಸ್ಯಾಂಪಲ್‌ಗಳನ್ನು ಸಂಗ್ರಹಿಸಿದ್ದಾರೆ. ಆಯಾ ವರ್ಗದ ಪರಿಸರದಲ್ಲಿ ಅವರನ್ನು ಹರಿಯ ಬಿಟ್ಟಿದ್ದಾರೆ. ಹುಬ್ಬಳ್ಳಿ, ಹಲಸಂಗಿ, ಸೊಲ್ಲಾಪುರದಲ್ಲಿ ನೆಲೆಸಿದ ಕನ್ನಡಿಗರನ್ನೂ ಅವರವರ ಭಾಷೆಯಲ್ಲಿಯೇ ಚಿತ್ರಿಸಿದ್ದಾರೆ. ಅವರು ಸಾಹಿತ್ಯಕ್ಕಾಗಿ ಬಳಸುವ ಭಾಷೆಯು ಗ್ರಾಂಥಿಕವಾದರೂ ಆಯಾ ಪ್ರದೇಶದ ದೇಶೀಯವಾದ ಒಂದೋ, ಎರಡೋ, ಆಯಕಟ್ಟಿನ ಶಬ್ಧಗಳನ್ನು ಬಳಸಿಕೊಂಡು

ಪ್ರಾದೇಶಿಕ ವಸ್ತುನಿಷ್ಠತೆಯನ್ನು ಕಾಯ್ದುಕೊಳ್ಳುತ್ತಾರೆ. ಹರಿದು ಹಂಚಿಹೋದ ಕರ್ನಾಟಕದ ಭಾಷಿಕ ಏಕತ್ವಕ್ಕೆ ಅವರ ಕೊಡುಗೆ ಅಪೂರ್ವವಾದದ್ದು. ಯಾವ ಕನ್ನಡ ಓದುಗನಿಗೂ, ಅವರ ನಿರೂಪಕ ಭಾಷೆ ಹೊರಗಿನದೆನಿಸುವುದಿಲ್ಲ. ಈ ಬಗೆಯ ಸಾಧಾರಣ ಗ್ರಾಂಥಿಕ ಭಾಷೆ ಕರ್ನಾಟಕದ ಮೂಲೆ ಮೂಲೆಗಳಲ್ಲೂ ಒಂದೇ ಎನಿಸುವಂಥ ಭಾಷೆ ಅವರದು. ಸಾಮಾಜಿಕ ಸ್ಥಳಗಳ ಬಗ್ಗೆ ಹೇಳುವುದಾದರೆ ಯಾವ ವರ್ಗವೂ ಅವರ ಭಾಷೆಯನ್ನು ತನ್ನದಲ್ಲವೆನಿಸುವಂತೆ ಇಲ್ಲ. ಮಧ್ಯಮ ವರ್ಗದವರು ಬಡವರು, ಹಿಂದುಳಿದವರು, ಅರ್ಧಶಿಕ್ಷಿತರು, ಕಲಾವಿದರು, ನರ್ತಕರು, ವೇಶ್ಯೆಯರು, ಚಿತ್ರಕಾರರು, ಯಕ್ಷಗಾನ ಕಲಾವಿದರು, ಕಾರಂತರ ಜಗತ್ತಿನಲ್ಲಿ ಕಂಗೊಳಿಸಿರುತ್ತಾರೆ. ಎಲ್ಲ ಪಾತ್ರಗಳನ್ನು ಹುಮ್ಮಸ್ಸಿನಿಂದ ನೋಡುತ್ತಾರೆ. ಮಾನವತೆಯ ಬಗ್ಗೆ ವ್ಯಾಪಕ ಆಸಕ್ತಿಯೇ ಅವರಲ್ಲಿ ಕಾಣುತ್ತದೆ.

ಬರಹವನ್ನೇ ಪೂರ್ಣಕಾಲಿಕ ಉದ್ಯಮವಾಗಿ ಸ್ವೀಕರಿಸಿದ್ದ ಕಾರಂತರು ಸಾಹಿತ್ಯ ಕ್ಷೇತ್ರಕ್ಕಿತ್ತ ಕೊಡುಗೆಯು ಮಹತ್ತರವಾದುದಾಗಿದೆ. ನಾನ್ನೂರಕ್ಕೂ ಮಿಕ್ಕುವ ಗ್ರಂಥಗಳನ್ನು, ಎಂಟು ನೂರಕ್ಕೂ ಹೆಚ್ಚಾಗಿರುವ ಲೇಖನಗಳನ್ನು ಅವರು ಪ್ರಕಟಿಸಿದ್ದಾರೆ.

೨.೨ ಪ್ರಯೋಗಶೀಲ ಕಾರಂತರು

ಕನ್ನಡ ಗೀತನಾಟಕಗಳು, ರಂಗಭೂಮಿ, ಯಕ್ಷಗಾನ, ಸಿನಿಮಾ, ಪತ್ರಿಕೆ, ಪರಿಸರ ಕಾಳಜಿ, ರಾಜಕೀಯ ವಿವೇಚನೆ ಹೀಗೆ ಬದುಕಿನುದ್ದಕ್ಕೂ ವಿವಿಧ ರೀತಿಯ ಪ್ರಯೋಗಗಳನ್ನು ಮಾಡಿಕೊಂಡು ಬಂದವರು. ಕಾಲೇಜಿನಿಂದ ಹೊರಬಂದ ಕೆಲವೇ ವರ್ಷಗಳಲ್ಲಿ ದೇಶಸೇವೆಯನ್ನು ಮಾಡುತ್ತೇನೆ ಎಂಬ ಭ್ರಮೆಯನ್ನು ಹರಿದುಕೊಂಡು, ಸ್ವಂತಕ್ಕೆ ಸಾಧ್ಯವಾದುದನ್ನು ನಿಷ್ಠೆ, ಪ್ರಾಮಾಣಿಕತೆಗಳಿಂದ ಮಾಡುವುದೇ ನಾಡಿನ ಋಣ ಸಂದಾಯದ ಅತ್ಯುತ್ಕೃಷ್ಟ ವಿಧಾನವೆನ್ನುವ ನಿಲುವಿಗೆ ಅವರು ತಲುಪಿದರು.

ಕಾರಂತರು ಪತ್ರಿಕಾ ಕ್ಷೇತ್ರದಲ್ಲೂ ಪ್ರಯೋಗಗಳನ್ನು ಮಾಡಿದವರು. ಸ್ನೇಹಿತರಾದ ದೇವಣ್ಣ ಪೈಯವರೊಂದಿಗೆ ಸೇರಿ ಕಾರಂತರು 'ವಸಂತ' ಎಂಬ ಮಾಸ ಪತ್ರಿಕೆಯನ್ನು ಆರಂಬಿಸಿದರು. ಈ ಪತ್ರಿಕೆಗೆ ಅವರೇ ಸಂಪಾದಕರಾಗಿ ನಿಯುಕ್ತಿಗೊಂಡರು. ಬಂಗಾಳಿ, ಮರಾಠಿಗಳಂಥ ಸೋದರ ಭಾಷೆಗಳಲ್ಲಿ ಪತ್ರಿಕೋದ್ಯಮವು ಕಾರ್ಯನಿರ್ವಹಿಸುತ್ತಿದ್ದ ರೀತಿಯನ್ನು ಮೆಚ್ಚಿದ ಅವರು ಕನ್ನಡದಲ್ಲಿದ್ದ ಆ ಕೊರತೆಯನ್ನು ತುಂಬಲು ತಮ್ಮ ಮಾಸ ಪತ್ರಿಕೆಯನ್ನು ಬಳಸಿಕೊಂಡರು. ವಸಂತ ಪತ್ರಿಕೆಯ ಖಾಲಿ ಜಾಗಗಳನ್ನು ತುಂಬಿಸುವುದಕ್ಕಾಗಿ ಕಾರ್ಟೂನುಗಳನ್ನು, ವ್ಯಂಗ್ಯ ಚಿತ್ರಗಳನ್ನು ಸ್ವತಃ ಅವರೇ ಬರೆಯತೊಡಗಿದರು. ಪತ್ರಿಕೆಯ ಚಂದಾದಾರರಿಗಾಗಿ ಮೈಸೂರು, ಮದರಾಸು, ಮುಂಬಯಿ,

ಉತ್ತರಕರ್ನಾಟಕದ ಪ್ರಾಂತಗಳನ್ನು ಸುತ್ತಬೇಕಾದಾಗ ಕಾರಂತರು ಸುತ್ತಿದರು. ಆದರೆ ಸಮರ್ಥರಾದ ಲೇಖಕರೂ, ಚಂದಾದಾರರೂ ಇಲ್ಲದೆ 'ವಸಂತ'ವೂ ಬಹುಕಾಲ ಬಾಳಲಿಲ್ಲ.

ಕಾರಂತರು ಪುತ್ತೂರು ಪರಿಸರದ ಹಳ್ಳಿಗಳಲ್ಲಿ ಬೇಸಿಗೆ ಕಾಲದಲ್ಲಿ 'ಶಾಂತಿಶಿಬಿರ'ಗಳನ್ನು ನಡೆಸುವ ಯೋಜನೆಗಳನ್ನು ಹಾಕಿಕೊಂಡರು. ಮಕ್ಕಳನ್ನು ಸಮಾಜ ಸೇವೆಗೆ ಸಿದ್ಧಪಡಿಸುವುದು ಅವರ ಮುಖ್ಯ ಉದ್ದೇಶವಾಗಿತ್ತು. ಒಂದೆಡೆಯಿಂದ ಹಳ್ಳಿಗಳ ಬಗ್ಗೆ ಸರಿಯಾದ ತಿಳುವಳಿಕೆಗಳನ್ನು ಜನರಿಗೆ ಕೊಡುವುದು, ಇನ್ನೊಂದೆಡೆ ಜನಸಮಾನ್ಯರಿಗೆ ವಿವಿಧ ವಿಚಾರಗಳ ಬಗೆಗೆ ಮಾಹಿತಿಗಳನ್ನು ನೀಡುವುದು ದ್ವಿಮುಖ ಲಕ್ಷ್ಯಗಳನ್ನು ಈ ಶಿಬಿರಗಳು ಹೊಂದಿದ್ದವು. ಇವನ್ನು ನಾಲ್ಕಾರು ವರ್ಷಗಳ ಕಾಲ ನಡೆಸಿದರು.

ಪುತ್ತೂರು ತಾಲೂಕಿನ ದಲಿತ ವರ್ಗದವರ ಸಂಕಷ್ಟಗಳನ್ನು ಪ್ರಾಥಮಿಕ ಅವಶ್ಯಕತೆಗಳೂ ಸಿಗದ ಬದುಕನ್ನು ಕಂಡ ಕಾರಂತರು ಅವರಿಗಾಗಿ ಬೆಳ್ಳಾರೆಯಲ್ಲಿ ಬಾವಿಯೊಂದನ್ನು ತೋಡುವ ಪ್ರಯತ್ನವನ್ನು ಮಾಡಿದರು. ಆದರೆ ಅವರ ಪ್ರಯತ್ನಗಳಿಗೆ ಅನೇಕ ತಡೆಗಳು ಬಂದಿತು. ಆದರೂ ಕಾರಂತರು ತಮ್ಮ ಪ್ರಯತ್ನಗಳಿಂದ ವಿಮುಖರಾಗಲಿಲ್ಲ. ಆ ಪ್ರದೇಶದಲ್ಲಿ ಎರಡು ಬಾವಿಗಳನ್ನು ತೋಡಿ ನೀರನ್ನು ಕಂಡೇ ವಿಶ್ರಮಿಸಿದರು.

ಶಾಲೆಯಲ್ಲಿ ನಾಲ್ಕು ಗೋಡೆಗಳ ನಡುವೆ ನಡೆಯುವ ನಿಯಂತ್ರಿತ ಕಲಿಕೆಯು ಮಗುವಿನ ಪ್ರತಿಭಾ ವಿಕಸನಕ್ಕೂ, ಅದರ ಸಮಗ್ರ ವ್ಯಕ್ತಿತ್ವ ನಿರ್ಮಿತಿಗೂ ಸಾಕಾಗಲಾರದೆಂದು ಮಕ್ಕಳ ಕೂಟವನ್ನು ಆರಂಭಿಸಿದರು. ಮ್ಕಕಳಲ್ಲಿದ್ದ ಅನೇಕ ಸುಪ್ತ ಪ್ರತಿಭೆಗಳು ಈ ಸಂದರ್ಭದಲ್ಲಿ ಬೆಳಕಿಗೆ ಬಂದುದನ್ನು ಕಾರಂತರು ಗಮನಿಸಿದರು. ತಮ್ಮ ಪ್ರಯೋಗಗಳು ಯಶಸ್ವಿಯಾಗಬಹುದು ಎಂಬ ಭರವಸೆಯೂ ಅವರಿಗೆ ಮೂಡಿತು. ಮುಂದಿನ ಐದಾರು ವರ್ಷಗಳ ಕಾಲ ಇಂಥ ಶಿಬಿರಗಳನ್ನು ಪುತ್ತೂರಿನ ಕೆಲವು ಊರುಗಳಲ್ಲಿ ನಡೆಸುತ್ತಾ ಬಂದುದು ಕಾರಂತರ ಸಾಧನೆಯಾಗಿದೆ. ಮಕ್ಕಳಲ್ಲಿ ಸಹಬಾಳ್ವೆಯ, ಅನ್ಯಮತ ಸಹಿಷ್ಣುತೆಯ ಮೂಲ ತರಬೇತಿಯನ್ನು ಕೊಡುವಲ್ಲಿಯೂ ಈ ಶಿಬಿರಗಳು ಸ್ವಲ್ಪ ಮಟ್ಟಿಗೆ ಸಫಲವಾದವು.

ಮಕ್ಕಳ ಜಗತ್ತಿಗೆ ಸಂಬಂಧಿಸಿದ ತಮ್ಮ ಪ್ರಯೋಗಗಳನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಮಾಡಬೇಕೆಂದು ಹಂಬಲದಿಂದ ಕಾರಂತರು 'ಪುತ್ತೂರಿನಲ್ಲಿ' ಬಾಲವನವನ್ನು ಸ್ಥಾಪನೆ ಮಾಡಿದರು. 'ನೋಡಿಕಲಿ' 'ಮಾಡಿತಿಳಿ' ಎಂಬ ತತ್ವಗಳನ್ನು ಆಧರಿಸಿ ಆಟದ ಮೂಲಕ ಬೋಧನೋಪಕರಣದ ಮೂಲಕ ಶಿಕ್ಷಣ ಕೊಡುವುದಾಗಿದೆ. ಇದೊಂದು ವಿನೂತನ ಪ್ರಯೋಗವೆನಿಸಿತು.

ನವಿಲು, ಮಂಗ, ಜಿಂಕೆ, ಹಾವುಗಳನ್ನು ಒಳಗೊಂಡ ಒಂದು ಚಿಕ್ಕ ಮೃಗಾಲಯ ಇತ್ತು ಬಾಲವನದ ಒಳಗಡೆ. ಬಾಲವನದಲ್ಲಿ ಮಕ್ಕಳು ಕಲಿಯುವುದಕ್ಕೆ ಬರದಿದ್ದರೂ ಆಟವಾಡುವುದಕ್ಕೆ,

ಪ್ರಾಣಿಗಳನ್ನು ನೋಡುವುದಕ್ಕೆ ಊಟ ಮಾಡುವುದಕ್ಕೆ ಕಿಕ್ಕಿರಿಯುತ್ತಿದ್ದರು. ಮುಂದೆ ವಿದ್ಯಾರ್ಥಿಗಳಿಗಾಗಿ ನಿರ್ಮಾಣವಾದ 'ಬಾಲವನ' ಸರಿಯಾದ ಮೇಲ್ವಿಚಾರಕರಿಲ್ಲದೆ ಪ್ರಾಣಿಗಳು ಸೊರಗಿದವು. ಜೀವ ಬಿಟ್ಟು ಮೂರು ವರ್ಷದ ನಂತರ ಬಾಲವನವನ್ನು ಮುಚ್ಚಿದರು.

ಮೈಸೂರಿನ ಇಲವಾಲದಲ್ಲಿ ವಯಸ್ಕರಿಗಾಗಿ ಶಿಕ್ಷಣ ಕ್ರಮಗಳನ್ನು ರೂಪಿಸಲು ಸಂಶೋಧಕರ ಕಾರ್ಯಾಗಾರವೊಂದನ್ನು ಆಯೋಜಿಸಿದ್ದರು. ವಯಸ್ಕರಿಗಾಗಿ ಹೊಸ ಮಾದರಿಯ ೫ ಪುಸ್ತಕಗಳನ್ನು ಕಾರಂತರು ಬರೆದರು.

ಪಠ್ಯಪುಸ್ತಕ ಬಿಟ್ಟರೆ ಮಕ್ಕಳಿಗೆ ಓದಲು ಕನ್ನಡದಲ್ಲಿ ಬೇರೆ ಪುಸ್ತಕಗಳಿಲ್ಲ, ಅದರಲ್ಲೂ ವಿಜ್ಞಾನ ಮುಂತಾದ ಕ್ಷೇತ್ರಗಳಿಗೆ ಸಂಬಂಧಿಸಿದ ಪುಸ್ತಕಗಳಿಲ್ಲ ಎಂಬುದನ್ನು ಗಮನಿಸಿದ ಶಿವರಾಮ ಕಾರಂತರು ಮಕ್ಕಳಿಗಾಗಿ ಮೊದಲು ಪುಸ್ತಕ ರಚನೆ ಮಾಡಬೇಕು ಎಂದು ಕನ್ನಡದಲ್ಲಿ ಒಂದು ವಿಶ್ವಕೋಶ ರಚಿಸಲು ಮಾಡಿದ ಪ್ರಯತ್ನದ ಫಲವೇ ೧೯೩೬ರಲ್ಲಿ 'ಬಾಲಪ್ರಪಂಚ' ವನ್ನು ಮೂರು ಸಂಪುಟಗಳಲ್ಲಿ ರಚನೆ ಮಾಡಿದರು.

ಕಾರಂತರು 'ಅದ್ಭುತ ಜಗತ್ತು' ವಿಜ್ಞಾನ ರಚಿಸಿದರು. ಒಟ್ಟು ೨೪ ಪುಸ್ತಕಗಳ ಯೋಜನೆಯನ್ನು ಸಿದ್ಧಪಡಿಸಿದ ಕಾರಂತರು ಸರಕಾರದಿಂದ ಮತ್ತು ಸಾರ್ವಜನಿಕರಿಂದ ಯಾವುದೇ ಬಗೆಯ ಪ್ರೋತ್ಸಾಹ ದೊರೆಯದಿದ್ದಾಗ ಆ ಯೋಜನೆಯನ್ನು ಕೈಬಿಟ್ಟರು.

ಡಾ. ಶಿವರಾಮ ಕಾರಂತರು ಮಕ್ಕಳ ರಂಗಭೂಮಿಯ ಅಪಾರ ಸಾಧ್ಯತೆಗಳ ಬಗ್ಗೆ ಹಲವು ಹತ್ತು ಬಗೆಯ ಪ್ರಯೋಗಗಳನ್ನು ಮಾಡಿದ್ದಾರೆ. ಇವರು ತಮ್ಮ ನಾಟಕ ಪ್ರಯೋಗಗಳನ್ನು ಪ್ರದರ್ಶನಗಳನ್ನು, ನಾಟಕ ಕೃತಿ ರಚನೆಯನ್ನು ಮಕ್ಕಳ ರಂಗಭೂಮಿ ಎನ್ನುವ ಶೀರ್ಷಿಕೆಯಲ್ಲಿ ನಡೆಸಲಿಲ್ಲ ಎನ್ನುವುದನ್ನು ಹೊರತು ಪಡಿಸಿದರೆ ಅವರು ರಚಿಸಿದ ಪ್ರಯೋಗಿಸಿದ ೧೦೦ಕ್ಕೂ ಹೆಚ್ಚು ನಾಟಕ ಕೃತಿಗಳು ಮಕ್ಕಳ ರಂಗಭೂಮಿಗೆ ಅವರು ನೀಡಿದ ಅಪಾರ ಕೊಡುಗೆಯೇ ಆಗಿದೆ. ಯಾವ ಸೌಲಭ್ಯವೇ ಇಲ್ಲದ ದಕ್ಷಿಣ ಕನ್ನಡ ಜಿಲ್ಲೆಯ ಹಲವಾರು ಕುಗ್ರಾಮಗಳಿಗೆ ಕಾರಂತರ ಪ್ರಯತ್ನದಿಂದ ನಾಟಕ ನೋಡುವ ಭಾಗ್ಯವು ದೊರೆಯಿತು.

ಮಕ್ಕಳ ನಾಟಕದಲ್ಲಿ ಇರುವ ಕೊರತೆಯನ್ನು ಕಾರಂತರು ೧೯೩೮ರಲ್ಲಿ ಪ್ರಕಟಗೊಂಡ ಜಯಕರ್ನಾಟಕ ಪತ್ರಿಕೆಯಲ್ಲಿ ಹೀಗೆ ಹೇಳಿದ್ದಾರೆ. "ನಾಟಕವೆಂದರೆ ರಾಮರಾಜ್ಯ, ವಿಯೋಗ, ಪ್ರಹ್ಲಾದ ಚರಿತ್ರೆ, ಪ್ರಹ್ಲಾದ, ಭರತರು ಚಿಕ್ಕ ಪ್ರಾಯದವರಾದರೂ ಬೆಳೆದ ಬುದ್ಧಿಯವರು ಎಂಬುದು ನಮ್ಮ ನೆನಪಿನಲ್ಲಿರಬೇಕು. ಅಂಥ ನಾಟಕಗಳನ್ನು ಕಂಠಪಾಠ ಮಾಡಿಸಿದರೆ ಯಾವ ಪುರುಷಾರ್ಥವೂ ಆಗಲಾರದು. ಅವರು ಆಡುವ ನಾಟಕದ ಭಾವನೆಗಳು ಅವರ ಮಿತಿಗೆ ಸಿಕ್ಕಬೇಕು. ಅಲ್ಲದೆ ಮಕ್ಕಳ ನಾಟಕಗಳು ಸ್ವತಂತ್ರ ಮಾರ್ಗದ್ದು ಆಗಿದ್ದರೇನೇ ಒಳಿತು. ಅವರ ಮಾತುಗಳೇ ಅವರ ಬಾಯಿಂದ

ಬಂದರೆ ಅವರು ಏನು ಕಲ್ಪಿಸುತ್ತಾರೆ ಎಂದು ನಮಗೂ ತಿಳಿಯುವುದು. ಅಲ್ಲದೆ ಸ್ವತಂತ್ರವಾಗಿ ಅಲ್ಲಿಂದಲೇ ಮಕ್ಕಳು ಆಡುವ ನಾಟಕ ಭಾಷೆಯ ನೈಸರ್ಗಿಕ ರೀತಿಯ ಉರು ಹಾಕಿ ಉಗುಳಿದ ಮಾತುಗಳಿಂದ ಎಂದೂ ಬರಲಾರದು”[೪]. ಹೀಗೆ ಕಾರಂತರು ಇದ್ದುದನ್ನು ಒಪ್ಪಿಕೊಳ್ಳದೆ ನಾಟಕ ಕ್ಷೇತ್ರದಲ್ಲಿ ಸಾಕಷ್ಟು ಕ್ರಾಂತಿ ಎಬ್ಬಿಸಿದರು.

ಭಾವಜೀವನಕ್ಕೊಂದು ಮುಖದಂತಿದ್ದ ನಮ್ಮೀ ಯಕ್ಷಗಾನ ಪರಂಪರೆ ಉಳಿಯಬೇಕು ಬೆಳೆಯಬೇಕೆಂದು ಕಾರಂತರು ಯಕ್ಷಗಾನದ ಕಡೆಗೆ ಹೆಜ್ಜೆಹಾಕಿದರು. ಯಕ್ಷಗಾನದ ಅವನತಿ, ಹಿಂಸೆ, ಅಪಚಾರಗಳ ಅರಿವಿದ್ದು, ಅರಿವಿಲ್ಲದೆಯೇ, ಜನಗಳ ಕೈಯಲ್ಲಿ ನಡೆಯುತ್ತಿದೆಯಲ್ಲ ಎಂಬ ಖೇದದಿಂದ, ಈ ಕಲೆಯ ಪೂರ್ವಸಂಪ್ರದಾಯ, ಶಕ್ತಿ ಎಲ್ಲಿದೆ, ಚೆಲುವು ಎಲ್ಲಿದೆ, ಅದರ ಶಕ್ತಿ ಹೇಗೆ ಹೆಚ್ಚಿಸಬಹುದು, ಈ ಕಲೆ ಹೇಗೆ ಮನ್ನಣೆ ಪಡೆದೀತು ಎಂದು ವಿವೇಚಿಸಲು ಕಾರಂತರು ಮುಂದಾದರು.

‘ಕಿನ್ನರ ನೃತ್ಯ’ ಅವರ ಆರಂಭದ ಯಕ್ಷಗಾನ ಪ್ರಯೋಗ. ಹಳೆಯ ಯಕ್ಷಗಾನ ಪ್ರಸಂಗಗಳನ್ನೇ ಎತ್ತಿಕೊಂಡು ಹೊಸ ನೃತ್ಯ ಪ್ರಯೋಗಗಳನ್ನು ಪುತ್ತೂರಿನಲ್ಲಿ ನಡೆಯುತ್ತಿದ್ದ ನವರಾತ್ರಿ ಉತ್ಸವ ಕಾಲದಲ್ಲಿ ನಡೆಯಿಸತೊಡಗಿದರು. ಗದ್ಯ ಸಾಹಿತ್ಯ ರಚನೆಯಲ್ಲಿ ತನ್ನದೇ ಆದ ಒಂದು ಶೈಲಿಯನ್ನು ನಿರ್ಮಾಣ ಮಾಡಿಕೊಂಡ ಕಾರಂತರು ಯಕ್ಷಗಾನ ಕಲೆಯ ಸಾಕಷ್ಟು ವಿಸ್ತಾರವಾದ ಪರಿಚಯ, ಅಭ್ಯಾಸ ಪರಿಶ್ರಮಗಳುಳ್ಳವರಾಗಿ ‘ಯಕ್ಷಗಾನ ಬಯಲಾಟ’ ಗ್ರಂಥವನ್ನು ಬರೆದು ಪ್ರಕಟಿಸಿದರು. ಅನಂತರ ಕಾರಂತರು ಯಕ್ಷಗಾನ ‘ಬ್ಯಾಲೆ’ಗಳನ್ನು ರೂಪಿಸತೊಡಗಿದರು. ಭೀಷ್ಮವಿಜಯ ಮತ್ತು ಅಭಿಮನ್ಯು ವಧೆ, ಸೈಂಧವವಧೆ, ‘ಬ್ಯಾಲೆ’ಗಳನ್ನು ಬೇರೆ ಬೇರೆ ಕಡೆ ಪ್ರದರ್ಶಿಸಿದರು. ಜನರಿಂದ ಉತ್ತಮವಾದ ಪ್ರತಿಕ್ರಿಯೆಯು ಬಂತು. ನಂತರ ೧೯೬೦ರಲ್ಲಿ ‘ಬಭ್ರುವಾಹನ ಕಾಳಗ’ ಮತ್ತು ‘ರತಿಕಲ್ಯಾಣ’ ಬ್ಯಾಲೆಗಳನ್ನು ಎರಡನೇ ಬಾರಿಗೆ ಪ್ರಯೋಗ ಮಾಡಿದರು. ಈ ಪ್ರಯೋಗದಲ್ಲಿ ಆರ್ಥಿಕ ಸ್ಥಿತಿ ನಿರೀಕ್ಷಿತ ಮಟ್ಟವನ್ನು ಮುಟ್ಟಲಿಲ್ಲ ಆದರೂ ತಮ್ಮ ಪ್ರಯತ್ನವನ್ನು ಮುಂದುವರಿಸಿ ೧೯೬೮ರಲ್ಲಿ ‘ಕೃಷ್ಣಾರ್ಜುನ’ ಯಕ್ಷಗಾನ ಬ್ಯಾಲೆಯನ್ನು ರೂಪಿಸಿ ಪ್ರದರ್ಶಿಸುವ ಶ್ರಮವನ್ನು ಅವರು ವಹಿಸಿದರು.

ಕಾರಂತರು ಚಲನಚಿತ್ರ ಕ್ಷೇತ್ರದಲ್ಲಿಯೂ ಕೈಯಾಡಿಸಿದ್ದಾರೆ. ಇವರ ‘ಡೊಮಿಂಗೋ’ ಮತ್ತು ‘ಸಾವಿರ ಮಿಲಿಯ’ ನಾಟಕವನ್ನು ಚಲನಚಿತ್ರವನ್ನಾಗಿ ಮಾಡುವ ಕನಸನ್ನು ಕಂಡರು. ಇದಕ್ಕೆ ಬೇಕಾಗಿ ಜರ್ಮನಿಯಿಂದ ಜೇಸ್‌ಐಕಾನ್ ಕಂಪೆನಿಯವರ ಸಿನೆಮಾ ಕೆಮರಾವನ್ನು ತೆಗೆದುಕೊಂಡರು. ಮೊದಲಿಗೆ ಡೊಮಿಂಗೋ ನಾಟಕವನ್ನು ಚಿತ್ರ ಕಥನಕ್ಕೊದಗುವ ರೀತಿಯಲ್ಲಿ ಬಿಡಿ ದೃಶ್ಯಗಳನ್ನು ಬರೆದು ಪುತ್ತೂರಿನ ಕೆಲವು ಉಪಾಧ್ಯಾಯರನ್ನು ವಿದ್ಯಾರ್ಥಿಗಳನ್ನು ‘ಡೊಮಿಂಗೋ’ ನಾಟಕದಲ್ಲಿ

ಪಾತ್ರಧಾರಿಗಳನ್ನಾಗಿ ಮಾಡಿದರು. ಬಹಿರಂಗ ದೃಶ್ಯಗಳಿಗೆಲ್ಲ ಪುತ್ತೂರಿನ ಸುತ್ತಮುತ್ತಣ ಜಾಗಗಳಲ್ಲಿ ಆರಿಸಿದರು.

ಪುತ್ತೂರು ತಾಲೂಕಿನ ಮಕ್ಕಳ ಶಿಬಿರಗಳಲ್ಲಿ ಇವರ ಚಲನಚಿತ್ರ ಪ್ರದರ್ಶನಕ್ಕೆ ಸಿದ್ಧತೆ ನಡೆಯಿತು. ಆದರೆ ತಾಂತ್ರಿಕ ತೊಂದರೆಯಿಂದ ಇವರ ಚಲನಚಿತ್ರ ರೀಲುಗಳಿಗೆ ಬೆಂಕಿ ತಗಲಿ ಚಲನಚಿತ್ರ ಸುಟ್ಟು ಹೋಯಿತು.

ಸಾಮಾಜಿಕ ಕಥೆಯನ್ನು ಬರೆದು ಅದನ್ನು ಚಲನಚಿತ್ರವನ್ನಾಗಿ ಮಾಡುವ ಆಸೆ ಮೂಡಿತು. ಪುತ್ತೂರಿನ ಆಸು ಪಾಸಿನ ದೃಶ್ಯಗಳನ್ನೆ ಚಲನಚಿತ್ರಕ್ಕೆ ಅಳವಡಿಸಿಕೊಂಡರು. ಇವರ ಹೊಸ ಚಲನಚಿತ್ರವಾದ 'ಭೂತ ರಾಜ್ಯ' ಚಲನಚಿತ್ರದ ಪ್ರದರ್ಶನಕ್ಕೆ ಪುತ್ತೂರಿನಲ್ಲಿ ಅನುಮತಿ ದೊರೆಯಿತಾದರೂ ಮುಂದೆ ಮೂಕ ಚಿತ್ರಗಳಿಗೆ ಗಿರಾಕಿ ಇಲ್ಲದ ಹೊಸ ಪರಿಸ್ಥಿತಿಯೊಂದು ಕಾಣಿಸಿಕೊಂಡಿತು. ಚಲನಚಿತ್ರ ಪ್ರಯತ್ನವನ್ನು ಮರೆತುಕೊಳ್ಳುವುದಕ್ಕಾಗಿ ಫಿಲ್ಮನ್ನು ತುಂಡು ತುಂಡಾಗಿ ಮಾಡಿ ಬಾಲವನಕ್ಕೆ ಬಂದು ಹೋಗುತ್ತಿದ್ದ ಮಕ್ಕಳಿಗೆ ಹಂಚಿ ಬಿಟ್ಟರು.

ಕಾರಂತರು ಬದುಕಿನ ಪ್ರತಿ ಹಂತದಲ್ಲೂ ಹೊಸ ಹೊಸ ಪ್ರಯೋಗಗಳನ್ನು ಮಾಡುತ್ತಲೇ ಬದುಕಿನ ಬೇರೆ ಬೇರೆ ಮುಖಗಳನ್ನು ದರ್ಶಿಸಿದರು. ಇಂತಹ ಪ್ರಯೋಗಶೀಲತೆ ಹಲವು ಸಲ ಪೂರ್ಣ ಯಶಸ್ವಿಯಾಗದಿದ್ದರೂ ಅವರ ವ್ಯಕ್ತಿತ್ವದ ಬಹುಮುಖತೆಯನ್ನು ಎತ್ತಿ ತೋರಿಸುತ್ತದೆ.

ಸಂದರ್ಭಸೂಚಿ

೧. ಶಿವರಾಮ ಕಾರಂತ : 'ಹುಚ್ಚು ಮನಸ್ಸಿನ ಹತ್ತು ಮುಖಗಳು' ಎಸ್.ಬಿ.ಎಸ್ ಪಬ್ಲಿಷರ್ಸ್ ಡಿಸ್ಟ್ರಿಬ್ಯೂಟರ್ಸ್, ಬೆಂಗಳೂರು, ೨೦೦೪ ಪುಟ ೯

೨. ವಿ. ಸೀತಾರಾಮಯ್ಯ : 'ಕಾರಂತ ಪ್ರಪಂಚ' ಅಭಿನಂದನ ಗ್ರಂಥ, ಕಾರಂತ ಅಭಿನಂದನ ಸಮಿತಿ ಗೀತಾ ಬುಕ್ ಹೌಸ್, ಮೈಸೂರು ೧೯೬೯ ಪುಟ ೭

೩. ಶಿವರಾಮ ಕಾರಂತ : 'ಹುಚ್ಚು ಮನಸ್ಸಿನ ಹತ್ತು ಮುಖಗಳು' ಎಸ್.ಬಿ.ಎಸ್ ಪಬ್ಲಿಷರ್ಸ್ ಡಿಸ್ಟ್ರಿಬ್ಯೂಟರ್ಸ್ ಬೆಂಗಳೂರು ೨೦೦೪ ಪುಟ ೩

೪. ಶಿವರಾಮ ಕಾರಂತ : 'ಸ್ಮೃತಿ ಪಟಲದಿಂದ' ರಾಜಲಕ್ಷ್ಮಿ ಪ್ರಕಾಶನ ಬೆಂಗಳೂರು ೧೯೭೭ ಪುಟ ೨೧೬

೩. ಶಿವರಾಮ ಕಾರಂತರ ಶೈಕ್ಷಣಿಕ ಚಿಂತನೆಗಳು ಮತ್ತು ಪ್ರಯೋಗಗಳು

೩.೧ ಕಾರಂತರ ಗ್ರಹಿಕೆಯ ಶಿಕ್ಷಣ

೩.೧.೧ ಜ್ಞಾನ – ಜೀವನ : ನಡುವೆ ಕಂದರ

೩.೧.೨ ಕಲಿಕೆ – ಅಭಿರುಚಿ

೩.೧.೩ ಸೃಷ್ಟಿಕಾರತ್ವ

೩.೧.೪ ಶಿಕ್ಷಣ : ವಯಸ್ಸು ಮತ್ತು ಮನಸ್ಸು

೩.೧.೫ ಕ್ರಿಯಾಶೀಲ ಚಟುವಟಿಕೆಗಳು

೩.೨ ಕಾರಂತರ ಶೈಕ್ಷಣಿಕ ಚಿಂತನೆಯ ಮೇಲಿನ ಪ್ರಭಾವಗಳು

೩.೩ ಕಾರಂತರ ಶೈಕ್ಷಣಿಕ ಪಠ್ಯಗಳು: ವಿಶಿಷ್ಟತೆ ಮತ್ತು ಅನನ್ಯತೆ

೩.೩.೧ ವಿಶಿಷ್ಟತೆ ಮತ್ತು ಅನನ್ಯತೆ

೩.೩.೨ ಪಠ್ಯ ಪುಸ್ತಕದ ಮಿತಿಗಳು

೩.೪ ಕಾರಂತರು ಮಕ್ಕಳ ಶಿಕ್ಷಣದಲ್ಲಿ ನಡೆಸಿದ ಪ್ರಯೋಗಗಳು

೩.೪.೧ ಮಕ್ಕಳ ಕೂಟ

೩.೪.೨ ಬಾಲವನ

೩.೫ ಕಾರಂತರ ಮಕ್ಕಳ ಸಾಹಿತ್ಯ: ವಸ್ತು ವೈವಿಧ್ಯತೆ, ವಿಶಿಷ್ಟತೆ

೩.೫.೧. ಕಾರಂತರ ಮಕ್ಕಳ ಸಾಹಿತ್ಯ ಕೃತಿಗಳು

೩.೫.೧.೧ ಕಾರಂತರ ಮಕ್ಕಳ ನಾಟಕಗಳು

೩.೫.೧.೨ ಕಾರಂತರ ಮಕ್ಕಳ ಗದ್ಯಕೃತಿಗಳು

೧.೫.೧.೩ ಕಾರಂತರ ಮಕ್ಕಳ ಪದ್ಯಗಳು

೩.೫.೨. ಕಾರಂತರ ಸೃಜನೇತರ ಕೃತಿಗಳು

೩.೫.೩ ಕಾರಂತರ ಮಕ್ಕಳ ಸಾಹಿತ್ಯದ ವಿಶಿಷ್ಟತೆ

೩.೫.೪ ವಯಸ್ಕರ ಶಿಕ್ಷಣ ಮತ್ತು ಕಾರಂತರು

೩. ಶಿವರಾಮ ಕಾರಂತರ ಶೈಕ್ಷಣಿಕ ಚಿಂತನೆಗಳು ಮತ್ತು ಪ್ರಯೋಗಗಳು

೩.೧ ಕಾರಂತರ ಗ್ರಹಿಕೆಯ ಶಿಕ್ಷಣ

ಡಾ. ಶಿವರಾಮ ಕಾರಂತರ ಶೈಕ್ಷಣಿಕ ಪ್ರಯೋಗಶೀಲತೆಯನ್ನು ಗಮನಿಸಬೇಕಾದಲ್ಲಿ ಅವರ ಶಿಕ್ಷಣದ ಗ್ರಹಿಕೆಗಳನ್ನು ಸ್ಪಷ್ಟಪಡಿಸಿಕೊಳ್ಳಬೇಕು. ಕಾರಂತರು ತಮ್ಮ ಮಾತು – ಬರವಣಿಗೆಗಳೆರಡರಲ್ಲೂ ದಶಕಗಳುದ್ದಕ್ಕೂ ಶಿಕ್ಷಣ ಎಂದರೆ ಏನು? ಯಾವುದು ಶಿಕ್ಷಣ? ಶಿಕ್ಷಣ ಹೇಗಿರಬೇಕು? ತರಗತಿಯ ಒಳಗಿನ ಶಿಕ್ಷಣ ಮತ್ತು ನಿತ್ಯ ಜೀವನದಲ್ಲಿ ಉಪಯೋಗ ಮೊದಲಾದ ವಿಷಯಗಳನ್ನು ಮತ್ತೆ ಮತ್ತೆ ಪರಿಷ್ಕರಿಸುತ್ತಾ, ಸ್ಪಷ್ಟಗೊಳಿಸುತ್ತಾ, ಪುನರ್ ರೂಪಿಸುತ್ತಿದ್ದರು. ಹೀಗಾಗಿ ಅವರ ಪ್ರಯೋಗದ ಆರಂಭದ ಕಾಲದಲ್ಲಿ ಶಿಕ್ಷಣ ಎಂಬುದನ್ನು ಅವರು ಗ್ರಹಿಸಿಕೊಂಡ ರೀತಿಗೂ, ಪ್ರಯೋಗವನ್ನು ಮಾಡುತ್ತಾ, ಅವರ ಯಶಸ್ಸು ಮತ್ತು ಅವರ ಅಪಯಶಸ್ಸುಗಳನ್ನು ಪ್ರತ್ಯೇಕವಾಗಿ ನೋಡುತ್ತಿದ್ದಂತೆ ಅದನ್ನು ಇನ್ನಷ್ಟು ಪರಿಷ್ಕಾರ ಮಾಡಿಕೊಳ್ಳುತ್ತಿದ್ದರು. ಹೀಗೆ ಸದಾ ಪರಿಷ್ಕಾರದ ಮೂಲಕ ಪುನರ್ ಸಂಯೋಜಿಸಿಕೊಳ್ಳುತ್ತಿದ್ದ ಮತ್ತು ತಮ್ಮ ಚಿಂತನೆಗಳನ್ನು ಸಮಕಾಲೀನಗೊಳಿಸುತ್ತಿದ್ದ ಕಾರಂತರ ಪ್ರಯೋಗಶೀಲತೆಯನ್ನು ಗ್ರಹಿಕೆಗಳೆರಡೂ ಕುತೂಹಲದ ಸಂಗತಿಗಳೇ ಆಗಿದ್ದು, ಅವುಗಳನ್ನು ವರ್ತಮಾನಯೋಗ್ಯವನ್ನಾಗಿಸುತ್ತಿದ್ದರು.

ಶಿಕ್ಷಣ ಎಂಬುದು ಪ್ರತ್ಯೇಕವಾಗಿ ನಿರ್ಮಿಸಲ್ಪಟ್ಟ ಶಾಲಾ – ಕಾಲೇಜುಗಳಲ್ಲಿ ಕಟ್ಟಡಗಳಲ್ಲಿ ಸಾಗುವುದಷ್ಟೇ ಅಲ್ಲ, ಬದಲಾಗಿ ಮಕ್ಕಳು ಸುತ್ತಲನ್ನು ನೋಡುತ್ತಾ, ಮಾಡುತ್ತಾ ಸ್ವಯಂ ಆಗಿ ಕಲಿಯುತ್ತಾ ಹೋಗುವುದು ಕೂಡಾ ಹೌದು. ಉದ್ಯೋಗಾವಕಾಶದ ಜೊತೆಗೆ ಸಂಬಂಧವಿಲ್ಲದ ಓದು, ಬರಹ ಗಣಿತ ಇತ್ಯಾದಿಗಳನ್ನು ಒದಗಿಸಬೇಕು. ಅವರು ಈಗ ಶಿಕ್ಷಣವನ್ನು ಹತ್ತಾರು ವರ್ಷ ಪಡೆದಾದ ಮೇಲೂ ನಿರುದ್ಯೋಗ ಸಮಸ್ಯೆಯಿಂದ ಮುಕ್ತನಾಗಬಹುದು ಎಂದು ಭರವಸೆಯಿಲ್ಲದ ಒಂದು ಶಿಕ್ಷಣ ವ್ಯವಸ್ಥೆ ಇದು ಎಂದು ಉಲ್ಲೇಖಿಸುತ್ತಾರೆ.

“ಓದು ಯಾಕೆ ಬೇಕು, ಬರಹ ಯಾಕೆ ಬೇಕು ಎಂದು ತಿಳಿಯದ ಮಕ್ಕಳನ್ನು ಕುಳ್ಳಿರಿಸಿಕೊಂಡು ಓದಿನಲ್ಲಿ ಸ್ವಾರಸ್ಯವಿದೆ, ಬರಹದಿಂದ ನಮ್ಮ ಮನಸ್ಸನ್ನು ತೋಡಿಕೊಳ್ಳುವುದಕ್ಕೆ ಬರುತ್ತದೆ ಎಂಬ ಉದ್ದೇಶ ಸಾಧಿಸಬೇಕು. ಇಲ್ಲಿ ಕಲಿತ ಗಣಿತ, ನಾಳೆ ನಡೆಸುವ ವಿವಿಧ ವ್ಯವಹಾರಗಳಲ್ಲಿ ಅನಿವಾರ್ಯ ಎಂಬ ಭಾವನೆಗೆ ಪೀಠಿಕೆ ಹಾಕಬೇಕು. ಮಕ್ಕಳಿಗೆ ಕಲಿಸುವ ವಿಜ್ಞಾನ, ಸಮಾಜಶಾಸ್ತ್ರ, ಚರಿತ್ರೆ ಭೂಗೋಲದಂತಹ ವಿಷಯಗಳು ಕೂಡಾ ನಾಳಿನ ಬುದ್ಧಿಯ ಬೆಳವಣಿಗೆಗೆ,

ಜ್ಞಾನ ಸಂಪಾದನೆಗೆ ಅವಶ್ಯಕವಾದ ತೃಷೆಯ ರೂಪವನ್ನು ಹೊಂದಿದಾಗ ಮಾತ್ರವೇ ಪ್ರಾಥಮಿಕ ಹಂತದಲ್ಲಿ ನಾವು ಕೊಡುವ ಸರಳ ಪಾಠಗಳು ತಮ್ಮ ಗುರಿಯನ್ನು ಸಾಧಿಸಬಹುದು ಇಲ್ಲವಾದರೆ ಇಲ್ಲ"[೧] ಎನ್ನುತ್ತಾರೆ. ಈ ಮಾತುಗಳೇ ಕಾರಂತರು ಶಿಕ್ಷಣವನ್ನು ಗ್ರಹಸಿಕೊಂಡ ಅವರ ಉದ್ದೇಶವನ್ನು ತಿಳಿದುಕೊಂಡ ಸೃಜನಾತ್ಮಕ ನೆಲೆಗೆ ಸಾಕ್ಷಿಯಾಗಿವೆ. ಕಲಿಕೆಗೆ ಇನ್ನಷ್ಟೇ ತೆರೆದುಕೊಳ್ಳಬೇಕಾದ ಶಿಶುವಿನ ಕಲಿಕೆ ಎನ್ನುವುದು ಆಸಕ್ತಿದಾಯಕವಾಗಬೇಕೆಂದರೆ ಈ ಬಗೆಯ ಚಿಂತನೆಯನ್ನು ರವಾನಿಸಬೇಕಾಗಿದೆ. ಆಗ ಮಾತ್ರ ಕಲಿಯುವ ಪ್ರಕ್ರಿಯೆಯ ಒಳಗೆ ಕ್ರಿಯಾತ್ಮಕ ಸಹಭಾಗಿತ್ವವನ್ನು ಕಾಣಬಹುದು, ಇಲ್ಲವಾದರೆ ಯಾಂತ್ರಿಕವಾಗುತ್ತದೆ.

ಕಲಿಯುವ ಮಕ್ಕಳ ವಯಸ್ಸು, ಅವರ ಅಭಿರುಚಿ, ಆಸಕ್ತಿಗಳು ಮಕ್ಕಳ ಇತಿಮಿತಿಗಳನ್ನು ತಿಳಿದು ಅದರ ಮೂಲಕ ನಾವು ಕೊಡುವ ಶಿಕ್ಷಣದ ವಸ್ತು, ವಿಧಾನಗಳನ್ನು ನಿರ್ಣಯಿಸಬೇಕು ಎಂಬ ಕಾಳಜಿ ಕಾರಂತರಲ್ಲಿತ್ತು. ವರ್ತಮಾನದ ಶಿಕ್ಷಣ ಕ್ರಮಕ್ಕೆ ಕಾರಂತರು ಬಹು ಕಟುವಾಗಿಯೇ ಪ್ರತಿಕ್ರಿಯಿಸಿದ್ದರು. "ಪ್ರಾಥಮಿಕ ಶಾಲೆಯಿಂದ ವಿಶ್ವವಿದ್ಯಾಲಯದ ತನಕ ಓದಿದ ಬಹುಮಟ್ಟಿನ ವಿಷಯಗಳನ್ನು ವಿದ್ಯಾರ್ಥಿಗಳು ಓದುವುದು ಜ್ಞಾನದ ತೃಷೆಯಿಂದಲ್ಲ. ಅಂಥ ವಿಷಯಗಳಲ್ಲಿ ಪರೀಕ್ಷೆ ಪಾಸಾಗಿ ಆ ಸರ್ಟಿಫಿಕೇಟಿನ ವರಪ್ರಸಾದದಿಂದ ಪಡೆಯಬಹುದಾದ ನೌಕರಿಯ ಆಸೆಯಿಂದ ಎಂಬುದು ಗೊತ್ತಿದ್ದ ಸಂಗತಿ. ಹಿಂದೆ ತಾನು ಓದಿದ ಯಾವೊಂದು ವಿಷಯದಲ್ಲೂ ಅಭಿರುಚಿ ಹುಟ್ಟದೆ ಹೋದರೆ, ಅದರಿಂದ ಪ್ರಯೋಜನ ಸಿಗದೆ ಹೋದರೆ ನಾವು ಈತನಕ ಹೋದುದು ಕುರುಡು ದಾರಿ ಎಂಬುದು ಸ್ಪಷ್ಟವಾಗುತ್ತದೆ"[೨] ಎನ್ನುತ್ತಾರೆ.

ಕಾರಂತರ ಶೈಕ್ಷಣಿಕ ಚಿಂತನೆಗಳಲ್ಲಿ ಅನೇಕ ಭಾಗ ವರ್ತಮಾನದ ಶಿಕ್ಷಣ ಕ್ರಮಕ್ಕೆ ಹುಟ್ಟಿದ ಪ್ರತಿಕ್ರಿಯೆಗಳೂ ಆಗಿದೆ. ಆದರೆ ಹೀಗೆ ನೀಡಿದ ಪ್ರತಿಕ್ರಿಯೆಯು ಕೇವಲ ಪ್ರತಿಕ್ರಿಯೆಯಾಗದೆ ಬಹಳ ಆಳವಾದ ಚಿಂತನಾ ಹೊಳಹುಗಳಿವೆ, ಒಳನೋಟವಿದೆ. ಈ ಪ್ರತಿಕ್ರಿಯೆಯ ಒಳಗೆ ಕಾರಂತರ ಶೈಕ್ಷಣಿಕ ಚಿಂತನೆಯ ಪ್ರಮುಖ ಧಾರೆಗಳು ಕಾಣುತ್ತಿವೆ. ಭಾಷೆಯ ಕಲಿಕೆ ಹೇಗಿರಬೇಕು? ಕಲಿಕೆಯನ್ನು ಆಕರ್ಷಕಗೊಳಿಸುವುದು ಹೇಗೆ ಎಂಬುದಕ್ಕೆ ತಮ್ಮ ಕಾಲದ ಶಿಕ್ಷಣ ಕ್ರಮವನ್ನು ಎದುರಿಟ್ಟುಕೊಂಡೇ ಯೋಚಿಸುತ್ತಿದ್ದರು. ಯಾವ ವಯೋಮಾನದ ಮಕ್ಕಳಿಗೆ ಏನು ಕಲಿಸಿಕೊಡಬೇಕು ಎಂಬುದರ ಅರಿವಿಲ್ಲದೆ, ಯಾವುದೋ ಪಠ್ಯ ಪುಸ್ತಕವನ್ನು ಪಠ್ಯವಾಗಿಟ್ಟು ಕಂಠಸ್ಥಗೊಳಿಸಿ, ಸಂಧಿ ವಿಂಗಡಿಸಿ, ವ್ಯಾಕರಣವನ್ನು ಪ್ರತ್ಯೇಕಗೊಳಿಸಿ ತಿಳಿಸಿ ಕಲಿಸಿಕೊಡುವ ರೀತಿ ಮಕ್ಕಳಲ್ಲಿ ಉತ್ಸಾಹ ಬತ್ತಿ ಹೋಗುವಂತೆ ಮಾಡಿ, ಪುಸ್ತಕದ ಬಗೆಗೆ ವೈರಾಗ್ಯವೇ ಮೂಡುವ ಹಾಗೆ ಮಾಡುತ್ತದೆ ಎಂದರೆ ಇದು ವರ್ತಮಾನದ ಶಿಕ್ಷಣ ವ್ಯವಸ್ಥೆಯ ಅಪಮಾರ್ಗ ಎಂದೇ ಹೇಳುತ್ತಿದ್ದರು. ಪಠ್ಯದ ಮೂಲಕ ಮಕ್ಕಳೇ ಅಭಿರುಚಿಯನ್ನು ಬೆಳೆಸಲು ಸಾಧ್ಯವಾಗಬೇಕು. ಅಭಿರುಚಿಯನ್ನು ಬೆಳೆಸಲಾರದ ಶಿಕ್ಷಣ ವ್ಯರ್ಥವೆಂದೇ ತಿಳಿದಿದ್ದರು.

ಕಾರಂತರು ಭಾಷಾ ಕಲಿಕೆಯ ಬಗೆಗೆ ಹೇಳುವಾಗ ತಮ್ಮ ಕಾಲದ ಬೋಧನಾ ಕ್ರಮ ಹೇಗೆ ತಪ್ಪಿದೆ ಎಂಬುದನ್ನು ಉಲ್ಲೇಖಿಸುತ್ತಾರೆ. ಮಗುವಿಗೆ ತನ್ನ ಪರಿಸರ ಜ್ಞಾನವನ್ನು ಬೆಳೆಸುವುದು ತನ್ನ ಮಾತೃಭಾಷೆ. ಶೈಶವದಲ್ಲಿ ಮನಸ್ಸನ್ನು ರೂಪಿಸುವುದು ಮಾತೃಭಾಷೆಯೇ. ಹೀಗಾಗಿ ಅದನ್ನು ೫–೬ ವರ್ಷಗಳಲ್ಲಿ ಕಲಿಸಿ ಮುಗಿಸಿದ ಬಳಿಕ ಇನ್ನೊಂದು ಭಾಷೆಯನ್ನು ಕಲಿಸಬೇಕು ಎನ್ನುತ್ತಿದ್ದರು. "ಒಂದು ಭಾಷೆ ಸರಿಯಾಗಿ ಬರುವ ಮೊದಲು ಎರಡನೇ ಭಾಷೆ ಹೊರಿಸುವುದು ಮೂರ್ಖತನ. ನಿತ್ಯ ಕೇಳಿ ತಿಳಿಯುವ ಭಾಷೆಯನ್ನು ಕೇಳಿ ತಿಳಿಯುವ ರೀತಿಯಿಂದಲೇ ಕಲಿಸಬೇಕು. ಅದು ಬಿಡು ಅಕ್ಷರಗಳನ್ನು ಗುರುತಿಸಿಯಲ್ಲ, ಅರ್ಥಬದ್ಧ ಮಾತುಗಾರಿಕೆಯಿಂದ. ಇಲ್ಲಿ ನಮ್ಮ ಬೋಧನಾ ಕ್ರಮ ತಪ್ಪಿದೆ. a, b, c; ಅ, ಆ, ಇ ಭಾಷೆಯ ಅಸ್ತಿವಾರವಾಗಲಾರದು"[೩] ಎನ್ನುತ್ತಿದ್ದರು. ಕಾರಂತರು ತಮ್ಮ ಕಾಲದ ಸರ್ಕಾರದ ಶಿಕ್ಷಣ ವ್ಯವಸ್ಥೆಯನ್ನು ವಿಮರ್ಶಿಸುತ್ತಲೇ ಅದಕ್ಕಿಂತ ಭಿನ್ನವಾದ ಮತ್ತು ಪರ್ಯಾಯವಾದ ಒಂದು ಪ್ರಯೋಗವನ್ನು ರೂಪಿಸಿದರು. ದೇಶದ ವಿದ್ಯಾಮಂಡಳಿಯವರು ರೂಪಿಸುತ್ತಿರುವ ಶಿಕ್ಷಣದ ಬಗೆಗೆ ಹೇಳುವಾಗ ಅದು Child Oriented ಆಗಿರಬೇಕು ಎಂದು ಬಯಸುತ್ತಲೇ ಹೀಗೆ ಹೇಳುತ್ತಾರೆ. "ನಾಲ್ಕೈದು ವರ್ಷದ ಮಕ್ಕಳ ಮೇಲೆ ಅವರ ಅಭಿರುಚಿಗೆ ಸಂಬಂಧವಿಲ್ಲದ ಯಾವತ್ತೂ ಕಗ್ಗವನ್ನು ಹೊರಿಸಿ ಅವರನ್ನು ಜೀವಂತ ಕೊಲ್ಲುತ್ತಿರುವ ಇಂದಿನ ಶಿಕ್ಷಣ ಶಿಕ್ಷಣವಲ್ಲ, ಇದು ಶಿಶುಹತ್ಯೆ. ಇಂಗ್ಲಿಷಿನಲ್ಲಿ ನಡೆಯುತ್ತಿರುವ ಕೆ.ಜಿ ನರ್ಸರಿಗಳೆಲ್ಲವೂ ಶಿಶು ಸ್ವಭಾವವನ್ನು ಕೊಲ್ಲುತ್ತಿರುವ ವ್ಯವಸ್ಥೆಗಳು. ಶಾಲೆ ಬೂಟ್ಸು, ಟೈ, ಕುರ್ಚಿ, ಕಂಠಪಾಠ, ಡ್ರಿಲ್‌ಗಳ ಯಂತ್ರ ಶಾಲೆಗಳಾಗಬಾರದು"[೪] ಎನ್ನುತ್ತಾರೆ.

ಕಾರಂತರಿಗೆ ತಮ್ಮ ಬಾಲ್ಯದ ಶಿಕ್ಷಣಕ್ರಮ ಹಾಗೂ ಇಂದಿನ ಶಿಕ್ಷಣ ಕ್ರಮದ ಬಗೆಗೆ ಸಹನೆಯಿಲ್ಲ. ಬಾಲ್ಯದಲ್ಲಿನ ಶಾಲೆಯ ಕಲಿಕೆ ಆಕರ್ಷಣೆಯ ವಿಷಯವಾಗಿ ಉಳಿದಿರಲಿಲ್ಲ. ಕೆಲವೇ ಶಿಕ್ಷಕರನ್ನು ಹೊರತುಪಡಿಸಿದರೆ ಬೇರೆ ಶಿಕ್ಷಕರು ತಮ್ಮ ಮೇಲೆ ಪ್ರಭಾವ ಬೀರಲಿಲ್ಲವೆಂಬುದನ್ನು ತಮ್ಮ ಆತ್ಮಕಥನದಲ್ಲಿ ಹೇಳಿದ್ದಾರೆ. ಅವರ ಶಿಕ್ಷಣದ ಕುರಿತು ಎಲ್ಲ ಮಾತುಗಳು ಸ್ವಾತಂತ್ರ್ಯೋತ್ತರ ಭಾರತದ ಶಿಕ್ಷಣ ಕ್ರಮವನ್ನು ಖಂಡಿಸುತ್ತಲೇ ಹೊಸದನ್ನು ನಿರೂಪಿಸುವ ಮಾದರಿಯದ್ದಾಗಿದೆ. ದೈತ್ಯ ಗಾತ್ರದ ಸರಕಾರಗಳ ತೆಕ್ಕೆಯಲ್ಲಿ, ಅಧಿಕಾರಶಾಹಿಯ ಮುಷ್ಟಿಯಲ್ಲಿ ಶಿಕ್ಷಣ ನಲುಗಿದೆ. ರಕ್ಷಕರು, ಶಿಕ್ಷಕರು ಮತ್ತು ಇಲಾಖೆಯವರೆಂದು ಮಕ್ಕಳ ಹಿತಾಸಕ್ತಿಗಳು ಕಮರಿವೆ ಎಂಬ ಆತಂಕ, ನೋವು, ಸಾತ್ವಿಕ ಕೋಪ ಸುಧಾರಣೆಗೆ ನಿರ್ದೇಶನ ಕಾರಂತರ ಶಿಕ್ಷಣ ಸಂಬಂಧಿ ಲೇಖನಗಳಲ್ಲಿ ಕಂಡು ಬರುತ್ತದೆ.

ಇಂದಿನ ಶಿಕ್ಷಣ ತೀರ ಯಾಂತ್ರಿಕವಾಗಿದೆ. ಮಕ್ಕಳ ಸ್ವ ಬುದ್ಧಿ, ಸೃಷ್ಟಿಕ್ರಿಯೆ, ವಿಚಾರಶೀಲತೆಗಳ ಬೆಳವಣಿಗೆಗೆ ಸ್ಥಾನ ಇಲ್ಲದಂತಾಗಿದೆ. ಕಾರಂತರೇ ಹೇಳುವಂತೆ ಜ್ಞಾನದ ಮೋಹ ವಿದ್ಯಾರ್ಥಿಗಳಲ್ಲಿ ಹುಟ್ಟಬೇಕೆಂಬ ದೃಷ್ಟಿಯಿಂದ ನಮ್ಮ ಶಿಕ್ಷಣಕ್ರಮ ರೂಪುಗೊಂಡಿಲ್ಲ. ಶಾಲೆಗಳಲ್ಲಿ ಒದಗಿಸಲಾಗುತ್ತಿರುವ ಶಾಸ್ತ್ರದ ಮಾಹಿತಿ ವಿದ್ಯಾರ್ಥಿಗಳಲ್ಲಿ ಜ್ಞಾನ ಪಿಪಾಸೆಯನ್ನು ಬೆಳೆಸುತ್ತಿಲ್ಲ ಎನ್ನುತ್ತಿದ್ದರು.

ಶಿಕ್ಷಣದ ಉದ್ದೇಶದ ಸಂದರ್ಭದಲ್ಲಿ ಬಹಳ ಪ್ರಮುಖವಾಗಿ ಕಂಡುಬರುವ ಎರಡೂ ಉದ್ದೇಶಗಳಾದ ಹೊಟ್ಟೆ ತುಂಬಿಸಬಲ್ಲ ವೃತ್ತಿಯನ್ನು ಒದಗಿಸಿಕೊಡುವುದು ಮತ್ತು ಮನೋವಿಕಾಸವನ್ನು ಉಂಟುಮಾಡುವುದು ಆಗಿದ್ದಾಗ, ಕಾರಂತರಿಗೆ ಈ ಎರಡೂ ಪ್ರಶ್ನೆಗಳು ಕೂಡ ಮಹತ್ವದ್ದಾಗಿ ಕಂಡಿವೆ. ಹೊಟ್ಟೆಪಾಡಿನ ದೃಷ್ಟಿಯಿಂದ ನೋಡಿದಾಗ ನಮ್ಮ ಶಿಕ್ಷಣ ಸ್ವಾವಲಂಬನೆಯನ್ನು ಬೆಳೆಸುತ್ತಿಲ್ಲ. ಅದು ಬದುಕಿಗೂ ಮನೋವೃತ್ತಿಗೂ ಸಂಬಂಧಿಸಿದ ಒಂದು ವ್ಯರ್ಥ ಹೋರಾಟವಾಗಿದೆ. ಬದುಕನ್ನು ಹೊಟ್ಟೆಯ ಪಾಡಿನ ಹೋರಾಟವನ್ನು ಎದುರಿಸುವ ದಿಟ್ಟತನವನ್ನು ನಮ್ಮ ಶಿಕ್ಷಣ ಪದವಿಗಳಿಸಿದವರಿಗೆ ಒದಗಿಸುತ್ತಿಲ್ಲ. ಸುಲಭ ಜೀವನದ ಭ್ರಾಮಕ ಆದರ್ಶಗಳನ್ನು ಮಾತ್ರ ಶಿಕ್ಷಣಾಲಯಗಳು ಸಾಧಿಸಿಕೊಂಡು ಬಂದಿವೆ ಎಂದು ಕಾರಂತರು ಕೊರಗುತ್ತಾರೆ. ಕಾರಂತರು ಶಿಕ್ಷಣದ ಗುರಿಗಳನ್ನು ಗುರುತಿಸುವಾಗ ಮೂರು ಮುಖ್ಯ ಅಂಶಗಳನ್ನು ಗುರುತಿಸುತ್ತಾರೆ. ವ್ಯಕ್ತಿ ವಿಕಾಸ, ವೃತ್ತಿ ವಿಕಾಸ ಹಾಗೂ ಸಾಮಾಜಿಕ ಹೊಂದಾಣಿಕೆ ಶಿಕ್ಷಣದ ಗುರಿ ಎಂದು ಗುರುತಿಸುತ್ತಾರೆ. "ವ್ಯಕ್ತಿಯಾದವನ ಆಂತರಿಕ ವಿಕಾಸ ಶಿಕ್ಷಣದ ಮೂಲ ಉದ್ದೇಶವೆನಿಸುತ್ತದೆ. ಶಿಕ್ಷಣವೆಂಬುದು ವ್ಯಕ್ತಿ ವಿಕಸನದಿಂದ ಆತನ ಮತ್ತು ಆತನ ವಿಸ್ತೃತ ಸಮಾಜದ ಹಿತ ಸಾಧನೆ ಎಂಬುದಾಗಿ ಹೇಳಬಹುದು. ಸ್ವಂತ ಜೀವನಕ್ಕೆ ವ್ಯಕ್ತಿಗೆ ಬೇಕಾದ ವೃತ್ತಿ ಶಿಕ್ಷಣಕೊಡುವುದು ಶಿಕ್ಷಣದ ಒಂದು ಮುಖವಾದರೆ, ಸಾಮಾಜಿಕ ತಿಳುವಳಿಕೆ ಒದಗಿಸುವುದು ಅದರ ಇನ್ನೊಂದು ಮುಖವಾಗಿದೆ. ವ್ಯಕ್ತಿಯು ಸಮಾಜ ಮತ್ತು ದೇಶದೊಡನೆ ಹೊಂದಿಕೊಳ್ಳುವುದಕ್ಕೆ ಬೇಕಾದ ಸತ್‌ಶೀಲವನ್ನು ರೂಪಿಸುವುದು ಶಿಕ್ಷಣದ ಮೂರನೆಯ ಮುಖ. ಈ ಮೂರು ಮುಖಗಳುಳ್ಳ ಶಿಕ್ಷಣ ಎಲ್ಲರಿಗೂ ದೊರಕಬೇಕು"[೫] ಎಂದಿದ್ದರು.

ಕಾರಂತರು ತಮ್ಮ ಬರವಣಿಗೆಯ ಉದ್ದಕ್ಕೂ 'ಶಿಕ್ಷಣ'ದ ಎಲ್ಲಾ ಮುಖಗಳಿಗೆ ಗಮನ ಹರಿಸಿದರೂ, ಅನಂತರದ ಲೇಖನಗಳಲ್ಲಿ ವ್ಯಕ್ತಿಯ ಅಂತರಂಗದ ವಿಕಾಸಕ್ಕೆ ಹೆಚ್ಚಿನ ಮಹತ್ವ ಕೊಡುವ ಬಗೆಯಲ್ಲಿ ಚಿಂತಿಸುತ್ತಿದ್ದರು. "ಉನ್ನತ ಶಿಕ್ಷಣದ ಹಂತದಲ್ಲಿ ವಿದ್ಯಾರ್ಥಿಯ ಅಭಿರುಚಿ, ಆಸಕ್ತಿ, ಜ್ಞಾನದಾಹ, ಪರಿಶ್ರಮಕ್ಕೆ ಬೆಲೆ ಕೊಡಬೇಕೆಂಬುದು ನಿಜವಾದರೂ, ಸ್ಪರ್ಧಾತ್ಮಕವಾದ ಬದುಕಿನ ಹೋರಾಟದಲ್ಲಿ ವಿದ್ಯೆಗೂ, ಉದ್ಯೋಗಕ್ಕೂ ಸಂಬಂಧ ಕಲ್ಪಿಸಬಾರದೆಂದು ಹೇಳುವುದಾಗಲಿ, ನಮ್ಮ ಅನುಕೂಲಕ್ಕೆ ತಕ್ಕಂತೆ ಬದಲಾಗುವ ಪ್ರತಿಭೆ ಹಾಗೂ ಅರ್ಹತೆಯ ಮಾನದಂಡದಿಂದ ಉನ್ನತ ಶಿಕ್ಷಣ ಮತ್ತು ಉದ್ಯೋಗದ ಅವಕಾಶಗಳನ್ನು ಕೆಲವರಿಗೆ ನಿರಾಕರಿಸುವುದಾಗಲಿ ನಮಗೆ ಸಮುಚಿತವಾಗಿ ಕಾಣುವುದಿಲ್ಲ" ಎಂದು ಮಹಾಬಲೇಶ್ವರ ರಾವ್ ನುಡಿಯುತ್ತಾರೆ. "ಗುಣಾತ್ಮಕವಾಗಿ ಕಾರಂತರ ಶೈಕ್ಷಣಿಕ ವಿಚಾರಗಳಲ್ಲಿ ಕಾಣುವ ಹರಹು ಸ್ವೋಪಜ್ಞತೆ, ಅನುಭವದಿಂದ ಪ್ರಮಾಣಿಸಿದ ನಿರೂಪಣೆ ಇವೆಲ್ಲ ಅಪೂರ್ವವಾದುವು. ಆದ್ದರಿಂದಲೇ ಪ್ರಮಾಣಭೂತವಾದುವು. ಪ್ರಕ್ರಿಯೆಗಳನ್ನು ವಿವರವಾಗಿ ನಿರೂಪಿಸುವುದರಿಂದ ಇಂದಿಗೂ ಮಾರ್ಗದರ್ಶಕವಾಗಿವೆ. ಕಾರಂತರ ಸಾಮಾಜಿಕ ಕಾಳಜಿ,

ಅಧ್ಯಯನ, ಅನುಭವಗಳಿಂದ ದೃಢಪಡಿಸಿಕೊಂಡ ಚಿಂತನೆಗಳು ಇಂದಿಗೂ ಪ್ರಸ್ತುತವಾಗಿದೆ"[೬]. ಈ ಮಾತು ಕಾರಂತರ ಶಿಕ್ಷಣ ದೃಷ್ಟಿಯನ್ನು ಮೌಲ್ಯಮಾಪನಕ್ಕೆ ಒಡ್ಡಿದ ಸಕಾರಾತ್ಮಕ ತಿಳುವಳಿಕೆಯಾಗಿದೆ. ಕಾರಂತರ ಒಟ್ಟು ಶೈಕ್ಷಣಿಕ ಬರಹಗಳು ೧೯೩೦ರಿಂದ ೧೯೯೫ರ ವರೆಗೆ ಶಿಕ್ಷಣಕ್ಕೆ ಸಂಬಂಧಿಸಿದಂತೆ ಬೇರೆ ಬೇರೆ ಬಗೆಯ ಬರಹಗಳನ್ನು ಮಾಡಿದರು. ಈ ಅವಧಿಯುದ್ದಕ್ಕೂ ಶಿಕ್ಷಣ ವ್ಯವಸ್ಥೆಯೊಳಗೆ ಪ್ರವೇಶಿಸಿ ಅಲ್ಲಿನ ಆಗು-ಹೋಗುಗಳಿಗೆ ರಚನಾತ್ಮಕವಾಗಿ ಪ್ರತಿಸ್ಪಂದಿಸುತ್ತಾ, ಪ್ರತಿಕ್ರಿಯಿಸುತ್ತಾ ಸಾಗುತ್ತಾರೆ. ತಾನೂ ಭಾಗವಹಿಸುತ್ತಾ, ಬದಲಾವಣೆಗಳನ್ನು ತರಲು ಶ್ರಮಿಸುತ್ತಾ ಸಾಕ್ಷಿಯಾಗಿ ನಿಂತು ವಿಶ್ಲೇಷಿಸುತ್ತಿದ್ದರು.

ಕಾರಂತರ ಶಿಕ್ಷಣದ ಚಿಂತನೆ ಮತ್ತು ಪ್ರಯೋಗದ ಹಿಂದೆ ಒಂದು ಬಗೆಯ ಸ್ವಾನುಭವದ ಎಳೆಯಿತ್ತು. ಅದು ಬಹಳ ನಕಾರಾತ್ಮಕವಾದ ಬಗೆಯದ್ದು. ತನ್ನ ಬಾಲ್ಯದ ಶಿಕ್ಷಣದ ಲೋಪಗಳೇ ಅವರಲ್ಲಿ ಅದಕ್ಕಿಂತ ಭಿನ್ನವಾದ ಮತ್ತು ಪರ್ಯಾಯವಾದ ಹೊಸ ಬಗೆಯೊಂದರ ಶೋಧಕ್ಕೆ ಅವರನ್ನು ಉತ್ತೇಜಿಸಿರಬೇಕು. ಅವರು ತಮ್ಮ 'ಸ್ಮೃತಿ ಪಟಲ'ದಲ್ಲಿ ಹೇಳಿಕೊಳ್ಳುವ ಕೆಲವು ಮಾತುಗಳು ಇದಕ್ಕೆ ಉದಾಹರಣೆಯಾಗಿ ನಿಲ್ಲಬಹುದು. "ಮೊದಲ ಪುಸ್ತಕದಲ್ಲಿ 'ಅ-ಆ' ದಿಂದ ಅಕ್ಷರ ಶುರುವಾಗುತ್ತದೆ. ಅಳಿಲು, ಆನೆಗಳ ಚಿತ್ರಗಳಿಂದ ಪ್ರಥಮ ಪಾಠ ತೊಡಗುತ್ತದೆ. ದುರ್ದೈವಕ್ಕೆ 'ಅ' ದಿಂದ ತೊಡಗುವ ಈ ಪುಸ್ತಕದ ಅಳಿಲು ನಮ್ಮ ಊರಿನ ಮಕ್ಕಳ ಪಾಲಿಗೆ 'ಚಣಿಲು' ಎಂಬ ಒಂದು ಪ್ರಾಣಿ. ಉಪಾಧ್ಯಾಯರು ಅದನ್ನು 'ಅಳಿಲು' ಎಂದು ನಮ್ಮ ಜಿಲ್ಲೆಯ ಮಕ್ಕಳಿಗೆ ಗಟ್ಟಿಯಾಗಿ ಪಾಠ ಹೇಳುವಾಗ ನಮ್ಮ ಊರಿನ 'ಚಣಿಲು' 'ಅಳಿಲಾ'ಗಲೇ ಬೇಕಾಯಿತು"[೭].

"ರೂಪಾಯಿಯಿಂದ ಕಾಸಿನ ತನಕ ಮಾತ್ರವಲ್ಲದೆ ಬ್ರಿಟಿಷರ 'ಪೌಂಡಿನಿಂದ ಪೆನ್ನಿ'ಯ ತನಕ ಕಲಿಯ ಬೇಕಿತ್ತು"[೮]. "ಶಾಲೆ ಮುಗಿಯುವ ಹೊತ್ತಿಗೆ ನಾವೆಲ್ಲರೂ ಒಕ್ಕೊರಲಿಂದ 'ಗಾಡ್ ಸೇವ್ ದೀ ಕಿಂಗ್' ಎಂದು ಗರ್ಜಿಸಿ ಹಾಡುತ್ತಿದ್ದೆವು. ಇಂಗ್ಲಿಷಿನ ಆ ಪದ್ಯದ ಅರ್ಥ ನಮಗೆ ಏನೇನೂ ಗೊತ್ತಿಲ್ಲವಾಗಿದ್ದರೂ, ಶಾಲೆ ಮುಗಿಯಿತೆಂಬ ಸಂತೋಷಕ್ಕೆ ಅದನ್ನು ಗಟ್ಟಿಯಾಗಿ ಕಿರುಚುತ್ತಿದ್ದೆವು"[೯] ಎನ್ನುತ್ತಾರೆ. ಇಂತಹ ಅನೇಕ ಪ್ರಸ್ತಾಪಗಳು ಅವರ ಆತ್ಮಕಥನದ ಸಂದರ್ಭದಲ್ಲಿ ಬರುತ್ತದೆ. ಈ ಎಲ್ಲ ಅನುಭವಗಳೇ ಮುಂದೆ ಕಾರಂತರು ಕೈಗೊಂಡ ಶಿಕ್ಷಣಕ್ಕೆ ಸಂಬಂಧಿಸಿದ ಪ್ರಯೋಗಗಳಿಗೂ, ನಿರೂಪಿಸಿದ ಶಿಕ್ಷಣ ತತ್ವಗಳಿಗೂ ಪ್ರೇರಕವಾದವು. ಕಾರಂತರ ಶಿಕ್ಷಣದ ಬಹುತೇಕ ಪರಿಕಲ್ಪನೆ ಮತ್ತು ಪ್ರಯೋಗಗಳು ಮುಖ್ಯವಾಗಿ ಪ್ರಾಥಮಿಕ ಹಾಗೂ ಮಾಧ್ಯಮಿಕ ಹಂತದ ಮಕ್ಕಳ ಶಿಕ್ಷಣಕ್ಕೆ ಸಂಬಂಧಿಸಿದ್ದೇ ಹೆಚ್ಚು.

ಕಾರಂತರು ಬುದ್ಧಿ ಭಾವಗಳ ವಿಕಾಸಕ್ಕೆ ಹೆಚ್ಚಿನ ಮಹತ್ವ ನೀಡಿದ್ದಾರೆ. ತಮ್ಮ ಕಾಲದ ಶಿಕ್ಷಣ ವಿದ್ಯಾರ್ಥಿಗಳ ಬಾಲ್ಯ ಮತ್ತು ತಾರುಣ್ಯದಲ್ಲಿ ಯಾವುದೇ ಅಭಿರುಚಿ ಬೆಳೆಸುವಲ್ಲಿ ವಿಫಲವಾಗುತ್ತಿತ್ತು.

ಇದರ ಪರಿಣಾಮವಾಗಿ ಶಿಕ್ಷಣ ಶಿಕ್ಷೆಯಾಗುತ್ತಿದೆ. ಬಾಲಕರ ಕಣ್ಣು ಕಿವಿಗಳು ತರಗತಿಗಳಲ್ಲಿ ಉಪಾಧ್ಯಾಯರನ್ನು ಕಾಣುವುದಕ್ಕೆ, ಕೇಳುವುದಕ್ಕೆ ಮೀಸಲಾಗಿದೆ. ಶಿಕ್ಷಣ ಪದ್ಧತಿ ಸಾರ್ಥಕವಾಗಬೇಕಾದರೆ ಮಕ್ಕಳ ಮನಸ್ಸು, ವಯಸ್ಸು, ಪರಿಸರಗಳ ಜ್ಞಾನ ಶಿಕ್ಷಣ ಕೊಡುವಾತನಿಗೆ ಇರಬೇಕು. ಆದರೆ ಮಗುವಿನ ಸ್ವಂತ ಮನಸ್ಸು ಅರಳಲು ಬೇಕಾದ ಆವರಣ, ಸಾಧನಗಳನ್ನು ಶಿಕ್ಷಣ ಕ್ರಮದಿಂದ ಕಳಚಿಬಿಟ್ಟ ಕಾರಣ, ಅವರಲ್ಲಿ ಆಸಕ್ತಿ ಹುಟ್ಟಿಸುವ ಹಾಗೆ ನಮ್ಮ ಶಿಕ್ಷಣ ಕ್ರಮ ಇಲ್ಲ ಎಂದು ಕಾರಂತರು ಟೀಕಿಸುತ್ತಾರೆ.

ಕಾರಂತರು ವರ್ತಮಾನದ ಶಾಲೆಯ ಘೋರ ದುರಂತವನ್ನು ಉತ್ಪ್ರೇಕ್ಷೆ ಎನಿಸಬಹುದಾದಂತೆ, ಆದರೂ ಅದರಲ್ಲೊಂದು ವಾಸ್ತವದ ಮುಖ ಇರುವಂತೆ ಹೀಗೆ ಹೇಳುತ್ತಾರೆ. "ಇಂದಿನ ನಮ್ಮ ಶಾಲೆಗಳ ಅವಸ್ಥೆ ಏನು? ಅಕ್ಕನೊಡನೆ, ಅಣ್ಣನೊಡನೆ ಶಾಲೆಗೆ ಹೋಗುತ್ತೇನೆ ಎಂದು ಹೊರಟ ಚಿಕ್ಕ ಮಗುವೊಂದು ಎರಡನೇ ಬಾರಿಗೆ ಆ ಬಯಕೆಯನ್ನು ಮಾಡುವುದಿಲ್ಲ. ಆ ಮಗುವಿನ ಕಣ್ಣಿಗೆ ಶಾಲೆಯೊಂದು ನಗುವನ್ನು ಅಪಹರಿಸುವ ರಕ್ಕಸನಾಗಿ ಕಾಣುವುದು. ಮನೆಯಲ್ಲಿ ಸದಾ ನಗುತ್ತಾ, ಜಿಗಿಯುತ್ತಾ ಜೀವಿಸಿದ ಬಾಲಕನು ಒಂದು ವರುಷ, ವರುಷ ಏಕೆ? ಆರು ತಿಂಗಳ ಕಾಲ ಶಾಲೆಗೆ ಹೋದನೆಂದರೆ, ಅವನ ಮುಖವು ಶವದಂತಾಗುವುದು"[೧೦]. ಇದು ವರ್ತಮಾನದ ವಾಸ್ತವಕ್ಕೆ ಹಿಡಿದ ಕನ್ನಡಿಯಾಗಿದೆ. ಅಭಿರುಚಿ ಇಲ್ಲದೆ, ಅಭಿರುಚಿಯನ್ನು ಬೆಳೆಸದೆ ಶಿಕ್ಷಣ ಯಶಸ್ವಿಯಾಗುವುದಿಲ್ಲ, ಸಾರ್ಥಕವಾಗುವುದಿಲ್ಲ ಎಂಬುದನ್ನು ಕಾರಂತರು ಮತ್ತೆ ಮತ್ತೆ ಹೇಳುತ್ತಾರೆ. ಪ್ರಾಥಮಿಕ ಶಿಕ್ಷಣ ಕಾರಂತರ ಆಸಕ್ತಿಯ ಕ್ಷೇತ್ರ. ಅವರ ಪ್ರಯೋಗ ಚಿಕ್ಕ ಮಕ್ಕಳ ಸಲುವಾಗಿಯೇ ಇತ್ತು. ಮಕ್ಕಳ ಇಂದ್ರಿಯ ಪ್ರಪಂಚವನ್ನು ಜಡಗೊಳಿಸಿ, ಅವರ ಭಾವ ಜೀವನವನ್ನು ಬರಡುಗೊಳಿಸುವ ಹತ್ತು ಮಕ್ಕಳಿಗೆ ಚೆನ್ನಾಗಿ ಕುಳಿತು ಆಡಲು ಜಾಗ ಇಲ್ಲದಲ್ಲೂ ಹಣ ಸುರಿದು ಶಿಶು ಸೇವೆಗೆ ಹೊರಟ ಬಾಲವಾಡಿಗಳ ಮೇಲೆ ಅವರು ಆಕ್ರೋಶವನ್ನು ವ್ಯಕ್ತಪಡಿಸುತ್ತಾರೆ. ಮಕ್ಕಳ ಕಿವಿ, ಕಣ್ಣು, ಮನಸ್ಸು ಬೆಳೆಸದ ಬಾಲವಾಡಿಗಳು ಮಕ್ಕಳ ಹಿಂಸಾಲಯಗಳು ಎಂದೇ ಹೇಳಿದ್ದರು. ಬಾಲವಾಡಿಗಳು 'ಶಿಶು ಪಂಜರ'ಗಳೆಂದು ಹೇಳುತ್ತಾ, ಎಳೆಯ ಮಕ್ಕಳ ಮೇಲೆ ಶುಷ್ಕ ಪಾಠಗಳ ಹೊರೆ ಹೊರಿಸುವ ಹಿರಿಯರು 'ಮಕ್ಕಳ ಪಾಲಿನ ಮೃತ್ಯು' ಗಳೆಂದು ಹೇಳುತ್ತಿದ್ದರು. ಮೂರು – ಮೂರುವರೆ ವರ್ಷದ ಮಕ್ಕಳನ್ನು ತಂದು ಕೂಡಿಸಿ ಅವುಗಳ ಮೇಲೆ ಗಣಿತ, ವಿಜ್ಞಾನ ಮೊದಲಾದ ಕಠಿಣ ವಿಷಯಗಳ ಹೊರೆಯನ್ನು ಹೊರಿಸುವ ಹಿರಿಯರು ಎಂದೂ ಮಕ್ಕಳ ಹಿತಾಕಾಂಕ್ಷಿಗಳಲ್ಲ, ಅವರು "ಮಕ್ಕಳ ಪಾಲಿನ ಮೃತ್ಯುಗಳು" ಎಂದು ಟೀಕಿಸಿದ್ದರು.

ಶಿಕ್ಷಣವನ್ನು ಈಗಾಗಲೇ ಗ್ರಹಿಸಿಕೊಂಡಿದ್ದ ಬಗೆಯನ್ನು ಕಾರಂತರು ಗಂಭೀರವಾಗಿ ಪ್ರಶ್ನಿಸುತ್ತಾರೆ. ಅದು ಜಡಗೊಂಡ ಹಳೆಯ ಗ್ರಹಿಕೆಯನ್ನು ಒಡೆದು ಹೊಸ ತಿಳುವಳಿಕೆಯನ್ನು ಹೊಸ

ಶೋಧದೊಂದಿಗೆ ನಿರೂಪಿಸುವ ಬಗೆಯಲ್ಲಿದೆ. ಸಾಂಪ್ರದಾಯಿಕ ತಿಳುವಳಿಕೆಯಂತೆ ಶಾಲೆಗಳು ಮಕ್ಕಳ ಶಿಕ್ಷಣಕ್ಕಾಗಿ ಇವೆ. ಅಲ್ಲಿ ಗುರುವು ಏನೂ ಅರಿಯದ ಮಕ್ಕಳಿಗೆ ಹೇಳಿಕೊಡುತ್ತಾನೆ. ಶಿಷ್ಯ ಅವುಗಳನ್ನೆಲ್ಲಾ ಪರಿಗ್ರಹಿಸಬೇಕು ಎಂಬ ಕಲ್ಪನೆ ನಮ್ಮಲ್ಲಿತ್ತು. ಈ ತಿಳುವಳಿಕೆ ನಿರೂಪಿಸುವ ಗ್ರಹಿಕೆಯಂತೆ ಮಕ್ಕಳು ಬರಿದಾದ ಬಂಡಿಗಳು. ಅವುಗಳಲ್ಲಿ ಉಪಾಧ್ಯಾಯರು ತುಂಬಿದರೆ ಉಂಟು, ಇಲ್ಲವಾದರೆ ಇಲ್ಲ ಎಂಬುದನ್ನು ತನ್ನ ಗ್ರಹಿಕೆಯಿಂದ ಬದಲಾಯಿಸಿ ಪಶ್ಚಿಮದ ಶಿಕ್ಷಣ ಚಿಂತನೆಯ ಪ್ರಭಾವದಿಂದ ಹೊಸ ಬಗೆಯಲ್ಲಿ ಅವರು ನಿರೂಪಿಸಿದರು. ಅದು ಏನೆಂದರೆ, ಮಕ್ಕಳಲ್ಲಿ ಸ್ವತಂತ್ರವಾದ ಸೃಷ್ಟಿಶಕ್ತಿ ಇದ್ದು ಯೋಗ್ಯ ಪರಿಸ್ಥಿತಿಯನ್ನು ಕಲ್ಪಿಸಿಕೊಟ್ಟಲ್ಲಿ ಅವರೇ ನವೀನ ಉತ್ಪತ್ತಿಯನ್ನು ಮಾಡಬಲ್ಲರೆಂದು ಹೇಳಿದರು. ಹೀಗೆ ಊಹಿಸಿದಾಗ ವಿದ್ಯಾರ್ಥಿಗಳು ಉಪಾಧ್ಯಾಯರನ್ನು ಅನುಸರಿಸಬೇಕಾದ ಬಂಡಿಗಳಲ್ಲ ಎನ್ನುತ್ತಿದ್ದರು. ಮಕ್ಕಳು ತಮ್ಮ ಸುತ್ತಮುತ್ತಲಿನ ಆಟ ಪಾಠದಲ್ಲೇ ಪ್ರತಿಕ್ಷಣಕ್ಕೂ ಏನನ್ನೋ ಹೊಸ ಹೊಸದಾಗಿ ಸೃಷ್ಟಿಸಲು ಯತ್ನಿಸುವರೆಂದು ನುಡಿಯುತ್ತಾರೆ.

"ನಮ್ಮ ಶಾಲೆಗಳು ಮೊದಲಿಗೆ ಮಕ್ಕಳ ಕ್ರಿಯಾಶಕ್ತಿ ಅರ್ಥಾತ್, ಉತ್ಪಾದಕ ಶಕ್ತಿ ಬೆಳೆಸಲು ಅವಕಾಶ ಕೊಡಬೇಕು. ಅವರ ಬೆಳವಣಿಗೆಗೆ ಬೇಕಾಗುವ ಸಾಮಾಗ್ರಿಗಳನ್ನು ಕೊಟ್ಟರೂ ಸಾಲದು. ಅಷ್ಟೆಲ್ಲಾ ಸ್ವಾತಂತ್ರ್ಯವೂ ದೊರೆಯಬೇಕು"[೧೧] ಎಂದು ಹೇಳುತ್ತಾರೆ. ಬಾಲ್ಯದ ಶಿಕ್ಷಣ ಮಗುವಿಗೆ ಯಾವ ಬಗೆಯಲ್ಲಿ ಸಿಗಬೇಕು ಎಂಬುದನ್ನು ತಮ್ಮ ಚಿಂತನೆಯಿಂದ ನಿರೂಪಿಸುತ್ತಾರೆ. ನಮ್ಮ ಶಾಲಾ ಶಿಕ್ಷಣ ವ್ಯವಸ್ಥೆಯಲ್ಲಿ ಮಗುವಿಗೆ ಕಲಿಯುವ ಸ್ವಾತಂತ್ರ್ಯವನ್ನು ನೀಡುತ್ತಿಲ್ಲ. ಬದಲಾಗಿ ಅದೊಂದು ಯಾಂತ್ರಿಕ ಕ್ರಿಯೆಯಾಗಿ ಹೋಗಿದ್ದು, ಶಿಸ್ತಿನ ಹೆಸರಲ್ಲಿ ಮಗುವಿನ ಸಹಜ ಸ್ವಭಾವವನ್ನು ಕಸಿದುಕೊಳ್ಳುವ ಕೆಲಸವನ್ನು ಮಾಡುತ್ತಿದೆ ಎಂದು ಹೇಳುತ್ತಾರೆ. ಉತ್ಪಾದಕ ಶಕ್ತಿಯನ್ನು ಬೆಳೆಸದೇ ಹೋಗುವ ಶಿಕ್ಷಣ ವ್ಯರ್ಥ ಪ್ರಯತ್ನ ಎನ್ನುತ್ತಾರೆ. ಹಳ್ಳಿಯ ಬಾಲಕರಿಗೆ ಕೊಡುವ ಶಿಕ್ಷಣವು ಅವರ ಗ್ರಾಮ ಜೀವನಕ್ಕೆ ಸಹಕಾರಿಯಾಗುವಂತಹದಿರಬೇಕು. ಅದು ಅವರ ಹೈಸ್ಕೂಲ್ ಶಿಕ್ಷಣಕ್ಕೆ ಅಡಿಗಲ್ಲು ಮಾತ್ರವಾಗಿರಬಾರದು ಬದಲಾಗಿ ಅಲ್ಲಿನ ಪಠ್ಯಗಳು ಅವರ ನಿತ್ಯಜೀವನಕ್ಕೆ ಪ್ರತ್ಯಕ್ಷವಾಗಿ ಇಲ್ಲವೇ ಪರೋಕ್ಷವಾಗಿ ಸಹಾಯವನ್ನುಂಟುಮಾಡುವಂತಿರಬೇಕು. ವೃತ್ತಿ ಪಾಠವು ಜೀವನಕ್ಕೆ ಸಹಾಯವಾಗ ಬೇಕು ಎನ್ನುತ್ತಾರೆ. ಹಾಗೆಯೇ ಪ್ರಸ್ತುತ ಇರುವ ಕ್ರಮವಾದ ಮೊದಲ ತರಗತಿಯಿಂದಲೆ ಬರೆಯಲು ಕಲಿಸುವ ಬದಲು, ಮೊದಲು ಓದಿನ ರುಚಿ ಹಿಡಿಸಿ, ಆ ಬಳಿಕ ಬರೆಯುವುದನ್ನು ಕಲಿಸಬೇಕು ಎಂದು ಹೇಳುತ್ತಾರೆ. ಓದುವುದಕ್ಕೆ ಬಂದ ಬಳಿಕವಷ್ಟೆ ಬರೆಯುವುದನ್ನು ಕಲಿಸಿದರಾಯಿತು ಎಂಬುದನ್ನು ಹೇಳುತ್ತಾರೆ.

ಈ ಚಿಂತನೆಯ ಹಿಂದೆ ಮಗುವಿನ ಮನಸ್ಸಿನ ಸಾಮರ್ಥ್ಯವನ್ನು ಗ್ರಹಿಸಿಕೊಂಡ ಒಂದು ಬಗೆಯ ತಜ್ಞತೆ ಇದೆ. ಮೊದಲು ಓದು, ಆ ಬಳಿಕ ಬರವಣಿಗೆ. ಇದು ಕಾರಂತರ ಗ್ರಹಿಕೆಯ ಶಿಕ್ಷಣದ

ಕ್ರಮವಾಗಿತ್ತು. ಇದರ ಸಾಧ್ಯತೆಯನ್ನು ನಮ್ಮ ಆಧುನಿಕ ಕಾಲದ ಶಿಕ್ಷಣ ವ್ಯವಸ್ಥೆಯ ಬೇರೆ ಬೇರೆ ಹಂತದ, ಬೇರೆ ಬೇರೆ ಮುಖಗಳನ್ನು ಪ್ರಯೋಗಕ್ಕೆ ಒಳಪಡಿಸಬೇಕಾದ ಅವಶ್ಯಕತೆ ಇದೆ.

೩.೧.೧ ಜ್ಞಾನ-ಜೀವನ : ನಡುವೆ ಕಂದರ

ಮಕ್ಕಳು ಪಡೆಯುವ ಜ್ಞಾನಕ್ಕೂ ಎದುರಿಸುವ ಜೀವನಕ್ಕೂ ಅರ್ಥಾರ್ಥ ಸಂಬಂಧ ಇಲ್ಲದಿರುವುದನ್ನು, ನಮ್ಮ ಪಠ್ಯಕ್ರಮ ವ್ಯರ್ಥ ಹೊರೆಯಾಗಿರುವುದನ್ನು ಕಾರಂತರು ಮತ್ತೆ ಮತ್ತೆ ಬೇರೆ ಬೇರೆ ಬಗೆಯಲ್ಲಿ ಹೇಳುತ್ತಾ ಬಂದಿದ್ದಾರೆ. "ಇಂದು ಜ್ಞಾನಗಳನ್ನು ಕುರಿತ ವಿಷಯಗಳನ್ನೆಲ್ಲಾ ಸ್ಮರಣೆಯಲ್ಲಿ ತುಂಬಿಕೊಳ್ಳುವುದೊಂದೇ ನಮಗೆ ಶಿಕ್ಷಣವೆನಿಸಿಬಿಟ್ಟಿದೆ. ತಲೆಯಲ್ಲಿ ತುಂಬಿಕೊಂಡ ಜ್ಞಾನಕ್ಕೂ ಮುಂದಣ ಜೀವನಕ್ಕೂ ಪರಸ್ಪರ ಸಂಬಂಧವೇ ಬರುವಂತಿಲ್ಲ. ಈ ಹೊತ್ತು ಚರಿತ್ರೆ ಭೂಗೋಲ, ಸಮಾಜ ವಿಜ್ಞಾನ, ವಿಜ್ಞಾನ ಮೊದಲಾದ ಯಾವ ಶಾಸ್ತ್ರವನ್ನು ನಾವು ಹೇಳುವುದಿದ್ದರೂ ಅವನ್ನು ಹಿರಿಯರು ಮಾಡಿಟ್ಟ ಸಿದ್ಧಾಂತಗಳನ್ನಾಗಿಯೇ ಎಣಿಸಿ ಮಕ್ಕಳ ಮೇಲೆ ಹೊರಿಸುವ ಪಠ್ಯಕ್ರಮ ಬಂದಿದೆ. ಇದು ಬದಲಾಗದೆ ಗತ್ಯಂತರವಿಲ್ಲ"[೨] ಎನ್ನುತ್ತಾರೆ. ಕಾರಂತರ ದೃಷ್ಟಿಯಲ್ಲಿ ಪಠ್ಯ ಕ್ರಮದಲ್ಲಿ ತುರುಕಿಸಿದ ಡ್ರಾಯಿಂಗ್ ಪಾಠ ಒಂದು ಡೊಂಬರಾಟವಾಗಿದೆ, ಸಂಗೀತ ಶಿಕ್ಷಣವೆಂಬುದು ಹೃದಯ ಭಾವಕ್ಕೆ ಸ್ಪಂದಿಸದ ವ್ಯಾಕರಣ ಅಭ್ಯಾಸವಾಗಿ ಬಿಟ್ಟಿದೆ, ಬುದ್ಧಿಗಮ್ಯವಾದ ಸಾಹಿತ್ಯದ ಅಂಶವನ್ನು ಕಠಿಣ ವ್ಯಾಕರಣದ ಡೊಂಬರಾಟಕ್ಕೆ ಗುರಿಪಡಿಸಿ ರಸಾಸ್ವಾದನೆಯ ಚಪಲವಾಗಿಸಲಾಗಿದೆ. ಕವನ, ಕಾವ್ಯಗಳ ಮಮತೆಯನ್ನು ನಮ್ಮ ಪಠ್ಯ ಪುಸ್ತಕಗಳು ಬೆಳೆಸುತ್ತಿಲ್ಲ. ಪರಿಸರದಲ್ಲಿ ಕೇಳಿ ಕಲಿಯಬೇಕಾದ ಜೀವಂತ ಭಾಷೆಯನ್ನು ಪುಸ್ತಕದ ಮೂಲಕ ಕಲಿಸುತ್ತಿದ್ದೇವೆ. ಪ್ರೌಢ ಪ್ರಜೆಗಳಿಗೆ ಬೇಕಾಗುವ ವಿಷಯಗಳನ್ನು ಎಳೆಯರ ಮುಂದೆ ಪ್ರಲಾಪಿಸುತ್ತಿದ್ದೇವೆ ಎಂದೆಲ್ಲಾ ಹೇಳುತ್ತಾರೆ. ಪಠ್ಯವೊಂದು ಯಾವ ಉದ್ದೇಶವನ್ನು ಸಾಧಿಸಬೇಕಾಗಿತ್ತೋ ಅದಕ್ಕಿಂತ ಭಿನ್ನವಾಗಿ, ಮಾತ್ರವಲ್ಲ ತದ್ವಿರುದ್ಧವಾಗಿ ಮೂಲ ಉದ್ದೇಶವೇ ವಿಫಲವಾಗುವಂತೆ ಅದನ್ನು ಜಾರಿಗೊಳಿಸಲಾಗಿದೆ. ಅಂದರೆ ಅನುಷ್ಠಾನದ ಸಂದರ್ಭದಲ್ಲಿ ಯಾವ ಬಗೆಯ ಎಚ್ಚರವನ್ನು ಇಟ್ಟುಕೊಳ್ಳಬೇಕಾಗಿತ್ತೋ, ಅದನ್ನು ಮರೆತು ಕೇವಲ ಒಂದು ಬಗೆಯ ಯಾಂತ್ರಿಕ ಕ್ರಿಯೆಯಾಗಿ ನಿರ್ವಹಿಸಲಾಗಿದೆ ಎಂಬುದೇ ಕಾರಂತರ ಕೋಪಕ್ಕೆ ಕಾರಣವಾಗಿದೆ. ಮಕ್ಕಳ ಆಸಕ್ತಿ, ವಯೋಮಾನ, ಕುತೂಹಲ, ಗ್ರಹಣಸಾಮರ್ಥ್ಯ ಇತ್ಯಾದಿಗಳ ಬಗೆಗೆ ಯೋಚಿಸದೆ ಪ್ರಾಯ-ಪ್ರಬುದ್ಧರ ನಿರೀಕ್ಷೆಗಳನ್ನು ಪಠ್ಯಕ್ರಮದಲ್ಲಿ ತುರುಕುವ ಅವಿವೇಕವನ್ನು ಕಾರಂತರು ತೀವ್ರವಾಗಿ ವಿರೋಧಿಸಿದ್ದಾರೆ. ಮಕ್ಕಳ ಪಠ್ಯ ಕ್ರಮದ ಒಳಗೆ ಪಠ್ಯಪುಸ್ತಕದಲ್ಲಿ ದೇಶಪ್ರೇಮ, ಜನಸಂಖ್ಯಾ ಶಿಕ್ಷಣ ಮುಂತಾದ ವಿಷಯಗಳನ್ನು ಸೇರಿಸುವುದನ್ನು ಕಾರಂತರು ವಿರೋಧಿಸುತ್ತಾರೆ. ಶಾಲಾ ಪಠ್ಯಕ್ರಮ

ಪ್ರಾಯೋಗಿಕವಾಗಿರಬೇಕು, ಮಕ್ಕಳ ಬದುಕಿಗೆ ಸುಸಂಗತವಾಗಿರಬೇಕು ಎಂಬುದು ಕಾರಂತರ ಕಾಳಜಿಯಾಗಿತ್ತು.

ಪರಿಸರ ಶಿಕ್ಷಣದ ಕುರಿತ ಹಾಗೆ ಕಾರಂತರು ಅವರ ಕೆಲವು ಮೂಲಭೂತ ಪ್ರಶ್ನೆಗಳು ಬಹಳ ಅರ್ಥಪೂರ್ಣವಾಗಿವೆ. ಪರಿಸರದ ಬಗೆಗೆ ಮಕ್ಕಳ ಕುತೂಹಲ ಕೆರಳಿಸಬೇಕು. ಅದಕ್ಕಾಗಿ ಅಭಿರುಚಿಯನ್ನು ಬೆಳೆಸದ ಶಿಕ್ಷಣ ಸಾರ್ಥಕವಾಗುವುದಿಲ್ಲ. ಆದರೆ ಅಭಿರುಚಿ ಎಂದರೆ ಈಗಾಗಲೇ ಬಂದಿರುವ ಸಾಂಪ್ರದಾಯಿಕ, ಶಾಸ್ತ್ರೀಯ ನಿರೂಪಣೆಯನ್ನು ಒಪ್ಪುವುದಿಲ್ಲ. ಶಿಕ್ಷಣ ಪದ್ಧತಿಯ ಸಾರ್ಥಕತೆ ಶಿಕ್ಷಣವನ್ನು ಯಾರಿಗೆ ಕೊಡುತ್ತಿದ್ದಾರೆ ಮತ್ತು ಯಾಕೆ ಎಂಬ ಉದ್ದೇಶಗಳು ಸ್ಪಷ್ಟವಾಗಿರಬೇಕು ಎನ್ನುತ್ತಾರೆ.

೩.೧.೨ ಕಲಿಕೆ – ಅಭಿರುಚಿ

ಕಲಿಯುವ ಸಂದರ್ಭದಲ್ಲಿ ಅಭಿರುಚಿಯನ್ನು ಬೆಳೆಸಬೇಕೆಂಬುದು ಬಹಳ ಮುಖ್ಯ ಸಂಗತಿ. ಶೈಶವದ ಪರಿಸರದ ಪ್ರಭಾವದಿಂದ ಬಂದ ಅಭಿರುಚಿಗಳನ್ನು ಬೆಳೆಸುವುದಷ್ಟೇ ಅಲ್ಲ, ಸಮಾಜೋಪಯುಕ್ತ ವಿಷಯಗಳನ್ನು ಶಾಲೆಯಲ್ಲಿ ಕಲಿಯಬೇಕಾದ ಪಾಠ ವಿಷಯಗಳನ್ನು ತಾನಾಗಿ ತೊಡಗಿಕೊಂಡು ಆನಂದದಿಂದ ನಿರ್ವಹಿಸಲು ಸಾಧ್ಯವಾಗುವಂತೆ ಮಾಡಬೇಕು.

ಶಿಕ್ಷಣಕ್ರಮ ವರ್ತಮಾನದಲ್ಲಿ ಹೇಗಿದೆ ಎನ್ನುವುದನ್ನು ಹೇಳುವ ಕಾರಂತರು ವಿದ್ಯಾರ್ಥಿಗಳ ಮನೋಧರ್ಮ ಅರಿಯದೆಯೇ ಹಿರಿಯರು ತಮಗೆ ಮುಖ್ಯವೆಂದು ತೋರಿದ ಜ್ಞಾನವನ್ನು ಕಿರಿಯರ ತಲೆಯೊಳಗೆ ತುಂಬಿಸುವ ಪ್ರಯತ್ನವಾಗಿದೆ ಎಂದು ಹೇಳುತ್ತಲೇ, ಈ ಬಗೆಯ ವ್ಯವಸ್ಥೆ ಇದ್ದರೂ ಪರಿವರ್ತನೆ ಯಾಕೆ ಸಾಧ್ಯವಾಗುತ್ತಿಲ್ಲವೆಂದರೆ, "ನಮ್ಮ ವಿಶ್ವ ವಿದ್ಯಾಲಯಗಳಲ್ಲೆ, ಶಾಲೆಗಳಲ್ಲಿ ತಯಾರಿಸಲ್ಪಟ್ಟ ಮಿತ ದೃಷ್ಟಿಕೋನದ ಅಧ್ಯಾಪಕ, ಪ್ರಾಧ್ಯಾಪಕ ವರ್ಗದಿಂದ ಆ ಬಗೆಯ ಬದಲಾವಣೆಯನ್ನು ನಿರೀಕ್ಷಿಸಲು ಸಾಧ್ಯವಿಲ್ಲ"[೧೩] ಎನ್ನುತ್ತಾರೆ. ಹಾಗಾದರೆ ಶಿಕ್ಷಣ ಮಾಡಬೇಕಾದ ಕಾರ್ಯವೇನು? ಎಂದು ಸಹಜವಾದ ಪ್ರಶ್ನೆ ಎದುರಾಗುತ್ತದೆ. ಕಾರಂತರು ಈ ಬಗೆಯ ಪ್ರಶ್ನೆಗೆ ಉತ್ತರಿಸುತ್ತಾ ಶಿಕ್ಷಣದ ಆದರ್ಶಗಳು ಏನು ಎಂಬುದನ್ನು ಹೀಗೆ ಹೇಳುತ್ತಾ ಮೂರು ಮುಖ್ಯವಾದ ಅಂಶಗಳನ್ನು ಗುರುತಿಸುತ್ತಾರೆ. ಅವುಗಳೆಂದರೆ;

೧. "ಮಗುವಿನ ಅಭಿರುಚಿಯನ್ನು ತಿಳಿದು ಬೆಳೆಸುವುದು.

೨. ಮಗುವಿಗೆ ಜ್ಞಾನಾಭಿರುಚಿಯಿಂದ ಹುಟ್ಟಿಸಿ ಆನಂದವನ್ನು ದೊರಕಿಸಿಕೊಳ್ಳುವುದಕ್ಕೆ ಸಹಾಯ ಮಾಡುವುದು.

೩. ತನ್ನ ಅನುಭವವನ್ನು ಸಮಾಜಕ್ಕೆ ಅರ್ಪಿಸಲು ತರಬೇತಿ ಮಾಡುವುದು"[೧೪] ಎನ್ನುತ್ತಾರೆ.

ಅಭಿರುಚಿಗೆ ಪೋಷಣೆ ಮತ್ತು ಬೆಳವಣಿಗೆಗಳಾಗದಿದ್ದಲ್ಲಿ ಶಿಕ್ಷಣವು ಹೊರೆಯಾಗಿ ಶಾಲೆ ಅಥವಾ ಕಾಲೇಜು ಶಿಕ್ಷಣದ ನಂತರ ಅಧ್ಯಯನಶೀಲತೆ ಉಳಿಯುವುದಿಲ್ಲ. ಅದು ವ್ಯಕ್ತಿ ಮತ್ತು ಸಮಾಜಕ್ಕೆ ಎರಡಕ್ಕೂ ಪ್ರತಿಕೂಲ. ಕಾರಂತರು ಈ ಬಗೆಯ ಸಂಗತಿಗೆ ಒಂದು ಉದಾಹರಣೆಯನ್ನು ಹೀಗೆ ಕೊಡುತ್ತಾರೆ. ಒಂದು ಸಂದರ್ಶನದಲ್ಲಿ ಎಂ.ಎ ಮುಗಿಸಿ ಆರೆಂಟು ವರ್ಷಗಳಾದ ಉದ್ಯೋಗಾಕಾಂಕ್ಷಿಗೆ ಪ್ರಶ್ನೆ ಕೇಳಿದಾಗ "ಕಾಲೇಜು ಬಿಟ್ಟ ನಂತರ ಈ ಆರೆಂಟು ವರ್ಷಗಳಲ್ಲಿ ಹಾಗೆ ಓದಿಕೊಂಡ ವಿಷಯಗಳನ್ನು ಕುರಿತು ಮುಂದೆ ನೀವು ಯಾವ ಗ್ರಂಥ ಓದಿದಿರಿ ಎಂದು ಕೇಳಿದಾಗ ನನಗೆ ದೊರಕಿದ – ಉತ್ತರ ಚಂದಮಾಮ ಅಥವಾ ಅದರಂತಿರುವ ಒಂದೆರಡು ಪತ್ರಿಕೆಗಳ ಹೆಸರುಗಳು"೧೫ ಎನ್ನುತ್ತಾ ತಮ್ಮ ವಿಷಯಗಳನ್ನು ಕುರಿತು ಅಸಕ್ತಿಯನ್ನು ಕೆರಳಿಸದೆ ಹೋದದ್ದು ಇದಕ್ಕೆ ಕಾರಣವೆಂದು ಕಾರಂತರು ಅರ್ಥೈಸುತ್ತಾರೆ. ಅಭಿರುಚಿ ಕಾರಂತರ ಶಿಕ್ಷಣ ಪರಿಕಲ್ಪನೆಗಳಲ್ಲಿ ಬಹಳ ಪ್ರಮುಖ ಸ್ಥಾನವನ್ನು ಪಡೆದುಕೊಳ್ಳುತ್ತದೆ. ಕಾರಂತರು ತಾನು ಕಂಡ ಅನೇಕ ಶಾಲೆಗಳ ಸ್ಥಿತಿಯನ್ನು ಹೇಳುವಾಗ ಅಲ್ಲೆಲ್ಲಾ ಇರುವ ವಾತಾವರಣ ಹೆಚ್ಚಾಗಿ ನಿರುತ್ಸಾಹಗೊಳಿಸುವಂತಹದು. ಈ ಶಾಲೆಗಳಲ್ಲಿ ವಿದ್ಯಾರ್ಥಿಗಳ ಪಾತ್ರ ಕೇಳುವುದಕ್ಕೆ ಸೀಮಿತವಾಗಿರುವುದು, ತಮಗೆ ಪ್ರಸ್ತುತವಲ್ಲದ ಅಂಶಗಳು ಪಠ್ಯ ಕ್ರಮದಲ್ಲಿರುವುದು, ಇರುವ ವಿಷಯಗಳಲ್ಲಿ ಹಲವು ತಮ್ಮ ಗ್ರಹಣ ಶಕ್ತಿಗೆ ಎಟುಕದಿರುವುದು ಮೊದಲಾದವುಗಳಾಗಿವೆ. "ವಿದ್ಯಾರ್ಥಿಗಳ ಅನುಭವಕ್ಕೆ, ಗ್ರಹಣಶಕ್ತಿಗೆ ಎಟುಕದ ಯಾವ ವಿಷಯವನ್ನು ಹೇಳಿದರೂ ಅವರಿಂದ ನಿರುತ್ಸಾಹ ಹುಟ್ಟುತ್ತದೆ. ಶಿಕ್ಷಣ ಬರಡಾಗುತ್ತದೆ. ಮಕ್ಕಳ ಪಠ್ಯಕ್ರಮವನ್ನು ಏರ್ಪಡಿಸುವಾಗ ಅವರಿಗಾಗಿ ಗ್ರಂಥಗಳನ್ನು ಬರೆಯುವಾಗ, ಅವರಿಗೆ ತಿಳಿಯದ ವಿಷಯಗಳನ್ನು ಹೇಳಬೇಕಾಗಿ ಬಂದಾಗಲೆಲ್ಲ ತಿಳಿದ ವಿಷಯಗಳೊಡನೆ ನೇರವಾಗಿ ಸಂಬಂಧವನ್ನು ತೋರಿಸಿಯೇ ಅವರ ಅನುಭವದ ಪ್ರಯೋಜನವನ್ನು ಪಡೆದುಕೊಂಡು ಮುಂದುವರಿಯ ಬೇಕು"೧೬ ಎನ್ನುತ್ತಾರೆ. ಅಂದರೆ ವಿದ್ಯಾರ್ಥಿಗಳಿಗೆ ತರಗತಿಗಳಲ್ಲಿ ಕೇಳಿದ ಪ್ರಶ್ನೆಗಳಿಗೆ ಉತ್ತರ ಹೇಳುವುದಕ್ಕೆ, ವಿದ್ಯಾರ್ಥಿಗಳ ಪಾತ್ರವನ್ನು ಸೀಮಿತಗೊಳಿಸದೆ ಪ್ರಶ್ನೆ ಕೇಳುವುದಕ್ಕೆ ಅವರನ್ನು ಪ್ರೋತ್ಸಾಹಿಸುವುದರಿಂದ ಅವರ ಉತ್ಸಾಹವನ್ನು ಕಾಪಾಡಿಕೊಳ್ಳಬಹುದು. ಮೊದಲ ತರಗತಿಗಳ ಭಾಷಾ ಪಾಠದಲ್ಲಿ ಮಗುವಿನ ಗ್ರಾಮೀಣ ಭಾಷೆಗೆ ಆದ್ಯತೆಯನ್ನು ನೀಡಿದರೆ ಮಗುವಿಗೆ ಉಂಟಾಗುವ ಅಪರಿಚಿತತೆಯ ವಾತಾವರಣದಿಂದ ಪಾರುಮಾಡಿ ಉತ್ಸಾಹವನ್ನು ಉಂಟುಮಾಡಬಹುದು. ಕಲಿಕೆಯ ವಾತಾವರಣವನ್ನು ಪರಿಣಾಮಕಾರಿಯಾಗಿಸುವ ಬಗೆಗೆ ಕಾರಂತರು ಸದಾ ಯೋಚನೆಯನ್ನು ಮಾಡುತ್ತಿದ್ದರು. ವಿದ್ಯಾರ್ಥಿಯ ಅಲ್ಪಾನುಭವದ ಮಿತಿಯನ್ನರಿತು, ಅವನ ಅನುಭವದ ಸೀಮೆಯನ್ನು ಅನುಭವವಿಲ್ಲದ ಕ್ಷೇತ್ರಕ್ಕೆ ಜತೆಗೊಳಿಸಬೇಕು. ಆ ಕ್ಷೇತ್ರದ ಕುತೂಹಲವನ್ನು ಹೆಚ್ಚಿಸಬೇಕು. ಮಕ್ಕಳ ಮನಸ್ಸು ತಾನೇ ಅರಳುವಂತೆ ಪ್ರಚೋದಕ ಆವರಣವನ್ನು ಕಲ್ಪಿಸುವುದು ಮುಖ್ಯ ಎಂದು

ಭಾವಿಸಿದ್ದರು. ಪಾಠಗಳನ್ನು ಆಕರ್ಷಕಗೊಳಿಸುವುದರ ಬಗೆಗೆ ಕಾರಂತರ ಮುಖ್ಯ ಚಿಂತನೆಯನ್ನು ಹರಿಸಿದ್ದಾರೆ. ಪಠ್ಯಪುಸ್ತಕಗಳನ್ನು ಓದುತ್ತಾ ಬೋಧಿಸುವ ಕ್ರಮ ಅನಾಕರ್ಷಕ, ಓದುವುದಕ್ಕಿಂತ ಹೇಳುವುದು, ಹೇಳುವುದಕ್ಕಿಂತ ತೋರಿಸುವುದು, ಪ್ರೋಜೆಕ್ಟ್‌ಗಳನ್ನು ನಿರ್ವಹಿಸುವುದು, ಆಟದ ಮೂಲಕ ಕಲಿಸುವುದು, ಪಾಠವನ್ನು ಆಕರ್ಷಕಗೊಳಿಸುತ್ತವೆ ಎಂಬುದನ್ನು ಕಾರಂತರು ಪ್ರಯೋಗಕ್ಕೆ ಹಚ್ಚಿದ್ದರು.

೩.೧.೩ ಸೃಷ್ಟಿಕಾರತ್ವ

ಕಾರಂತರ ಶಿಕ್ಷಣ ಚಿಂತನೆಯ ಬಹಳ ಮುಖ್ಯ ಒಂದು ತತ್ವವಾಗಿಯೇ ಅಭಿರುಚಿ ಬೆಳೆಸುವುದು ಎಂಬ ಸಂಗತಿ ಕಾಣುತ್ತದೆ. ಕಾರಂತರ ಶಿಕ್ಷಣ ದೃಷ್ಟಿಯ ಇನ್ನೊಂದು ಬಹಳ ಮುಖ್ಯ ಪರಿಕಲ್ಪನೆ ಮಕ್ಕಳಲ್ಲಿ ಸೃಷ್ಟಿಕಾರತ್ವವನ್ನು ಬೆಳೆಸುವುದು ಆಗಿತ್ತು. ಸೃಷ್ಟಿಕಾರತ್ವವನ್ನು ಮಕ್ಕಳ ಮೂಲ ಸ್ವಭಾವ ಎಂದು ಗುರುತಿಸುತ್ತಾರೆ. ಈ ಬಗೆಯ ಸೃಷ್ಟಿಕಾರತೆಯ ಗುಣವನ್ನು ಶಿಕ್ಷಣದಲ್ಲಿ ದುಡಿಸಿಕೊಳ್ಳುದಕ್ಕೆ ಬಹಳ ಪ್ರಾಮುಖ್ಯತೆಯನ್ನು ನೀಡುತ್ತಾರೆ. ಕಾರಂತರು ಈ ಗುಣವನ್ನು ಬೇರೆ ಬೇರೆ ಬಗೆಯಲ್ಲಿ ಪರ್ಯಾಯವಾಗಿ ಹೇಳುತ್ತಾ ಹೋಗುತ್ತಾರೆ. ಸೃಷ್ಟಿಕಾರಕ, ತಾವೇ ಸೃಷ್ಟಿಸುವ ಚಪಲ, ಮಕ್ಕಳ ಉತ್ಪಾದಕ ಶಕ್ತಿ ಎಂಬೀ ಮೊದಲಾದ ಪದಗಳನ್ನು ಈ ಬಗೆಯ ಅರ್ಥದಲ್ಲಿ ಉಪಯೋಗಿಸುತ್ತಾರೆ. "ಮಗುವಿನ ಪ್ರಪಂಚ ಮನೋಮಯ, ಅವರ ಚಟುವಟಿಕೆ ಭಾವಮಯ, ಅವರ ಕಾರ್ಯರಂಗ ಸೃಷ್ಟಿಕಾರಕ"[೧೭] ಎನ್ನುವ ಅಭಿಪ್ರಾಯ ಕಾರಂತರದು. ಮಗುವಿನಲ್ಲಿ ಸೃಷ್ಟಿಕಾರಕ ಗುಣವನ್ನು ಪೋಷಿಸಿ ಬೆಳೆಸುವುದರ ಬಗ್ಗೆ ಹೇಳುತ್ತಾ, ಚಿತ್ರ ಬರೆಯುವುದು ಆ ನಿಟ್ಟಿನಲ್ಲಿ ಒಂದು ಎಂದು ತಿಳಿಸಿದ್ದರು. ಶಿಕ್ಷಣ ಕ್ರಮದಿಂದ ವ್ಯಕ್ತಿಯಲ್ಲಿ ಮುಂದೆ ಒಂದು ಬಗೆಯ ವಿವೇಚನಾ ಪ್ರಜ್ಞೆ ಬೆಳೆಯಬೇಕು. ತಲೆಯಲ್ಲಿ ತುಂಬಿಕೊಂಡ ಜ್ಞಾನಕ್ಕೂ, ಮುಂದಣ ಜೀವನಕ್ಕೂ ಪರಸ್ಪರ ಸಂಬಂಧ ಬಾರದಿದ್ದಾಗ, ವ್ಯಕ್ತಿ ಅಪ್ರಬುದ್ಧನಾಗಿಯೇ ಉಳಿಯುವ ಸಾಧ್ಯತೆ ಇದೆ ಎನ್ನುತ್ತಾರೆ. ಕಲಿತದ್ದನ್ನು ಪ್ರಯೋಗ ಮತ್ತು ಸಾಕ್ಷ್ಯಾಧಾರಗಳಿಂದ ತರ್ಕಿಸುವ ಸಾಮರ್ಥ್ಯ ವ್ಯಕ್ತಿಗೆ ಇರಬೇಕಾಗುತ್ತದೆ. ಈ ಗುಣವನ್ನು ಜ್ಞಾನ ಸಂಗ್ರಹಿಸುವ ಕಾಲದಲ್ಲೇ ಬೆಳೆಸಬೇಕು. ಪಠ್ಯಗಳು ಸಿದ್ಧಾಂತಗಳನ್ನು ಸ್ಮರಣೆಯಲ್ಲಿ ಇರಿಸಿಕೊಳ್ಳಲು ಸಾಧ್ಯವಾಗುವಂತೆ ಕಲಿಸದೆ, ಪ್ರಯೋಗ ಮತ್ತು ಸಾಕ್ಷ್ಯಗಳ ಆಧಾರದಲ್ಲಿ ತೆಗೆದುಕೊಳ್ಳಬಹುದಾದ ನಿರ್ಣಯಗಳನ್ನು ಕಲಿಸಿ ಸಿದ್ಧಾಂತಗಳನ್ನು ತಮ್ಮದಾಗಿಸಿಕೊಳ್ಳಲು ಅವಕಾಶ ಕಲ್ಪಸಬೇಕೆಂದು ಕಾರಂತರ ಅಭಿಪ್ರಾಯವಾಗಿತ್ತು.

"ಅಭಿರುಚಿ, ಸೃಷ್ಟಿಕಾರತ್ವ ಮತ್ತು ವಿವೇಚನೆ ಇವು ಮೂರು ಕಾರಂತರ ಶೈಕ್ಷಣಿಕ ಚಿಂತನೆಗಳ ಮುಖ್ಯ ಆಧಾರಗಳೆನ್ನಬಹುದು. ಇವುಗಳ ಸಾಧನೆಯಿಂದ ವ್ಯಕ್ತಿಯ ಆಂತರಿಕ ವಿಕಾಸವಾಗುತ್ತದೆ.

ಅಂಥ ವಿಕಾಸದಿಂದ ತನ್ನ ಸ್ಥಾನವನ್ನು ತಿಳಿದುಕೊಂಡು ಶಕ್ತಿ ಸಾಮರ್ಥ್ಯಗಳನ್ನು ಬೆಳೆಸಿಕೊಳ್ಳುತ್ತಾ ಅವರು ಮುಂದಿನ ದಾರಿ ಅರಿತುಕೊಳ್ಳುವುದು ಸಮಾಜದ ಹಿತಕ್ಕೂ ಶ್ರೇಯಸ್ಸಿಗೂ ಕಾರಣವಾಗುತ್ತದೆ"[೨೫] ಎಂಬ ಈ ಮಾತು ಕಾರಂತರ ಶೈಕ್ಷಣಿಕ ಚಿಂತನೆಯ ಸರಿಯಾದ ಮೌಲ್ಯಮಾಪನವಾಗಿದೆ. ಕಾರಂತರ ಈ ಚಿಂತನೆಯ ಭಾಗ ಕೇವಲ ಚಿಂತನೆಯ ಭಾಗವಾಗಿ ಮಾತ್ರ ಉಳಿಯದೆ ಮುಂದೆ ಅದೇ ಪ್ರಯೋಗಶೀಲವಾಯಿತು. ಅವರು ಸ್ಥಾಪನೆ ಮಾಡಿದ 'ಬಾಲವನ' ಮೊದಲಾದ ಪ್ರಯತ್ನಗಳು ಇದಕ್ಕೆ ಉದಾಹರಣೆ. ಹೀಗಾಗಿ ಕಾರಂತರದು ಒಂದು ಬಗೆಯ ಪ್ರಯೋಗಶೀಲ ಚಿಂತನೆಯಾಗಿತ್ತು. ಗಾಂಧೀಜಿ ಮತ್ತು ರಾಜಗೋಪಾಲಾಚಾರಿಯವರು ಪ್ರತಿಪಾದಿಸಿದ 'ಬೇಸಿಕ್ ಎಜುಕೇಶನ್' ಎಂಬ ಪರಿಕಲ್ಪನೆಯನ್ನು ಕಾರಂತರು ವಿರೋಧಿಸುತ್ತಾರೆ. ಗಾಂಧೀಜಿ ನೂಲುವ ವೃತ್ತಿಗೂ, ಶಿಕ್ಷಣಕ್ಕೂ ಗಂಟುಹಾಕಿದರು. ನೂಲುವ ವೃತ್ತಿಯು ಸಂಪಾದನೆಯ ಗುರಿಯುಳ್ಳದ್ದು. ಕೃಷಿ, ತೋಟಗಾರಿಕೆಯಂಥವೂ ಇದೇ ರೀತಿಯವು. ಇವುಗಳು ಅವರ ಶಾರೀರಿಕ ಶಕ್ತಿಗೆ ಮೀರಿದ್ದರಿಂದ ಅವರ ಆಸಕ್ತಿಗೆ ಹೊಂದುವಂಥದ್ದಲ್ಲ, ಹಣವೇ ಪ್ರಧಾನವಾದ್ದರಿಂದ ಅಲ್ಲಿ ಸೃಜನಾತ್ಮಕ ಚಟುವಟಿಕೆಗಳು ನಡೆಯುವುದಿಲ್ಲ ಎಂದು ಹೇಳುತ್ತಿದ್ದರು.

೩.೧.೪ ಶಿಕ್ಷಣ : ವಯಸ್ಸು ಮತ್ತು ಮನಸ್ಸು

ವಿದ್ಯಾರ್ಥಿಯ ವಯಸ್ಸು ಮತ್ತು ಮನಸ್ಸು ಎರಡಕ್ಕೂ ಸ್ಥಾನವಿಲ್ಲದ ಶಿಕ್ಷಣ ವ್ಯವಸ್ಥೆ ಕಾರಂತರ ಪ್ರಶ್ನೆಗೆ ಒಳಗಾಗುತ್ತದೆ. ಶಿಕ್ಷಕರು ಕೂಡ ಹಿರಿಯರು ಸಂಗ್ರಹಿಸಿಟ್ಟಿದ್ದ ಜ್ಞಾನ ಭಂಡಾರವನ್ನು ಮಕ್ಕಳ ತಲೆಯಲ್ಲಿ ತುರುಕಿಸುವ ಪ್ರಯತ್ನ ಮಾಡುತ್ತಾರೆ. ಒತ್ತಾಯ ಪೂರ್ವಕವಾದ ಬೋಧನೆ ಮತ್ತು ಕಲಿಕೆ ಶಿಕ್ಷೆಯಾದೀತು ಎನ್ನುತ್ತಾರೆ. ಕಲಿಕೆಗೆ ತಕ್ಕ ಆವರಣ ಹಾಗೂ ಪ್ರಚೋದನೆ ಬೇಕು. ಪ್ರಚೋದನೆ ನೀಡಬಲ್ಲ ಆವರಣ ಇದ್ದಾಗ ಮಕ್ಕಳು ಸ್ವಯಂ ಸ್ಫೂರ್ತಿಯಿಂದ ಕಲಿಯುತ್ತಾರೆ ಎಂದು ಕಾರಂತರು ನಿರೂಪಿಸುವ ಸಂಗತಿ ಸರಿಯಾಗಿಯೇ ಇದೆ. ಕಲಿಯುವ ಪರಿಸರ ಕಲಿಕೆಗೆ ಪೂರಕವೂ ಮತ್ತು ಕಲಿಯಲು ವಿದ್ಯಾರ್ಥಿಯನ್ನು ಪ್ರಚೋದಿಸುವಂತಹದು ಆಗಿರಬೇಕು. ಅಂತಹ ಸಂದರ್ಭದಲ್ಲಷ್ಟೆ ವಿದ್ಯಾರ್ಥಿ ಸ್ವಯಂ ಪ್ರೇರಣೆ ಹೊಂದಿ, ಸ್ಫೂರ್ತರಾಗಿ ಕಲಿಯುತ್ತಾರೆ. ಮಕ್ಕಳ ಆಂತರಿಕ ಭಾವನೆ, ಉತ್ಸಾಹಗಳನ್ನು ಪ್ರಚೋದಿಸಬಲ್ಲ ಆವರಣದಲ್ಲಿ ತಾವು ಆಡುವ, ಮಾಡುವ, ಹೇಳುವ ಶಕ್ತಿ ಬೆಳೆಯುತ್ತದೆ. ತನಗೆ ಗೊತ್ತಿಲ್ಲದ್ದನ್ನು ತಿಳಿಯಬೇಕು, ಗೊತ್ತಿರುವುದನ್ನು ಹೇಳಬೇಕು ಎಂಬ ಆವರಣ ನಿರ್ಮಾಣಗೊಂಡಾಗ ಮಾತ್ರ ಕಲಿಕೆ ಎನ್ನುವುದು ಶಿಕ್ಷೆಯಾಗದೆ, ಆಸಕ್ತಿದಾಯಕವಾಗುತ್ತದೆ. ಆದರೆ ವರ್ತಮಾನದ ಶಿಕ್ಷಣ ವ್ಯವಸ್ಥೆಯಲ್ಲಿ ಹೆಜ್ಜೆ ಹೆಜ್ಜೆಗೂ ಬೋಧನೆ ಎಂಬುದು ಹೆಚ್ಚಾಗಿದೆ. ಮಗು ತಾನಾಗಿ ತನಗೆ ತಿಳಿದಿದ್ದನ್ನು ಹೇಳುವ ಉತ್ಸಾಹವನ್ನು ತಪ್ಪಿಸಿ ನಾವು ಹೇಳಿದ್ದನ್ನು ಮರುಪಾಠ

ಹೇಳುವ ವಿದ್ಯೆಯನ್ನಾಗಿ ಪರಿವರ್ತಿಸಿರುವುದನ್ನು ಕಾರಂತರು ಗುರುತಿಸುತ್ತಾರೆ. ಶಿಕ್ಷಣ ಕ್ರಮ ಸಾರ್ಥಕಗೊಳ್ಳಬೇಕಾದರೆ ಪ್ರಚೋದನೆಗೆ ಮೊದಲ ಸ್ಥಾನವೂ, ಬೋಧನೆಗೆ ಎರಡನೆಯ ಸ್ಥಾನವೂ ಇರಬೇಕು ಎಂದು ಕಾರಂತರು ಹೇಳುತ್ತಾರೆ.

ಶಿಕ್ಷಣ ಕ್ರಮವೊಂದು ಪರಿಣಾಮಕಾರಿಯಾಗಬೇಕಾದರೆ ಶಿಕ್ಷಕರ ಜವಾಬ್ದಾರಿ ಹೆಚ್ಚಿನದು. ಆದರೆ ಶಿಕ್ಷಕರ ನಿರ್ಲಕ್ಷ್ಯ, ನಿರುತ್ಸಾಹ, ಸೀಮಿತ ವಿಷಯ ಪರಿಜ್ಞಾನವನ್ನು ಕಾರಂತರು ಟೀಕಿಸುತ್ತಾರೆ. ಮಕ್ಕಳ ಒಡಹುಟ್ಟಿದವರಂತೆ ಇರಬೇಕಾದ ಪ್ರಾಥಮಿಕ ಶಿಕ್ಷಕರನ್ನು ತಿದ್ದಬೇಕಾದ ಬಗೆಯನ್ನು ಹೇಳುತ್ತಾರೆ. "ಮಕ್ಕಳನ್ನು ಕುಬ್ಜ ವೃದ್ಧರೆಂದು ತಿಳಿಯದ, ಅವರ ಸಹಕಾರ ವಿಕಾಸಕ್ಕೆ ಹಾತೊರೆಯುವ ಶಿಕ್ಷಕರು ಬೇಕು" ಎಂಬ ಮಾತು ನಿಜಾರ್ಥದಲ್ಲಿ ಬೆಲೆಯುಳ್ಳದ್ದು. ಶಿಕ್ಷಕನಲ್ಲಿ ಜೀವನಪರ್ಯಂತ ಕಲಿಯುವ ವಿದ್ಯಾರ್ಥಿಯ ಮನಸ್ಥಿತಿ ಇರಬೇಕಾದ್ದನ್ನು ಹೇಳುತ್ತಾರೆ.

ಕಾರಂತರು ಒಂದರ್ಥದಲ್ಲಿ ಶಿಕ್ಷಣ, ಪಠ್ಯ ವಿಷಯ, ಬೋಧನಾ ಕ್ರಮ, ಶಿಕ್ಷಕರು, ಶಾಲೆಗಳ ಬಗೆಗೆ ಬರೆಯುತ್ತಲೇ, ನಿರಂತರವಾಗಿ ಮಾತನಾಡುತ್ತಲೇ, ಒಂದು ಶಿಕ್ಷಣದ ಚಿಂತನೆಯನ್ನು ಹೊಸ ಸ್ವರೂಪದಲ್ಲಿ ಕಟ್ಟಿದರು. ಹಾಗೆ ಕಟ್ಟುವ ರಭಸದಲ್ಲಿ ಕೆಲವು ಬಗೆಯ ಅತಿಗಳು ಕೂಡ ಅವರ ಚಿಂತನೆಯೊಳಗೆ ನುಸುಳಿಕೊಂಡಿದೆ. ಹಾಗೆಂದು ಅದೇ ದೋಷ ಎಂದು ಹೇಳಲಾಗದು. ಅಥವಾ ಅವರ ಚಿಂತನೆಗಳು ಒಂದು ಸಾರ್ವಕಾಲಿಕ ಸತ್ಯ ಚಿಂತನೆಗಳೇ ಎಂದು ತಿಳಿದು ಅವುಗಳನ್ನು ಪೂರ್ಣ ಬಗೆಯಲ್ಲಿ ಅನುಷ್ಠಾನಗೊಳಿಸುವುದಾಗಲಿ ಸಾಧ್ಯವಿಲ್ಲ. ಹೀಗಿರುವಾಗ ಅದನ್ನು ಒಂದು ಮುಕ್ತವಿಮರ್ಶೆಯ ಜರಡಿಯೊಳಗೆ ಹಿಡಿಯಬೇಕು. ಅದರೊಳಗೆ ಜಳ್ಳುಗಳು ಬಿದ್ದುಹೋಗುತ್ತವೆ. ಆದರೆ ಅದರ ಮೌಲ್ಯಮಾಪನ ಮಾಡುವಾಗ ಕಾರಂತರ ಪ್ರಯೋಗದ ಕಾಲಘಟ್ಟದ ಅರಿವು ಇದ್ದೇ ಇರಬೇಕು. ಡಾ. ಮಹಾಬಲೇಶ್ವರ ರಾವ್ ಅವರು ಹೇಳುವ ಈ ಮಾತು ಈ ನಿಟ್ಟಿನಲ್ಲಿ ಪರಿಶೀಲಿಸಬೇಕಾದುದು. "ಕಾರಂತರು ವಾದ ಮಂಡನೆಯ ರಭಸದಲ್ಲಿ ಒಂದು ಅತಿಗೆ ಹೋಗಿ ಟೀಕಿಸುತ್ತಾರೆ. ಉದಾಹರಣೆಗೆ ನಮ್ಮ ಶಾಲೆಗಳು ಕಸಾಯಿಖಾನೆಗಳಾಗಿವೆ; ಕೂಡು ಹಟ್ಟಿ-ದೊಡ್ಡಿಗಳಾಗಿವೆ, ಮಕ್ಕಳನ್ನು ಕ್ಲಾಸಿನ ಪಂಜರದಲ್ಲಿ ನಿರ್ಬಂಧಿಸಿದ್ದೇವೆ, ಎಂಬಿತ್ಯಾದಿ ಮಾತುಗಳು ಅತಿರಂಜಿತವಾದ ಸತ್ಯಗಳು. ಕಳೆದ ೪೪ ವರ್ಷಗಳಲ್ಲಿ ಶುಷ್ಕ ಪಠ್ಯಕ್ರಮ, ನೀರಸ ಬೋಧನಾ ವಿಧಾನಗಳು, ನಿರ್ಜೀವ ಶಿಕ್ಷಕರು, ನಿಷ್ಕ್ರೀಯ ಪರೀಕ್ಷಾ ಕ್ರಮ ಹಾಗೂ ಒಟ್ಟಾರೆಯಾಗಿ ಈ ಹೃದಯಹೀನವಾದ ಶಾಲಾ ವ್ಯವಸ್ಥೆ ನಮ್ಮ ಸಮಾಜಕ್ಕೆ ಉತ್ತಮೋತ್ತಮವಾದ ಕವಿ, ಕಲಾವಿದ, ವಿಜ್ಞಾನಿ. ವೈದ್ಯ, ತಂತ್ರಜ್ಞರನ್ನು ಕೊಟ್ಟಿದೆ ಎಂಬುದನ್ನು ಮರೆಯಬಾರದು".[೧೯] ಈ ಮಾತು ಇನ್ನೊಂದು ಮುಖವನ್ನು ಹೇಳುತ್ತದೆ.

ಕಾರಂತರು ವಿಚಾರವಿಮರ್ಶೆಯನ್ನು ಮಾಡುತ್ತಲೇ ತಮ್ಮ ಕಾಲದ ಪಠ್ಯ ಪುಸ್ತಕಗಳ ದುರವಸ್ಥೆಯನ್ನು ಹೇಳುತ್ತಾ "ಇವತ್ತಿನ ಯಾವತ್ತೂ ಪಠ್ಯ ಪುಸ್ತಕಗಳು ಪೂರ್ಣವಾಗಿ 'Statement of facts'. ಮನಸ್ಸಿನ ಭಿತ್ತಿಯಲ್ಲಿ ಉಳಿಯಬಹುದಾದ ರೀತಿಯಲ್ಲಿ ಬರವಣಿಗೆ ಇಲ್ಲ. ಆದ್ದರಿಂದ ಬಾಯಿಪಾಠ ಮಾಡುವುದೊಂದೇ ದಾರಿಯಾಗಿದೆ. ಅದಕ್ಕೋಸ್ಕರವಾಗಿಯೇ ಇನ್ನು ಗಿಡ್ಡ ಮಾಡಿ ನೋಟ್ಸ್ ಕೊಡಿ ಎಂದು ವಿದ್ಯಾರ್ಥಿಗಳು ಕೇಳುತ್ತಾರೆ" ಎನ್ನುತ್ತಾರೆ.

ಕಾರಂತರು ಶಿಕ್ಷಣದ ಕುರಿತು ಹೇಳುವಾಗಲೇ, ಭಾರತದ ಸಂದರ್ಭದಲ್ಲಿ ಅಥವಾ ಕರ್ನಾಟಕದ ಸಂದರ್ಭದಲ್ಲಿ ಶಿಕ್ಷಣಕ್ರಮ ಹೇಗೆ ಬದಲಾಗುತ್ತಾ ಬಂತು ಎಂಬುದನ್ನು ಕೂಡ ವಿಮರ್ಶಾತ್ಮಕವಾಗಿ ಗುರುತಿಸುತ್ತಾರೆ. ಶಿಕ್ಷಣದ ದೃಷ್ಟಿ, ಗ್ರಹಿಕೆ ಹೇಗೆ ಬದಲಾಗುತ್ತಿದೆ ಎಂಬುದನ್ನು ಕಾರಂತರು ಗುರುತಿಸುತ್ತಾರೆ. ಶಿಕ್ಷಣದ ವಿಚಾರದಲ್ಲಿ ಹಿಂದಿನ ಜನರ ದೃಷ್ಟಿಯೂ, ಕಾರಂತರು ತಮ್ಮ ಕಾಲದ ದೃಷ್ಟಿಯೂ ಹೇಗೆ ಭಿನ್ನವಾಗಿದೆ ಎಂದು ಹೇಳುತ್ತಾ "ಗುರುವು ತನ್ನ ಜ್ಞಾನವನ್ನು ಮಕ್ಕಳಲ್ಲಿ ತುಂಬಿಸುವುದೇ ಶಿಕ್ಷಣ ಎಂದು ಹಿಂದಿನವರು ತಿಳಿದಿದ್ದರು, ಈಗಿನ ದಿನದಲ್ಲಿ ಗುರುವಿನ ಕೆಲಸ ಮಗುವಿನ ಯಾವತ್ತು ಶಕ್ತಿಗಳನ್ನು ಅರಳಿಸುವುದು, ಎಂದು ಆಗಿದೆ. ಎಲ್ಲ ಮಕ್ಕಳಲ್ಲಿ ನೈಸರ್ಗಿಕವಾದ ಭಾವನಾ, ಕ್ರಿಯಾ, ಉತ್ಪಾದನಾ ಶಕ್ತಿಗಳಿರುತ್ತದೆ. ಇವು ಒಂದೊಂದು ಶಿಶುವಿನಲ್ಲಿರಬಹುದಾದರೂ, ಶಿಕ್ಷಕನಾದವನು ಅದನ್ನು, ಆದಷ್ಟು ಒಳ್ಳೆಯ ರೀತಿಯಿಂದ ವಿಕಸಿಸಲು ಯತ್ನಿಸಬೇಕೆಂದು ತಿಳಿಸುತ್ತಾರೆ".[೨೦] ಹೀಗೆ ಬದಲಾವಣೆಯನ್ನು ಗುರುತಿಸುತ್ತಲೇ, 'ಮಗುವಿಗೆ ಹೀಗೆ ಮಾಡು' ಎಂದು ಹೇಳುವುದರಲ್ಲಿ ಹಿಂದಿನ ಶಿಕ್ಷಣ ಕ್ರಮ ಪ್ರವೃತ್ತವಾಗಿದ್ದರೆ ಅದರಲ್ಲಿ ಮಗುವಿಗೆ ಜ್ಞಾನವನ್ನು ತುಂಬಿಸುವ ಯತ್ನವೇ ಪ್ರಧಾನವಾಗಿರುತ್ತದೆ. ಆದರೆ ಕಾರಂತರ ಚಿಂತನೆಯ ಶಿಕ್ಷಣ ಕ್ರಮದಲ್ಲಿ ಜ್ಞಾನವನ್ನು ತುಂಬಿಸುವುದಕ್ಕಿಂತ ಜ್ಞಾನವನ್ನು ಸಹಜವಾಗಿ ಬೆಳೆಯಲು ಬೇಕಾದ ಆವರಣವನ್ನು ಕಲ್ಪಿಸುವುದಕ್ಕೆ ಪ್ರಾಧಾನ್ಯ. ಮಗುವಿಗೆ ಅಧ್ಯಾಪಕರು ತಿಳಿಸುವುದಕ್ಕಿಂತ ಮಗುವಿಗೆ ತಾನೇ ತಿಳಿಯಬೇಕು, ತಿಳಿದುದನ್ನು ತಾನಾಗಿ ಹೇಳಬೇಕು ಎಂದೆಣಿಸುವ ಹಾಗೆ ಶಿಕ್ಷಣ ರೂಪುಗೊಳ್ಳಬೇಕೆಂದು ಬಯಸಿದ್ದರು. ಮಗುವು ತಾನು ಕಂಡ ವಸ್ತುಗಳನ್ನು ತಾನಾಗಿಯೇ, ತನ್ನ ಅನುಭವಕ್ಕೆ ಸಹಜವಾಗಿಯೇ ಅಭಿವ್ಯಕ್ತಿಪಡಿಸಲು ಅವಕಾಶ ಮಾಡುವಂತೆ ಶಿಕ್ಷಣ ರೂಪುಗೊಳ್ಳಬೇಕು ಎನ್ನುತ್ತಿದ್ದರು.

೩.೧.೫ ಕ್ರಿಯಾಶೀಲ ಚಟುವಟಿಕೆಗಳು

ಮಕ್ಕಳ ಶಿಕ್ಷಣದಲ್ಲಿ ಚಟುವಟಿಕೆಗಳು ಪ್ರಧಾನವಾಗಬೇಕು. ಈ ಚಟುವಟಿಕೆಗಳೇ ಮಗುವಿನ ಮನಸ್ಸಿನ ಲಹರಿ ಮತ್ತು ಅಭಿರುಚಿಗಳನ್ನು ಕಂಡುಕೊಳ್ಳುವುದಕ್ಕೆ ಸಹಾಯ ಮಾಡುತ್ತದೆ. ಅದು ಅವರ ಶಕ್ತಿ-ಸಾಮರ್ಥ್ಯಗಳು ಬೆಳೆಯಲು ಅವಕಾಶ ಮಾಡಿಕೊಟ್ಟು, ಆ ಬೆಳವಣಿಗೆಯ ಸಹಾಯದಿಂದಲೇ

ಅವರು ತಮ್ಮ ತಾರುಣ್ಯದಲ್ಲಿ ಕಲಿಯಬೇಕಾದ ವಿಷಯಗಳಿಗೆ ಅನುಕೂಲತೆ ಒದಗಿಸಿಕೊಡಬೇಕು. ಅವರಿಗೆ ತಮ್ಮ ಶಕ್ತಿ, ಸಾಮರ್ಥ್ಯಗಳ ಅರಿವಾಗುತ್ತದೆ. ವ್ಯಕ್ತಿಯ ಆಂತರಿಕ ವಿಕಾಸವೇ ಶಿಕ್ಷಣದ ಮೂಲ ಉದ್ದೇಶವಾಗಿರಬೇಕು.

ಮಕ್ಕಳ ಸೃಷ್ಟಿಶಕ್ತಿ ಪ್ರಚೋದನೆಗೊಳ್ಳಬೇಕಾದರೆ ಅಂಥ ಸೃಷ್ಟಿಗೆ ಬೇಕಾದ ಪ್ರೋತ್ಸಾಹ ಬೇಕು. ಮಗುವಿನ ಆಂತರಿಕ ಭಾವನೆ, ಉತ್ಸಾಹಗಳನ್ನು ಪ್ರಚೋದಿಸಬಲ್ಲ ಆವರಣದಲ್ಲಿ ಮಾತ್ರವೇ ಅಂಥ ಶಕ್ತಿ ಬೆಳೆಯುತ್ತದೆ. ಶಿಕ್ಷಣದಲ್ಲಿ ಪ್ರಚೋದನೆಗಿಂತ ಬೋಧನೆಯೇ ಹೆಚ್ಚಾದರೆ ಶಿಕ್ಷಣ ಎನ್ನುವುದು ನೀರಸವೂ, ನಿಷ್ಪ್ರಯೋಜಕವೂ ಆಗುತ್ತದೆ ಎಂದು ಹೇಳುತ್ತಿದ್ದರು. ಮಗುವಿನಲ್ಲಿ ಕಲಿಕೆಗೆ ಬೇಕಾದ ಕುತೂಹಲವನ್ನು ಕೆರಳಿಸಬೇಕು. ಕುತೂಹಲ ಕೆರಳುವ ಹಾಗೆ ಪ್ರೇರೇಪಿಸಬೇಕು. ಯಾವಾಗ ಮಗುವಿನಲ್ಲಿ ಕುತೂಹಲ ಕೆರಳುತ್ತದೋ ಅದು ಬೋಧನೆಗೆ ಉಚಿತ ಕಾಲ ಎಂದು ಕಾರಂತರು ತಿಳಿಸುತ್ತಾರೆ.

ಹಿರಿಯರಿಗೆ ತೋಚಿದ್ದನ್ನು ಮಗುವಿನಿಂದ ಕಂಠಪಾಠ ಮಾಡಿಸುವುದು ಶಿಕ್ಷಣವಲ್ಲ, ನಿಜವಾದ ಶಿಕ್ಷಣ ಆರಂಭವಾಗುವುದೇ ಮಗುವಿನಲ್ಲಿ ಹುಟ್ಟುವ ಕುತೂಹಲದಿಂದ. ಈ ಕುತೂಹಲ ಹುಟ್ಟದೆ ಕೇವಲ ಕಂಠಪಾಠವು ಎಷ್ಟೇ ಆದರೂ ಅದು ಶಿಕ್ಷಣವಾಗಲಾರದು. ಇದರ ಬಗೆಗೆ ಕಾರಂತರು ಹೀಗೆ ಹೇಳುತ್ತಾರೆ. "ಉಪಾಧ್ಯಾಯ ಎಷ್ಟು ಪ್ರಶ್ನೆ ಕೇಳುತ್ತಾನೆನ್ನುವುದು ಮುಖ್ಯವಲ್ಲ. ಎಷ್ಟು ಪ್ರಶ್ನೆಗಳಿಗೆ ಮಕ್ಕಳು ಉತ್ತರ ಕೊಡುತ್ತಾರೆನ್ನುವುದು ಮುಖ್ಯವಲ್ಲ. ಜಗತ್ತನ್ನು ಕುರಿತು, ತಮ್ಮ ಸುತ್ತಣ ಜೀವನವನ್ನು ಕುರಿತು, ಆ ಮಕ್ಕಳು ಉಪಾಧ್ಯಾಯರನ್ನು ಕುರಿತು ಎಷ್ಟು ಪ್ರಶ್ನೆಗಳನ್ನು ಕೇಳುತ್ತವೆ ಎನ್ನುವುದು ಮುಖ್ಯ. ಶಾಲೆಗೆ ಬರುವ ಮೊದಲು ತಾಯಂದಿರಲ್ಲಿ, ಅಣ್ಣ ತಮ್ಮಂದಿರಲ್ಲಿ ಎಷ್ಟೆಷ್ಟೋ ಪ್ರಶ್ನೆಗಳನ್ನು ಕೇಳುತ್ತಿದ್ದ ಮಗುವನ್ನು ಶಾಲೆಗೆ ತಂದು ಮೂಕವಾಗಿ ಕುಳ್ಳಿರಿಸಿ ಉಪಾಧ್ಯಾಯರ ಮಾತುಗಳನ್ನು ಮಾತ್ರವೇ ಕೇಳಬೇಕಾದ ಒಂದು ಗೊಂಬೆ ಆ ಮಗುವಾದರೆ, ಜ್ಞಾನದ ಪಾಲಿಗೂ ಆ ಮಗು ಮೂಕ ಗೊಂಬೆಯಾದೀತು"[೨೧] ಎನ್ನುತ್ತಾರೆ. ಹೀಗಾಗಿ ಸದ್ಯದ ಕ್ರಮವನ್ನು, ಪಠ್ಯಪುಸ್ತಕಗಳನ್ನು, ಅವರ ವಿಷಯಗಳನ್ನು, ತಿದ್ದಬೇಕು. ಬದಲಾಯಿಸಬೇಕು. ಈ ಮೂಲಕ ಒಂದು ಕ್ರಿಯಾಶೀಲ, ಚಟುವಟಿಕೆಪೂರ್ಣ ಶಿಕ್ಷಣಕ್ರಮಕ್ಕಾಗಿ ಅಪೇಕ್ಷಿಸಿದ್ದರು. ಶಿಶುವಿಗೆ ಒಂದು ಮನೋಧರ್ಮವುಂಟು, ಅದರದೇ ಮಾನಸಿಕ ಪ್ರವೃತ್ತಿಯೊಂದುಂಟು, ಶಿಶುವಿನ ಚಟುವಟಿಕೆ ಎಂಬುದೊಂದಿದೆ. ಹೀಗಾಗಿ ಮಗುವಿಗೆ ಒದಗಿಸುವ ಯಾವುದೇ ಶಿಕ್ಷಣವನ್ನು ಅದರ ಮನೋಧರ್ಮದ, ಶರೀರ ಸ್ವಭಾವದ ಅನುಸಾರವಾಗಿಯೇ ನಡೆಯಬೇಕು. ಪ್ರೌಢಶಿಕ್ಷಣದ ಸಂದರ್ಭದಲ್ಲಿ ಜ್ಞಾನತೃಷೆ ಪ್ರಪಂಚದ ವ್ಯಾಪಾರಗಳಲ್ಲಿ ಆಸಕ್ತಿ ಬೆಳೆಯುವಂತೆ ಅವಕಾಶಗಳನ್ನು ಸೃಷ್ಟಿಸಬೇಕು. ಮಕ್ಕಳಿಗೆ ತಮ್ಮನ್ನು ತಾವೇ ಏತಕ್ಕಾಗಿ ಸಮರ್ಥರು ಎಂದು ಕಂಡುಕೊಳ್ಳುವ ಅವಕಾಶವನ್ನು ಒದಗಿಸಬೇಕು. ಶಾಲೆಯಲ್ಲಿ ವಿಧಿಸುವ

ವಿಷಯಗಳ ಹೊರತಾಗಿ, ಮಗುವಿಗೆ ತಿಳಿದಿರುವ ಇನ್ಯಾವುದೇ ವಿಷಯವನ್ನು ಅಳೆಯುವ ವ್ಯವಸ್ಥೆ ಇಲ್ಲದ ಶಿಕ್ಷಣ ಕ್ರಮದ ಕುರಿತು ಕಾರಂತರು ವಿಷಾದದಿಂದ ಹೇಳುತ್ತಾರೆ.

ಕಾರಂತರ ಶಿಕ್ಷಣದ ಚಿಂತನೆ ಕಾರ್ಯರೂಪಕ್ಕೆ ಬರುವಂತಾಗಲು ತಾವೇ ಕೆಲವು ತತ್ವಗಳನ್ನು ರೂಪಿಸಿಕೊಂಡಿದ್ದಾರೆ. ಕಾರಂತರ ಶೈಕ್ಷಣಿಕ ಚಿಂತನೆಯಲ್ಲಿ ಸಮಗ್ರವಾಗಿ ಪರಿಶೀಲಿಸಬೇಕಾದ ಭಾಷಾ ಶಿಕ್ಷಣ ಕ್ರಮವನ್ನು ಬೋಧಿಸುವ ಸಂಗತಿಗಳೆಂದು ಈ ಕೆಳಗಿನ ಸಂಗತಿಗಳನ್ನು ಗುರುತಿಸುತ್ತಾರೆ. ಅವುಗಳೆಂದರೆ,

೧. ಸರಳವಾದ ಪದಗಳನ್ನು ಉಪಯೋಗಿಸಬೇಕು.

೨. ಕ್ಲಿಷ್ಟವಾದ ವಿಚಾರಗಳಿರಬಾರದು.

೩. ಪಾಠಗಳ ವಸ್ತು ವಿಚಾರಗಳು ನಿತ್ಯ ಪರಿಚಯದ್ದಿರಬೇಕು.

೪. ಪಾಠಗಳು ರಂಜಿಸುವ ತೆರನಾಗಿದ್ದು ಮಕ್ಕಳ ನೆನಪಿನಲ್ಲಿ ಉಳಿಯವಂತಿರಬೇಕು.

೫. ಪದ ಜೋಡಣೆಗಳು, ವಾಕ್ಯ ರಚನೆಗಳು ತೊಡಕಿನಿಂದ ಕೂಡಿರಬಾರದು.

೬. ಶೈಲಿಯಲ್ಲಿ ನಾದ ತರಂಗಿತತೆಯನ್ನು ಸೃಷ್ಟಿಸಬೇಕು.

೭. ಸಂಭಾಷಣೆಯು ಸಹಜವಾಗಿದ್ದು ಸ್ವಾರಸ್ಯಕರವಾಗಿರಬೇಕು.

ಇದಕ್ಕೆ ಪೂರಕವಾಗಿ ಕಾರಂತರು 'ಓದುವ ಆಟ'ದ ಮುನ್ನುಡಿಯಲ್ಲಿ ಹೀಗೆ ಹೇಳುತ್ತಾರೆ. "ಮಾತು ಬಂದ ಮೇಲೆಯೇ ಓದು, ಅದು ಮೊದಲು ಅಲ್ಲಿ ಓದಲಿರುವ ಶಬ್ದ ಮೊದಲು ತಿಳಿದಿರಬೇಕು. ಮಾತು, ಓದು, ಬರಹ ಒಟ್ಟೊಟ್ಟು ಹೇಳುವುದು ಗೊಂದಲಕ್ಕೆ ಕಾರಣ. ಹಾಗಾಗಿ ಯಾವುದೇ ಪಾಠದಲ್ಲಿ ತೋರಿಸಿರುವ ಶಬ್ಧಗಳನ್ನು ಮಕ್ಕಳೊಡನೆ ಮಾತಾಡಿ, ಅವರಿಗೆ ಮೊದಲು ಅವುಗಳ ಪರಿಚಯ ಮಾಡಿಸಬೇಕು. ಅದಕ್ಕೆ ಸಂಭಾಷಣೆ ಮುಖ್ಯ" ಎಂದು ಹೇಳುತ್ತಿದ್ದರು.

ಹೀಗೆ ಕಾರಂತರ ಗ್ರಹಿಕೆಯ ಶಿಕ್ಷಣ ಎನ್ನುವುದು ಬಹಳ ಮೂಲಭೂತವಾಗಿ ಮಗುವಿನ ಮನಸ್ಸಿನ ಗ್ರಹಿಕೆಯಿಂದ ಹುಟ್ಟಿಕೊಂಡದ್ದಾಗಿತ್ತು. ಹಾಗಾಗಿ ಮಗುವಿನ ಅಭಿರುಚಿ, ಆಸಕ್ತಿಗಳಿಗೆ ಅನುಗುಣವಾದ ವಿಷಯಗಳನ್ನು ಕಲಿಸಿಕೊಡುವುದರ ಬಗ್ಗೆ ಮಾತನಾಡುತ್ತಾರೆ. ಅವರ ಶಿಕ್ಷಣ ಚಿಂತನೆ ಹಲವು ವರ್ಷಗಳ ಪ್ರಯೋಗದ ಭಾಗವೂ ಹೌದು. ಹಾಗೆಯೇ ಈ ಚಿಂತನೆಯ ಮುಂದಿನ ಭಾಗವೇ ಪ್ರಯೋಗವೂ ಹೌದು. ಒಬ್ಬ ಸಾಹಿತಿಯಾಗಿ, ಶಿಕ್ಷಣ ಕ್ಷೇತ್ರವನ್ನು ಇಷ್ಟೊಂದು ಗಂಭೀರವಾಗಿ ತೆಗೆದುಕೊಂಡಿದ್ದರು. ಅಲ್ಲಿ ಬೇರೆ ಬೇರೆ ಬಗೆಯ ಚಿಂತನೆಯ ಹೊಳಹುಗಳನ್ನು ಇಟ್ಟುಕೊಂಡೇ ಶಿಕ್ಷಣವನ್ನು ಗ್ರಹಿಸಿದ್ದರು. ಈ ಚಿಂತನೆಯ ಮೂಲಕ ಶಿಕ್ಷಣವು ಹೆಚ್ಚು ಅನುಭವ ಪ್ರಾಮಾಣ್ಯವಾಗುವಂತೆ ಮಾಡಿದ್ದಾರೆ.

ಈ ಗ್ರಹಿಕೆಯ ಒಳಗೆ ಕೆಲವು ಶ್ರೇಷ್ಠತೆಗಳಿವೆ. ಹಾಗೆಯೇ ಕೆಲವು ಮಿತಿಗಳೂ ಇವೆ. ಹಾಗೆಂದು ಕಾರಂತರ ಈ ಚಿಂತನೆಯನ್ನು ನಾವು ನಿರಾಕರಿಸಲಾಗದು. ಮಾತ್ರವಲ್ಲ ನಮ್ಮ ವರ್ತಮಾನದ ಶಿಕ್ಷಣ ವ್ಯವಸ್ಥೆಯ ಬಗೆಗೂ ಕೆಲವು ಪ್ರಶ್ನೆಗಳು, ಧ್ವನಿಗಳು ಹುಟ್ಟಿಕೊಳ್ಳುತ್ತದೆ. ಇಷ್ಟೊಂದು ಆಳವಾಗಿ ಶಿಕ್ಷಣದ ಕುರಿತು ಚಿಂತಿಸಿದ ಕಾರಂತರು ಅದನ್ನು ಇನ್ನೊಂದು ಬಗೆಯಲ್ಲಿ ತಾನೇ ಸ್ವಯಂ ಆಗಿ ಪ್ರಯೋಗಕ್ಕೆ ಒಡ್ಡುವ ಕೆಲಸವನ್ನು ಮಾಡಿದ್ದಾರೆ. ಅದನ್ನು ಅವರ ಶೈಕ್ಷಣಿಕ ಪ್ರಯೋಗಗಳು ಎಂಬ ವಿಷಯದಲ್ಲಿ ನೋಡಬಹುದು.

೩.೨ ಕಾರಂತರ ಶೈಕ್ಷಣಿಕ ಚಿಂತನೆಯ ಮೇಲಿನ ಪ್ರಭಾವಗಳು

ಶಿವರಾಮ ಕಾರಂತರು ಸ್ವತಃ ಒಬ್ಬ ಶಿಕ್ಷಣ ಸಿದ್ಧಾಂತಿಯಲ್ಲದಿದ್ದರೂ, ಅವರ ಶೈಕ್ಷಣಿಕ ಚಿಂತನೆ ಪ್ರಯೋಗಗಳಲ್ಲಿ ರೂಸೊ, ಪ್ರೊಬೆಲಾ, ಮೊಂಟೆಸರಿ, ಬಲ್ಲಾರ್ಡ್, ಟಾಗೋರರ ವಿಚಾರಗಳ ಪ್ರಭಾವವು ಎದ್ದು ತೋರುವುದು. ಕಾರಂತರು ಮಕ್ಕಳ ಬಗೆಗೆ ತೀವ್ರ ಕಾಳಜಿ ಮತ್ತು ಅನುಕಂಪ, ಹಾಗೆ ವ್ಯಕ್ತಿವಾದ ಮತ್ತು ಮಾನವತಾವಾದಗಳ ಒಲವು ನಿಲುವುಗಳು ಅವರಲ್ಲಿ ಅನನ್ಯವಾದ ಶೈಕ್ಷಣಿಕ ಪ್ರಯೋಗಶೀಲತೆಯನ್ನು ಮೂಡಿಸಿದವು.

ಕಾರಂತರು ಆಗಿನ ಕಾಲದಲ್ಲಿ ಇದ್ದ ಶಿಕ್ಷಣ ಕ್ರಮವನ್ನು ಹೀಗೆ ಟೀಕಿಸಿದ್ದಾರೆ: "ನಮ್ಮ ಶಿಕ್ಷಣ ವಿದ್ಯಾರ್ಥಿಗಳ ಬಾಲ್ಯ ಮತ್ತು ತಾರುಣ್ಯದಲ್ಲಿ ಯಾವುದೇ ಅಭಿರುಚಿ ಬೆಳೆಸುವಲ್ಲಿ ವಿಫಲವಾಗುತ್ತಿದೆ. ಇದರ ಪರಿಣಾಮವಾಗಿ ಶಿಕ್ಷಣ ಶಿಕ್ಷೆ ಆಗುತ್ತಿದೆ. ಮಕ್ಕಳ ಇಂದ್ರಿಯಗಳನ್ನು ಪೋಷಿಸುವ, ಬೆಳೆಸುವ ಆ ಇಂದ್ರಿಯಗಳ ಮೂಲಕ ಜಗತ್ತನ್ನು ಅರಿಯಲು ನೆರವಾಗುವ ಇಂದ್ರಿಯ ಶಿಕ್ಷಣ ದೊರೆಯುತ್ತಿಲ್ಲ. ಶಿಕ್ಷಣ ಪದ್ಧತಿ ಸಾರ್ಥಕವಾಗಬೇಕಾದರೆ ಮಕ್ಕಳ ಮನಸ್ಸು, ವಯಸ್ಸು ಪರಿಸರಗಳ ಜ್ಞಾನ ಶಿಕ್ಷಣ ಕೊಡುವಾತನಿಗೆ ಇರಬೇಕು. ಆದರೆ ಮಗುವಿನ ಸ್ವಂತ ಮನಸ್ಸು ಅರಳಲು ಬೇಕಾದ ಆವರಣ, ಸಾಧನಗಳನ್ನು ಶಿಕ್ಷಣ ಕ್ರಮದಿಂದ ಕಳಚಿ ಬಿಟ್ಟಿದ್ದೇವೆ. ಅವರಲ್ಲಿ ಆಸಕ್ತಿ ಹುಟ್ಟಿಸುವ ಹಾಗೆ ನಮ್ಮ ಶಿಕ್ಷಣ ಇಲ್ಲ"[೨೨] ಎಂದು ಹೇಳಿದ್ದಾರೆ. ಕಾರಂತರ ಈ ಮಾತನ್ನು ಕಂಡಾಗ ಇವರ ಶೈಕ್ಷಣಿಕ ಚಿಂತನೆಗೆ ರೂಸೊ ಪ್ರಭಾವ ಬೀರಿದ್ದನ್ನು ಗಮನಿಸಬಹುದು. ರೂಸೊ ನಾಲ್ಕು ಗೋಡೆಗಳ ಮಧ್ಯ ನಿರ್ಧರಿತ ಪಠ್ಯಕ್ರಮಕ್ಕೆ ಅನುಗುಣವಾದ ಕಲಿಕೆಯನ್ನು ಖಂಡಿಸಿದ್ದಾನೆ. ಒಂದು ನಿರ್ದಿಷ್ಟ ವಿಷಯದ ಬೋಧನೆಯ ಮೂಲಕ ವಿಷಯವನ್ನು ತುಂಬಿ ಜ್ಞಾನವಂತರನ್ನಾಗಿಸುವುದನ್ನು ವಿರೋಧಿಸಿದ್ದಾನೆ. ಮಕ್ಕಳ ಇಂದ್ರಿಯಗಳನ್ನು ಪೋಷಿಸುವ, ಬೆಳೆಸುವ ಇಂದ್ರಿಯಗಳ ಮೂಲಕ ಜಗತ್ತನ್ನು ಅರಿಯುವ ಶಿಕ್ಷಣವನ್ನು ಕೊಡಬೇಕು ಎಂದಿದ್ದಾನೆ.

ರೂಸೊನ ಪ್ರಕಾರ ಮಕ್ಕಳಿಗೆ ಶಿಕ್ಷಣ ಸ್ವಾಭಾವಿಕವಾಗಿಯೇ ನಡೆಯಬೇಕು. ಇಲ್ಲಿ ಜ್ಞಾನೇಂದ್ರಿಯಗಳಿಗೆ ತರಬೇತಿ ಕೊಡಬೇಕು. ಮಕ್ಕಳ ಆಟಿಕೆಯ ವಸ್ತುಗಳು ಸಹಜವಾಗಿ ನಿಸರ್ಗದಲ್ಲಿ ಸಿಗುವಂತಿರಬೇಕು. ಮತ್ತು ಹೆಚ್ಚು ಬೆಲೆ ಬಾಳುವ ವಸ್ತುಗಳು ಆಗಿರಬಾರದು. ಹೂ, ಹಣ್ಣು, ಕಲ್ಲು, ಗಿಡ, ಎಲೆ, ಕಾಯಿ, ಕಟ್ಟಿಗೆಯ ತುಂಡುಗಳಲ್ಲಿ ಆಟವಾಡಬೇಕು ಎಂದು ಹೇಳಿದ್ದಾನೆ. ಈ ವಿಷಯದಲ್ಲಿ ರೂಸೊ ಮತ್ತು ಕಾರಂತರು ಸಹಮತರು. ಕಾರಂತರು ಮಕ್ಕಳ ಸೃಷ್ಟಿ ಕ್ರಿಯೆಗೆ ಪೂರಕವಾಗುವ ಮಕ್ಕಳ ಕೂಟದಲ್ಲಿ ಮಕ್ಕಳ ಎಲ್ಲಾ ಬಗೆಯ ಪ್ರಯೋಗಗಳಿಗೂ ಸುತ್ತಲಿನ ನಿಸರ್ಗದಲ್ಲಿ ಲಭ್ಯವಿರುವ ವಸ್ತುಗಳನ್ನು ಬಳಸುತ್ತಿದ್ದರು. ಹೂ, ಹುಲ್ಲು, ಕ್ರೋಟನ್ ಎಲೆ, ಬಣ್ಣಕ್ಕಾಗಿ ಇದ್ದಿಲು, ಕೆಂಪುಕಲ್ಲುಗಳನ್ನು, ಮೈಮೇಲಿನ ಆಭರಣಕ್ಕೆ ತೆಂಗಿನ ಗರಿ, ವೇಷಭೂಷಣಕ್ಕಾಗಿ ಹಳೆಯ ದುಪ್ಪಟಗಳನ್ನು ಬಳಸುತ್ತಿದ್ದರು. ಆ ಮೂಲಕ ಮಕ್ಕಳ ಬುದ್ಧಿ ಶಕ್ತಿಯನ್ನು ಪ್ರಚೋದಿಸುವ ಕ್ರಿಯೆ ನಡೆಯುತ್ತಿತ್ತು.

ಮಗುವಿನ ಕಲಿಕೆಗೆ ನಿರ್ದಿಷ್ಟ ಚೌಕಟ್ಟು ಅಗತ್ಯವಿಲ್ಲ. ಕಲಿಕೆ ಎಂಬುದು ಸಹಜಕ್ರಿಯೆಯ ಜೊತೆಗೆ ಜ್ಞಾನ ಕಾರ್ಯ ನಡೆಯುತ್ತದೆ. ಜ್ಞಾನ ಪಡೆಯಲು ಬೇರೆಯೇ ಸನ್ನಿವೇಶವನ್ನು ನಿರ್ಮಾಣ ಮಾಡಬೇಕಾಗಿಲ್ಲ ಎಂದು ರೂಸೊ ಹೇಳಿದ್ದಾನೆ. ಈ ವಿಷಯವನ್ನು ಶಿವರಾಮ ಕಾರಂತರು ಒಪ್ಪಿಕೊಂಡಿದ್ದಾರೆ. "ಭಾಷೆ ಕಲಿಯುವುದು ಸಂಭಾಷಣೆಯಿಂದ, ಪುಸ್ತಕದಿಂದಲ್ಲ; ಆಲ್ಫಾ ಬೆಟ್‌ನಿಂದಲ್ಲ; ಗ್ರಾಮರ್‌ನಿಂದಲ್ಲ" ಎಂದು ಹೇಳಿದರಲ್ಲದೆ ಭಾಷಾ ಕಲಿಕೆಗೆ ಬೋರ್ಡು, ಪುಸ್ತಕ ಬೇಕಾಗಿಲ್ಲವೆಂದೂ ಸೂಚಿಸಿದರು. ತಾಯಿ ಮಗುವಿಗೆ ಭಾಷೆಯನ್ನು ಕಲಿಸುವಾಗ ವ್ಯಾಕರಣ ಕಲಿಸದೆ ಸಂಭಾಷಣೆಯ ಮೂಲಕ ಭಾಷೆ ಕಲಿಸುವ ಉದಾಹರಣೆಯನ್ನು ನೀಡಿದರು. ಹೀಗೆ ವಿದ್ಯಾರ್ಥಿಗಳಿಗೆ ಭಾಷೆ ಕಲಿಸುವಾಗ ಚೌಕಟ್ಟು ಅಗತ್ಯವಿಲ್ಲ, ಸ್ವಾಭಾವಿಕವಾಗಿ ಕಲಿಸಿ ಎಂದು ಹೇಳಿದರು.

ರೂಸೊ ಮಕ್ಕಳಿಗೆ ಶಿಕ್ಷಣವನ್ನು ಹಂತ ಹಂತವಾಗಿ ಕೊಡಬೇಕು, ಮಕ್ಕಳ ಬೆಳವಣಿಗೆಯು ಹಂತ ಹಂತವಾಗಿ ಸಾಗುತ್ತದೆ. ಆಯಾ ವಯಸ್ಸಿನಲ್ಲಿ ಕಂಡು ಬರುವ ವಿಕಾಸ, ಅವಶ್ಯಕತೆ ಮತ್ತು ಶಕ್ತಿಗಳಿಗನುಸಾರವಾಗಿ ಶಿಕ್ಷಣ ನೀಡಬೇಕು ಎಂದು ಹೇಳಿದ್ದಾನೆ. ಈ ವಿಚಾರವನ್ನು ಕಾರಂತರ ಭಾಷಾ ಶಿಕ್ಷಣ ಕಲಿಕೆಯಲ್ಲಿ ಕಾಣಬಹುದು. ಕಾರಂತರು ಭಾಷಾ ಕಲಿಯುವಿಕೆಯ ಸಂದರ್ಭದಲ್ಲಿ ಮಗುವಿನ ಮೇಲೆ ಹಲವಾರು ಭಾಷೆಗಳನ್ನು ಹೇರಬೇಡಿ. ಒಂದು ಸಲಕ್ಕೆ ಒಂದು ಭಾಷೆ ಸಾಕು ಎಂದು ಹೇಳಿದ್ದಾರೆ.

ರವೀಂದ್ರನಾಥ ಠಾಗೋರರವರು ನಿಸರ್ಗದ ನಿರ್ಮಲ ಏಕಾಂತ ಸ್ಥಳವೇ ತಮ್ಮ ಶೈಕ್ಷಣಿಕ ತತ್ವಗಳ ಕನಸನ್ನು ನನಸುಗೊಳಿಸಲು ಸೂಕ್ತವೆಂದು ಕಲ್ಕತ್ತಾದಿಂದ ೧೦೦ ಮೈಲು ದೂರದ ಬೋಲ್ಪುರದ ಬಳಿ 'ಶಾಂತಿ ನಿಕೇತನ'ವನ್ನು ಆರಂಭಿಸಿದರು. ಇಲ್ಲಿ ಸುತ್ತಲೂ ವಿವಿಧ ಗಿಡ–ಮರ–ಬಳ್ಳಿಗಳ ಹಚ್ಚ ಹಸಿರಾದ ಹುಲ್ಲು ಮತ್ತು ಪಕ್ಷಿ ಸಂಕುಲಗಳು ಹೊರಡಿಸುವ ಕಿಲ ಕಿಲ ನಾದದಿಂದ

ಸಂಸ್ಥೆಯ ಸೊಬಗನ್ನು ಇಮ್ಮಡಿಸಿದರು. ಇದೇ ದಾರಿಯನ್ನು ಕಾರಂತರು ಹಿಡಿದದ್ದನ್ನು ಕಾಣಬಹುದು. ಕಾರಂತರು ಮಕ್ಕಳಿಗೆ ನೈಜ ಶಿಕ್ಷಣ ಕೊಡುವ ಉದ್ದೇಶದಿಂದ ಪುತ್ತೂರಿನಲ್ಲಿ 'ಬಾಲವನ'ವನ್ನು ಆರಂಭಿಸಿದರು. ಇಲ್ಲಿಯೂ ಸುತ್ತಲೂ ವಿವಿಧ ಮರಗಳು, ಬಳ್ಳಿಗಳು ಒಳಗೊಂಡ ಹಚ್ಚ ಹಸಿರಾದ ಪ್ರದೇಶವಾಗಿದೆ. ಇಲ್ಲಿ ವಿವಿಧ ರೀತಿಯ ಪಕ್ಷಿಗಳು ಮತ್ತು ಪ್ರಾಣಿಗಳಲ್ಲಿ ಮಕ್ಕಳಿಗೆ ಆಟವಾಡಲು ಸೂಕ್ತವಾದ ಅವಕಾಶ ಇತ್ತು. ರವೀಂದ್ರರು ಮಕ್ಕಳಿಗಾಗಿ ಶಾಲೆ ಪ್ರಾರಂಭಿಸಿದರು. ಕವಿತೆ ಬರೆದರು. ಹಾಡು ಕಟ್ಟಿದರು. ಮಕ್ಕಳ ಶಿಕ್ಷಣದ ಬರಡುತನ ನಿರ್ಬಂಧವನ್ನು ವಿಡಂಬಿಸುವ ಕಥೆ, ನಾಟಕಗಳನ್ನು ಬರೆದರು. ಲಲಿತಕಲೆಗಳ ತರಬೇತಿ ಮೊದಲಾದ ಭಾವ ಶಿಕ್ಷಣದೊಂದಿಗೆ ರಾಷ್ಟ್ರೀಯತೆಯನ್ನು ಮೀರಿದ ವಿಶ್ವಮಾನವತೆಯ ಘನ ಆದರ್ಶವನ್ನು ಕಂಡಿದ್ದರು. ಕಾರಂತರು ರವೀಂದ್ರರಿಂದ ಪ್ರೇರಣೆ ಪಡೆದು ಭಾವಶಿಕ್ಷಣಕ್ಕೆ ಒತ್ತು ನೀಡಿದರು. ಆದರೆ ರವೀಂದ್ರರಂತೆ ಕಾರಂತರು ರೊಮ್ಯಾಂಟಿಕ್ ಆದರ್ಶವಾದಿಗಳಲ್ಲವಾದುದರಿಂದ ವೈಚಾರಿಕ – ವೈಜ್ಞಾನಿಕ ವಿಷಯಗಳಿಗೂ ಮಹತ್ವ ನೀಡಿದರು. ಪ್ರಾಥಮಿಕದಿಂದ ಹಿಡಿದು ವಿಶ್ವವಿದ್ಯಾನಿಲಯದವರೆಗೆ ಮಾತೃಭಾಷೆಯೇ ಶಿಕ್ಷಣ ಮಾಧ್ಯಮವಾಗಬೇಕೆಂದು ಟಾಗೋರರು ಬಹಳ ತೀವ್ರವಾಗಿ ಪ್ರತಿಪಾದಿಸಿದರು. ಕಾರಂತರು ಟಾಗೋರರಷ್ಟೆ ತೀವ್ರವಾಗಿ ಮಾತೃಭಾಷಾ ಶಿಕ್ಷಣವನ್ನು ಪ್ರತಿಪಾದಿಸಲಿಲ್ಲ. 'ಮಾತೃಭಾಷೆ' ಎಂಬ ಪದ ಬಳಕೆಯಿಂದ ಉದ್ಭವಿಸುವ ತಾಪತ್ರಯಗಳನ್ನು ಗಮನಿಸಿದ ಅವರು ಒಂದು ಹಂತದವರೆಗೆ ಪ್ರಾದೇಶಿಕ ಭಾಷಾ ಶಿಕ್ಷಣ, ಆ ಬಳಿಕ ಇಂಗ್ಲಿಷ್ ಕಲಿಕೆ ಪರಿಣಾಮಕಾರಿಯಾಗಿರಬೇಕು ಎಂದು ಸೂಚಿಸಿದರು. ಟಾಗೋರರಿಗೆ ಶಿಕ್ಷಣ ಜೀವದ ಉಸಿರಾಗಿತ್ತು. ಕಾರಂತರಿಗೆ ಅದು ಬಲವಾದ ತುಡಿತ. ಟಾಗೋರರು ಕಂಡ ಕನಸುಗಳು ಈಗ ಒಡೆದಿದೆ. ಕಾರಂತರು ಶಿಕ್ಷಣದಲ್ಲಿ ನಡೆಸಿದ ಹಲವು ಪ್ರಯೋಗಗಳು ಆ ಕಾಲದಲ್ಲಿ ಸಾರ್ವಜನಿಕರ, ಶಿಕ್ಷಕರ ಆದರಕ್ಕೆ ಪಾತ್ರವಾಗಲಿಲ್ಲ. ಇದರರ್ಥ ಕಾರಂತರ ಸಾಧನೆ ಸಣ್ಣದೆಂದಲ್ಲ. ಜನರಿಗೆ ಕಾಣುವ ಕಣ್ಣು, ತಪ್ಪು ಒಪ್ಪಿಕೊಳ್ಳುವ ಔದಾರ್ಯ, ತಿದ್ದಿಕೊಳ್ಳುವ ಮನಸ್ಸು ಇಲ್ಲ ಎಂದರ್ಥ. ಟಾಗೋರರಂತೆ ಕಾರಂತರು ಕೂಡ ವಿಶ್ವವಿದ್ಯಾಲಯ ಶಿಕ್ಷಣದ ಬಗೆಗೆ ಹೆಚ್ಚು ತಲೆ ಕೆಡಿಸಿಕೊಂಡಿಲ್ಲ. ಇವರಿಬ್ಬರ ಗಮನವೆಲ್ಲ ಮಕ್ಕಳ ಶಿಕ್ಷಣದ ಮೇಲಿತ್ತು. ಇದಕ್ಕೆ ಮುಖ್ಯ ಕಾರಣ ಇಬ್ಬರಿಗೂ ತಮ್ಮ ಬಾಲ್ಯದ ಶಿಕ್ಷಣದ ಬಗೆಗಿನ ಅತೃಪ್ತಿ. ಮಕ್ಕಳ ಸ್ವಾತಂತ್ರ್ಯ, ಪ್ರೇಮ ಹಾಗೂ ಸಂತಸದ ಬಗೆಗೆ ಟಾಗೋರರಿಗೆ ಅಪಾರವಾದ ಕಾಳಜಿ ಇತ್ತು. ಕಾರಂತರು ಕೂಡ ಮಕ್ಕಳ ಮೇಲಿನ ಪ್ರೇಮದಿಂದ ಕೃತಿ ರಚನೆ ಮಾಡುತ್ತಲೇ ಬಂದರು. ತಮ್ಮ ಭಾಷಣ, ಉಪನ್ಯಾಸಗಳಲ್ಲಿ ಮಕ್ಕಳನ್ನು ಬೆಳೆಸುವ ಕ್ರಮದ ಬಗೆಗೆ ಸಾರ್ವಜನಿಕರ, ಶಿಕ್ಷಕರ ಗಮನ ಸೆಳೆದರು. ಟಾಗೋರರು ಪುಸ್ತಕ ವಿದ್ಯೆಯನ್ನು ದ್ವೇಷಿಸಿದರು. ಸೃಜನಶೀಲ ಶಿಕ್ಷಣವೇ ಅವರ ಗುರಿಯಾಗಿತ್ತು. ಶಾಲೆಗಳನ್ನು ಅವರು ಕಾರ್ಖಾನೆಗಳೆಂದು ಕರೆದರು. ಮಗುವಿನ ವ್ಯಕ್ತಿತ್ವವನ್ನು ಗೌರವಿಸಿ, ಮಕ್ಕಳಲ್ಲಿ ಭರವಸೆ ಇಡಿ ಎಂಬುದು

ಅವರ ಸಂದೇಶವಾಗಿತ್ತು. ಕಾರಂತರೂ ಕೂಡ ಹೆಚ್ಚು ಕಡಿಮೆ ಇದೇ ಧೋರಣೆಯನ್ನು ಪ್ರತಿಪಾದಿಸಿದರು. ಆಧುನಿಕ ಶಿಕ್ಷಣ ಕ್ರಮದ ಹಿಂಸಾತ್ಮಕ ಪ್ರವೃತ್ತಿಯ ಅನುಭವ ಹಾಗೂ ಅದರ ನಿರುಪಯೋಗತನಗಳ ವಿಷಯದಲ್ಲಿ ಟಾಗೋರರು ಮತ್ತು ಕಾರಂತರು ಸಹಮತರು. ಆದ್ದರಿಂದಲೇ ಶಿಕ್ಷಣ ಸುಧಾರಣೆಯ ಹಾದಿಯಲ್ಲಿ ಅವರಿಬ್ಬರೂ ಇಟ್ಟ ಹೆಜ್ಜೆಗಳಲ್ಲಿ ನಾವು ಸಮಾನತೆಯನ್ನು ನೋಡಬಹುದು. ಟಾಗೋರರು ಚಿಕ್ಕ ಮಕ್ಕಳಿಗಾಗಿ ಸಾಹಿತ್ಯವನ್ನು ಸೃಷ್ಟಿಸಿದ್ದಲ್ಲದೆ ಪಠ್ಯ ಪುಸ್ತಕ ಮತ್ತು ಪೂರಕ ಪುಸ್ತಕಗಳನ್ನು ರಚಿಸಿದ್ದಾರೆ. 'ಸಹಜ ಪಾಠ' ಎಂಬ ಅವರ ಬಂಗಾಳಿ ಬಾಲ ಬೋಧೆಯ ಪುಸ್ತಕಗಳು ಇಂದಿಗೂ ತಮ್ಮ ಆಕರ್ಷಣೆಯನ್ನು ಕಳೆದುಕೊಂಡಿಲ್ಲ. ಈ ಪ್ರಯೋಗವನ್ನು ಕಾರಂತರೂ ಮಾಡಿದ್ದಾರೆ. ಕಾರಂತರು ಮಕ್ಕಳಿಗಾಗಿ ಸಿರಿಗನ್ನಡ ಪಾಠ ಮಾಲೆ, ಓದುವ ಆಟ, ಹೂಗನ್ನಡ ಪಾಠ ಮಾಲೆ ಎಂಬ ಪಠ್ಯಗಳನ್ನು ರಚನೆ ಮಾಡಿದ್ದಾರೆ. ಮಕ್ಕಳನ್ನು ಸುಲಭವಾಗಿ ಆಕರ್ಷಿಸುವಂತೆ ಅವರಲ್ಲಿ ಆಸಕ್ತಿ ಸಹಜವಾಗಿ ಬೆಳೆಯುವಂತೆ, ಕಲಿಕೆಯನ್ನು ತಮ್ಮ ಮೇಲೆ ಹೇರಲಾಗುತ್ತಿದೆಯೆಂದು ಯಾವ ಸಂದರ್ಭದಲ್ಲಿಯೂ ಅವರಿಗೆ ಅನ್ನಿಸದಂತೆ ಪಠ್ಯ ಪುಸ್ತಕಗಳನ್ನು ಸಿದ್ಧಪಡಿಸಬೇಕೆಂದು ಟಾಗೋರ್ ಮತ್ತು ಕಾರಂತರ ಏಕಾಭಿಪ್ರಾಯ. ಡಾ. ಕಾರಂತರು ಮಕ್ಕಳಿಗೆ ಓದು, ಬರಹ ಕಲಿಸುವ ವಿಷಯದಲ್ಲಿ ಪಿ.ಬಿ. ಬಲ್ಲಾರ್ಡನ ವಿಚಾರ – ವಿಧಾನಗಳಿಂದ ಪ್ರಭಾವಿತರಾದವರು. ಅವರ ಪ್ರಭಾವದ ಬಗ್ಗೆ ಕಾರಂತರೇ ಸ್ವತಃ ಹೀಗೆ ಹೇಳಿಕೊಂಡಿದ್ದಾರೆ. "ಭಾಷಾ ಶಿಕ್ಷಣಕ್ಕೆ ಬಲ್ಲಾರ್ಡನ ಸೂತ್ರಗಳನ್ನು ಅನುಸರಿಸಿ, ಚಿತ್ರ ಬರೆದುಕೊಟ್ಟು, ವಾಕ್ಯದಿಂದ ಭಾಷೆ ಕಲಿಸುವ ಕ್ರಮವನ್ನು ತಿಳಿಸಿಕೊಟ್ಟ"[೨೩] ಎನ್ನುತ್ತಾರೆ. ಹೀಗೆ ಬಲ್ಲಾರ್ಡನ ಪ್ರಭಾವವನ್ನು ಅವರೇ ಹಲವಾರು ಭಾಷಣಗಳಲ್ಲಿ, ಲೇಖನಗಳಲ್ಲಿ ಹೇಳಿಕೊಂಡಿದ್ದಾರೆ. ಅಕ್ಷರ ಪದ್ಧತಿಯ ಬದಲಿಗೆ ಅರ್ಥಪೂರ್ಣತೆ, ಕಲಿಕೆಯ ಸ್ವಾರಸ್ಯಕ್ಕೆ ಮಹತ್ವ ನೀಡುವ ವಾಕ್ಯ ಪದ್ಧತಿ ಹೆಚ್ಚು ಸೂಕ್ತ. ವಾಕ್ಯಗಳಿಂದ ಶಬ್ಧ – ಶಬ್ಧದಿಂದ ಅಕ್ಷರ ಕಲಿಕೆ ಎಂಬ ತತ್ತ್ವವನ್ನು ಕಾರಂತರು ಒಪ್ಪಿಕೊಂಡು ಪುಸ್ತಕಗಳನ್ನು ಬರೆದರು.

ಹೀಗೆ ಕಾರಂತರ ಚಿಂತನೆ ಮತ್ತು ಪ್ರಯೋಗದ ಮೇಲೆ ಈ ಕೆಲವು ಮುಖ್ಯ ಶಿಕ್ಷಣ ಚಿಂತಕರಾದ ರೂಸೊ, ಟಾಗೋರ್, ಬಲ್ಲಾರ್ಡ್ ಮೊದಲಾದವರ ಚಿಂತನೆಯ ಛಾಯೆ ಕಾರಂತರಲ್ಲಿ ಉಂಟಾಗಿರುವುದು ಕಂಡು ಬರುತ್ತದೆ.

೩.೩ ಕಾರಂತರ ಶೈಕ್ಷಣಿಕ ಪಠ್ಯಗಳು: ವಿಶಿಷ್ಟತೆ ಮತ್ತು ಅನನ್ಯತೆ

ಒಂದು ಶಾಲಾ ಶಿಕ್ಷಣ ವ್ಯವಸ್ಥೆಯಲ್ಲಿ ಪಠ್ಯಪುಸ್ತಕಗಳ ಹಿರಿಮೆ ಬಹಳ ಮಹತ್ವದ್ದು. ಆದರೆ ಶಾಲೆಗಳಲ್ಲಿ ಪಠ್ಯಪುಸ್ತಕಗಳು ಮಗುವಿನಲ್ಲಿ 'ಓದು' ಎನ್ನುವ ಸಂಗತಿಯೂ ಆಕರ್ಷಕಗೊಳಿಸಲು ವಿಫಲವಾಗಿರುವುದನ್ನು ಗಮನಿಸಿದ ಕಾರಂತರು, ಆ ಬಗೆಯಲ್ಲಿ ಹೊಸ ಪ್ರಯತ್ನವನ್ನು ಮಾಡಿದ್ದಾರೆ. ಪಠ್ಯ ಪುಸ್ತಕಗಳ ಏಕರೂಪತೆಯಿಂದ ವಿದ್ಯಾರ್ಥಿಗಳ ಬರವಣಿಗೆಯಲ್ಲಿ ಕೃತಕತೆ, ನಿರ್ಜೀವತೆ ಕಾಣಿಸುತ್ತದೆ. ಮಕ್ಕಳ ಪಠ್ಯ ಪುಸ್ತಕದಲ್ಲಿ ಬಳಕೆಯಾದ ಶಬ್ದಗಳು ಮಕ್ಕಳ ನಿತ್ಯ ಜೀವನ ಸಂದರ್ಭದಲ್ಲಿ ಬಳಕೆಯಾಗುವಂತಹದೇ ಆಗಿದ್ದು, ಇದನ್ನು ಕಾರಂತರು ಗುರುತಿಸುತ್ತಾರೆ. ಮಕ್ಕಳ ಅನುಭವದಲ್ಲಿ ಎಟುಕುವುದನ್ನೇ ಬರೆಯಬೇಕಾದ ಅಗತ್ಯವಿದೆ ಎಂದು ಪ್ರತಿಪಾದಿಸಿದ್ದರು. ದಕ್ಕುವ ಅನುಭವದ ಮೂಲಕವೇ ಅವರ ಪದ ಸಂಪತ್ತು ಬೆಳೆಯಬೇಕು ಹೊರತು ಹೊಸ ಪದಗಳನ್ನು ತುರುಕುವುದಲ್ಲ ಎಂದಿದ್ದಾರೆ.

೧೯೩೪-೧೯೪೪ರ ಸಂದರ್ಭದಲ್ಲಿ ಕಾರಂತರು ಪ್ರಾಥಮಿಕ ಶಾಲಾ ಮಕ್ಕಳನ್ನು ದೃಷ್ಟಿಯಲ್ಲಿಟ್ಟುಕೊಂಡು 'ಸಿರಿಗನ್ನಡ ಪಾಠಮಾಲೆ' ಮತ್ತು 'ಹೂಗನ್ನಡ ಪಾಠಮಾಲೆ' ಎಂಬ ಏಳು ಕ್ರಮಿಕ ಪಠ್ಯ ಪುಸ್ತಕಗಳನ್ನು ರಚಿಸಿದರು. ಮಕ್ಕಳಿಗೆ ಪ್ರಿಯವಾಗುವ ರೀತಿಯ ಪಾಠ ಪುಸ್ತಕಗಳು ಇವಾಗಿದ್ದವು. ಮಳೆ, ಬೆಳಗು, ದೋಣಿ, ಸಂತೆ, ದನ, ಬೆಕ್ಕು, ಕುಣಿತ, ಪ್ರವಾಸಿ ಸ್ಥಳಗಳು, ಮಲೆಕುಡಿಯರು, ಹಿತ್ತಲ ಹಕ್ಕಿಗಳು, ಹಳ್ಳಿಯ ಹಾಡು, ಮೃಗಾಲಯ, ನಾಟಕ, ಕ್ರಿಮಿಕೀಟ, ಚಲನಚಿತ್ರ, ಗ್ರಾಮಾಫೋನ್, ವಿಮಾನಯುಗ, ಪನಾಮಾ ಕಾಲುವೆ, ಯುದ್ಧ, ಸಿದ್ಧಾರ್ಥ, ಹಂಪಿ, ಬೇಸಾಯ – ಹೀಗೆ ಈ ಪುಸ್ತಕಗಳಲ್ಲಿ ವೈವಿಧ್ಯಮಯವಾದ ಗದ್ಯ ಪಾಠಗಳಿವೆ, ಪದ್ಯಗಳಿವೆ, ಪ್ರಾಣಿ ಕತೆಗಳಿವೆ. ನಾಟಕದ ಸಂಭಾಷಣೆಗಳಿವೆ. ಮಕ್ಕಳ ಬದುಕಿನ ಪರಿಸರದ ಪರಿಚಯ ಹಾಗೂ ಪ್ರಾಪಂಚಿಕ ಜ್ಞಾನ ನೀಡಿಕೆಯ ದೃಷ್ಟಿಯಿಂದ ಪಠ್ಯವೊಂದು ಈ ಬಗೆಯ ವೈವಿಧ್ಯಗಳನ್ನು ಹೊಂದುವುದು ಅಸಾಮಾನ್ಯವೇ ಸರಿ.

ಹೀಗೆ ವೈವಿಧ್ಯಮಯ ವಿಷಯಗಳನ್ನು ಕೊಡುವಾಗಲೂ ಅವರಲ್ಲಿ ಮಗುವಿನ ವಯಸ್ಸು ಮತ್ತು ಆ ವಯೋಮಾನದ ಮನಸ್ಸಿನ ಅರಿವಿತ್ತು. ಆರಂಭದ ಮೂರು ಪುಸ್ತಕಗಳಲ್ಲಿ ಹಲವಾರು ಶಿಶುಗೀತೆಗಳನ್ನು ಕಾರಂತರೇ ಸ್ವತಃ ರಚಿಸಿ ಸೇರಿಸಿದ್ದಾರೆ. ನಾಲ್ಕನೇ ಮತ್ತು ಐದನೇ ಪುಸ್ತಕಗಳಲ್ಲಿ ಸುತ್ತಣ ಪ್ರದೇಶಗಳಲ್ಲಿ ರೂಢಿಯಲ್ಲಿದ್ದ, ಮಕ್ಕಳಿಗೆ ತಿಳಿಯುವ ಮತ್ತು ಮೆಚ್ಚುವ ಜಾನಪದ ಗೀತೆಗಳ ಪರಿಚಯ ಮಾಡಿಕೊಡುವಂತಿದೆ. ಕೊನೆಯ ಮೂರು ಪಠ್ಯಗಳಲ್ಲಷ್ಟೇ, ಹಳೆಗನ್ನಡದ, ಹಳೆಯ ಸಾಹಿತ್ಯದ ಕೆಲವು ಪದ್ಯಗಳನ್ನು, ಸಾಹಿತ್ಯದ ಅಂಶಗಳನ್ನು ಪ್ರಕಟಿಸಿದ್ದರು. ಹೀಗಾಗಿ ಪಾಠಗಳ ನಿರೂಪಣೆಯಲ್ಲಿ ಉತ್ಸಾಹ, ಲವಲವಿಕೆ ಇದೆ. ೩-೪-೫ ಪದಗಳಿಂದ ಕೂಡಿದ ಲಯಬದ್ಧ

ವಾಕ್ಯಗಳಿವೆ. ಕೆಲವು ವಾಕ್ಯಗಳು ಒಂದಕ್ಕೊಂದು ಬೆರೆತುಕೊಂಡು, ಕೂಡಿಕೊಂಡು ವಿಚಾರವನ್ನು ತಾರ್ಕಿಕವಾಗಿ ಜೋಡಿಸಿ ಮುಂದೆ ಸಾಗುವಂತೆ ಮಾಡುತ್ತದೆ. ಇದರಿಂದಾಗಿ ಗದ್ಯದಲ್ಲೂ ಕೂಡ ಸಹಜವಾಗಿಯೇ ಒಂದು ಬಗೆಯ ಲಯ ಬದ್ಧತೆ ಒಡಮೂಡುತ್ತದೆ.

ಈ ಮೇಲಿನ ಮಾತಿಗೆ ಪೂರಕವಾಗಿ ಕಾರಂತರ ಪಠ್ಯಗಳ ಕೆಲವು ಭಾಗಗಳನ್ನು ಹೀಗೆ ಉದ್ಧರಿಸಬಹುದು.

"ಇದು ಕರಿಮಣಿಸರ; ಬಿಳಿ ಮಣಿ ಸರ ಅಲ್ಲ
ಬಿಳಿ ಮಣಿ ಸರ; ಕರಿಮಣಿ ಸರ ಅಲ್ಲ
ಮರ ಮಣಿ ಅಲ್ಲ; ಬಿಳಿ ಕರಿ ಅಲ್ಲ
ಮರ ಸರ ಅಲ್ಲ; ಕರಿ ಬಿಳಿ ಅಲ್ಲ
ಸರ ಮರ ಅಲ್ಲ; ಮರ ಸರ ಅಲ್ಲ"೨೪

ಇಲ್ಲಿ ಒಂದೇ ಬಗೆಯ ಪದಗಳು, ಅಕ್ಷರಗಳು ಮತ್ತೆ ಮತ್ತೆ ಪುನರಾವರ್ತನೆಯಾಗುವ ಮೂಲಕ ಮಕ್ಕಳಿಗೆ ಅಕ್ಷರಗಳ ನೆನಪು ಉಂಟಾಗುತ್ತದೆ. ಪದಗಳ ನಡುವೆ ಒಂದು ಲಯಬದ್ಧ ಚಲನೆಯನ್ನು ಕಾಣಬಹುದು. ಉದಾಹರಣೆಗೆ ಈ ಸಾಲನ್ನು ಗಮನಿಸಬಹುದು.

"ತಲೆ, ತಲೆಯ ಮೇಲೆ ಟೊಪ್ಪಿ, ಟೊಪ್ಪಿಯ ಮೇಲೆ ಧೂಳು, ಧೂಳಿನ ಮೇಲೆ ಗಾಳಿ, ಗಾಳಿ ಮೇಲೆ ಮೋಡ, ಮೋಡದ ಮೇಲೆ ಬಾನು, ಬಾನಿನ ಮೇಲೆ ಏನು?" ಎಂಬ ಸಾಲಾಗಲಿ, "ಕಾಗೆ ಇಲ್ಲದ ಜಾಗವೇ ಇಲ್ಲ, ಊರಲ್ಲಿ ಇದ್ದರೂ ಕಾಗೆ, ಕಾಡಿಗೆ ಹೋದರೂ ಕಾಗೆ, ಹೊಲಕ್ಕೆ ಹೋದರೂ ಕಾಗೆ" ಎಂಬ ಸಾಲುಗಳು ಕಾರಂತರ ಪಠ್ಯದ ಮಾದರಿಗೆ ನಿದರ್ಶನ. 'ಪಠ್ಯ ಎನ್ನುವುದು ಮಕ್ಕಳಿಗೆ' ಎಂಬ ತಿಳುವಳಿಕೆ ಕಾರಂತರ ರಚನೆಯ ಉದ್ದಕ್ಕೂ ನೆನಪಾಗಿ ಉಳಿದಿದೆ. ಯಾಕೆಂದರೆ, ಪಠ್ಯದ ವಸ್ತು, ವಿಷಯ, ಭಾಷೆ ಪಠ್ಯ ರಚಿಸುವ ಹಿರಿಯರ ಮನಸ್ಸಿಗೆ ಬೇಕಾದುದನ್ನು ನೀಡುವುದಲ್ಲ ಎಂಬ ತಿಳುವಳಿಕೆ ಬಹಳ ಪ್ರಜ್ಞಾಪೂರ್ವಕವಾಗಿಯೇ ಇದೆ. ಹೀಗಾಗಿ ಪದಗಳ ಬಳಕೆಯಲ್ಲಿ ಎಲ್ಲೂ ಆಡಂಬರವಿಲ್ಲ. ಪಠ್ಯದುದ್ದಕ್ಕೂ ಮಕ್ಕಳು ತಮ್ಮ ರೂಢಿಯಲ್ಲಿ, ನಿತ್ಯ ಜೀವನದಲ್ಲಿ ಸಂಭಾಷಣೆಯಲ್ಲಿ ಬಳಸುವ, ಕೇಳಿರುವ ಪದಗಳಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡಿದ್ದಾರೆ. ಮಗುವಿನ ಅನುಭವಜಗತ್ತಿಗೆ ಎಟುಕದ ಕಠಿಣ ಪದಗಳನ್ನು ಉದ್ದೇಶ ಪೂರ್ವಕವಾಗಿ ಮಕ್ಕಳ ಗಂಟಲಲ್ಲಿ ತುರುಕಿಲ್ಲ. ಗಾದೆ ಮಾತುಗಳನ್ನು, ಸೂಕ್ತಿಗಳನ್ನು ಜನರ ಮಾತಿನ ನಡುವೆ ಸರಿದು ಹೋಗುವ ನುಡಿಗಟ್ಟುಗಳನ್ನು, ಪಠ್ಯದಲ್ಲಿ ಬಳಸುವ ಮೂಲಕ ಅನುಭವ ಪರಿಸರಕ್ಕೆ ಹೆಚ್ಚಿನ ಮಹತ್ವ ನೀಡಿದ್ದಾರೆ. ಮಕ್ಕಳಲ್ಲಿ ಭಾಷಾ ಸಾಮರ್ಥ್ಯ ಹಾಗೂ ಶಬ್ಧ ಭಂಡಾರದ ಬೆಳವಣಿಗೆಯ ವಿಷಯದಲ್ಲಿ ಕಾರಂತರು ಹೊಸದೊಂದು ದಾರಿಯನ್ನು ಅನುಸರಿಸಿದ್ದಾರೆ. ಭಾಷೆಯನ್ನು ವರ್ಣಮಾಲೆಯಿಂದಲೋ, ಅಕ್ಷರಗಳಿಂದಲೋ ಕಲಿಸ

ಬೇಕಾದುದಲ್ಲ ಎಂಬುದು ಕಾರಂತರ ಭಾಷಾ ಕಲಿಕೆಯ ವೈಚಾರಿಕ ನಿಲುವು ಎಲ್ಲಾ ಕಾಲಕ್ಕೂ ಪ್ರಸ್ತುತವಾಗಬಲ್ಲುದು. ಅನುಭವಕ್ಕೆ ಬರುವುದರಿಂದ ತೊಡಗಿ, ಅನುಭವಕ್ಕೆ ಬಾರದವುಗಳ ಕಡೆಗೆ ಚಲಿಸುವುದು ಅವರ ನಿಲುವು. ಹೀಗಾಗಿ ಇದೊಂದು ಬಹಳ ಸಮಂಜಸವಾದ ನೀತಿ ಎನ್ನಬಹುದು. ವಾಕ್ಯಗಳ ರಚನೆಯನ್ನು ಮಾಡುವಾಗಲೂ ಮಕ್ಕಳ ಪೂರ್ವ ಜ್ಞಾನಕ್ಕೆ ಮಹತ್ವ ನೀಡಿದ್ದಾರೆ. ಮಕ್ಕಳ ಅನುಭವಗಳನ್ನು ಆಧರಿಸಿ ತಾನು ಹೇಳಬೇಕಾದ ಹೊಸ ವಿಚಾರಗಳನ್ನು ನಿರೂಪಿಸಿದ್ದಾರೆ. ಈ ಬಗ್ಗೆ ಶಿಕ್ಷಣ ತಜ್ಞ ಡಾ. ಮಹಾಬಲೇಶ್ವರ ರಾವ್, ಹೀಗೆ ಹೇಳುತ್ತಾರೆ. “ಜ್ಞಾತದಿಂದ ಅಜ್ಞಾತದೆಡೆಗೆ ಎಂಬ ಶೈಕ್ಷಣಿಕ ಸೂತ್ರವನ್ನು ಕಾರಂತರು ಪಾಠಗಳ ರಚನೆಯಲ್ಲಿ ವ್ಯಾಪಕವಾಗಿ ಬಳಸಿಕೊಂಡಿದ್ದಾರೆ”.[೨೫] ಈ ಮಾತಿಗೆ ಕಾರಂತರ ಪಠ್ಯದಲ್ಲಿ ಬರುವ ‘ಜಮಲಾಗಡ’ ಎಂಬ ಪಾಠದಲ್ಲಿ ಹೇಳುವ ಒಂದು ಸಾಲೇ ಸಾಕ್ಷಿಯಾಗಿ ನಿಲ್ಲಬಹುದು. ಅದು ಹೀಗಿದೆ: “ಕಲ್ಲಿನ ಕಡುಬೊಂದನ್ನು ಕವುಚಿಟ್ಟಂತೆ ಕಾಣುವುದು” “ಬೆಟ್ಟವೆಂದರೇನು? ಶಿಲೆಯ ಒಂದು ಗುಂಡು” ಎನ್ನುತ್ತಾರೆ. ಅಶೋಕ ಚಕ್ರವರ್ತಿಯ ಬಗೆಗೆ ಹೇಳುತ್ತಾ “ಅಶೋಕನ ಈಗಿನ ಚಿತ್ರವೇ ಬೇರೆ, ಅವನು ರಕ್ತಕ್ಕೆ, ರಾಜ್ಯಕ್ಕೆ ಬಾಯ್ಬಿಡುವ ಬದಲು ಶಾಂತಿಗಾಗಿ ಹಸಿದನು” ಎಂದು ಹೇಳುತ್ತಾರೆ.

೩.೩.೧ ವಿಶಿಷ್ಟತೆ ಮತ್ತು ಅನನ್ಯತೆ

ಕಾರಂತರ ಪಠ್ಯ ಮಾಲೆ ಒಂದಷ್ಟು ಕಾಲ ಮಾತ್ರ ಬಳಕೆಯಲ್ಲಿತ್ತು. ಆದರೆ ಮಕ್ಕಳಿಗೆ ಕೊಡುವ ಪಠ್ಯ ಪುಸ್ತಕಗಳಲ್ಲಿ ವಿಷಯ ನಿರ್ದಿಷ್ಟವಾಗಿರಬೇಕು, ವಿಧಾನ ಆಕರ್ಷಕವಾಗಿರಬೇಕು ಎಂಬ ತತ್ವವನ್ನು ಕಾರಂತರ ಪಠ್ಯ ಪುಸ್ತಕಗಳು ಅನುಸರಿಸಿದ್ದವು. ಈ ಪಾಠಗಳ ವಿಶಿಷ್ಟ ಗುಣವೆಂದರೆ ಯಾವ ಹಂತದಲ್ಲೂ ಕೂಡ ತನ್ನ ಎದುರಿಗಿರುವುದು ಎಳೆಯ ಮನಸ್ಸಿನ ಓದುವ ಮಕ್ಕಳು ಎಂಬುದನ್ನು ಮರೆಯಲಿಲ್ಲ. ತನ್ನ ಎದುರೇ ಮಕ್ಕಳು ಕುಳಿತಿದ್ದಾರೆ. ತಾನು ಅವರೊಂದಿಗೆ ಮಾತನಾಡುತ್ತಿದ್ದೇನೆ ಎಂದು ಭಾವಿಸಿಕೊಂಡೇ ಎಲ್ಲ ಪಾಠಗಳನ್ನೂ ಬರೆದಿದ್ದಾರೆ. ಇದರಿಂದಾಗಿ ಬರವಣಿಗೆಯು ಆತ್ಮೀಯತೆ, ಸರಸದ ಗುಣವನ್ನು ಒಳಗೊಂಡಿದೆ. ಹೀಗಾಗಿ ಪಾಠ ಎನ್ನುವುದು ಒಂದು ನೀರಸ ರಚನೆಯಾಗಿ, ಒಣ ಪಠ್ಯವಾಗಿ, ಮಗುವಿನ ಮನಸ್ಸಿಗೆ ಅನುಭವಕ್ಕೆ ಬಾರದವುಗಳನ್ನು ಹಿರಿಯರ ಅಪೇಕ್ಷೆಗೆ ತಕ್ಕಂತೆ ಎಲ್ಲೊ ಕೃತಕವಾಗಿ ತುಂಬಿಸುತ್ತಿರುವಂತೆ ಕಾಣುವುದಿಲ್ಲ. ಕಾರಂತರಿಗೆ ಇದ್ದ ಅದ್ಭುತವಾದ ಬರವಣಿಗೆಯ ಶಕ್ತಿಯಿಂದಾಗಿ ಪರಿಸರ, ಪ್ರಾಣಿ, ಪಕ್ಷಿ, ಗ್ರಾಮಾಫೋನ್, ಚಲನಚಿತ್ರ ಮುಂತಾದ ವಿಷಯಗಳನ್ನು ನವಿರಾಗಿ ಬರೆದಿದ್ದಾರೆ. ಪಾಠಗಳ ಸ್ವರೂಪವೂ ಕೂಡ ವಿದ್ಯಾರ್ಥಿಯನ್ನು ಕಲಿಕೆಯ ಪ್ರಕ್ರಿಯೆಯು ಒಳಗೊಳ್ಳುವಂತೆ, ಒಂದು ಬಗೆಯ ಚಟುವಟಿಕೆಪೂರ್ಣ ಸಹಭಾಗಿತ್ವ ಇರುವಂತೆ ಬರೆಯಲಾಗಿದೆ. ಕಲಿಸುವ ಉಪಾಧ್ಯಾಯ ತಾನು ಪ್ರತ್ಯೇಕವಾಗಿ ವಿದ್ಯಾರ್ಥಿಗೆ ಕಲಿಸಿ

ಕೊಡುತ್ತಿದ್ದೇನೆ ಎಂಬ ಭಾವ ಉಂಟಾಗದೆ, ಪಾಠಗಳ ನಡುವೆ ಪ್ರಶ್ನೆಗಳನ್ನು ಕೇಳುತ್ತಾ, ಆ ಪ್ರಶ್ನೆಗಳಿಗೆ ಉತ್ತರ ಕೊಡುತ್ತಾ ಮುಂದುವರಿಯುತ್ತಾರೆ. ಉದಾಹರಣೆಗೆ 'ನವಿಲು' ಎಂಬ ಪಾಠದಲ್ಲಿ ಈ ಪ್ರಶ್ನೆ ಕೇಳುತ್ತಾ, ಉತ್ತರ ಕೊಡುತ್ತಾ ಹೋಗುವ ಸ್ವರೂಪ ಹೀಗಿದೆ. "ನವಿಲಿನ ಮಾಂಸಕ್ಕೆ ಮರುಳಾಗಿ ನಾವು ಯಾವತ್ತೂ ನವಿಲನ್ನು ಕೊಂದರೆ ಹೇಗೆ? ನಮ್ಮ ಸಂತೋಷವನ್ನು ಹೆಚ್ಚಿಸುವ ಒಂದು ವಿಶೇಷ ಜೀವವೇ ಕಣ್ಮರೆಯಾದಂತಲ್ಲವೆ!" ಎಂದು ನಾಲ್ಕನೇ ಪುಸ್ತಕದಲ್ಲಿ ಹೇಳುತ್ತಾರೆ. ಈ ಪ್ರಶ್ನೆಗಳು ಕೇವಲ ಒಂದು ಪ್ರಶ್ನೆ ಮತ್ತು ಪ್ರಶ್ನೆಗೆ ಒಂದು ಉತ್ತರ ಎಂಬ ಮಾದರಿಯಲ್ಲಿ ಮುಂದುವರಿಯದೆ, ವಿದ್ಯಾರ್ಥಿಗಳಲ್ಲಿ ತಾರ್ಕಿಕ ಚಿಂತನಾಕ್ರಮವನ್ನು ಬೆಳೆಸುತ್ತದೆ ಮತ್ತು ಕುತೂಹಲವನ್ನು ಹೆಚ್ಚಿಸುತ್ತದೆ.

ಕಾರಂತರ ಒಟ್ಟು ಪಠ್ಯ ಪುಸ್ತಕಗಳನ್ನು ಸಮಗ್ರವಾಗಿ ಗ್ರಹಿಸಿ ವಿವೇಚಿಸಿದರೆ ಅಲ್ಲಿ ಕೆಲವು ಹೆಸರುಗಳು, ಪಾತ್ರಗಳು, ಸಂಗತಿಗಳು ಮತ್ತೆ ಮತ್ತೆ ಪುನರಾವರ್ತಿತವಾಗುತ್ತದೆ. ಈ ಪುನರಾವರ್ತನೆ ಸಂದರ್ಭಾನುಸಾರವಾಗಿ ಮತ್ತೆ ಮತ್ತೆ ಬರುತ್ತದೆ. ಯಾಕೆ? ಇದಕ್ಕೆ ಕೊಡಬಹುದಾದ ಕಾರಣವೆಂದರೆ ಈ ನಿರ್ದಿಷ್ಟ ವಿಷಯ, ಪಾತ್ರ, ಸಂಗತಿಗಳೊಂದಿಗೆ ಮಕ್ಕಳು ಆತ್ಮೀಯತೆಯನ್ನು ಬೆಳೆಸಿಕೊಳ್ಳುತ್ತಾರೆ. ಹಾಗಾದಾಗ ಕಲಿತದ್ದು ಸುಲಭವಾಗಿ ಮರೆತು ಹೋಗುವುದಿಲ್ಲ. ಪಠ್ಯ ಪುಸ್ತಕ ಎಲ್ಲೂ ಉಪದೇಶವನ್ನು ಕೊಡುವುದಕ್ಕೆ ಹೋಗದೆ, ಸೂಚ್ಯವಾಗಿಯಷ್ಟೇ ಹೇಳಬೇಕು. ಕಾರಂತರು ರಾಷ್ಟ್ರಪ್ರೇಮ, ಸ್ವಾತಂತ್ರ್ಯದ ಅಭಿಮಾನ ಹುಟ್ಟಿಸುವ ಪಾಠಗಳನ್ನು ಹೇಳಲಿಲ್ಲ.

ಕಾರಂತರ ಕನ್ನಡ ಪಾಠಮಾಲೆ ಪುಸ್ತಕಗಳ ಬಹಳ ಪ್ರಮುಖ ವೈಶಿಷ್ಟ್ಯಗಳಲ್ಲಿ ಒಂದು 'ಅಭ್ಯಾಸ ಪ್ರಶ್ನೆ'ಗಳ ಹೊರೆ ಇಲ್ಲದಿರುವುದು. ಇದರಿಂದಾಗಿ ವಿದ್ಯಾರ್ಥಿ ಹಾಗೂ ಶಿಕ್ಷಕ ಇಬ್ಬರಿಗೂ ತಮ್ಮ ಜ್ಞಾನವನ್ನು ಇನ್ನಷ್ಟು ವಿಶಾಲವಾಗಿ ಬೆಳೆಸಿಕೊಳ್ಳಲು ಸಹಾಯಕವಾಗುತ್ತದೆ. ಪಾಠ ಹೇಳುವವರೇ ತಾವಾಗಿಯೇ ಪ್ರಶ್ನೆಗಳನ್ನು ರೂಪಿಸಿಕೊಳ್ಳುವ ಮೂಲಕ ಪರಾವಲಂಬನೆಯನ್ನು ಕಡಿಮೆ ಮಾಡುವುದು ಮಾತ್ರವಲ್ಲ, ಅವರ ಚಿಂತನ ಶೀಲತೆಯನ್ನು ಬೆಳೆಸುವಲ್ಲಿಯೂ ಸಹಕಾರಿಯಾದುದು.

ಪಠ್ಯಗಳು ಕೇವಲ ಒಂದು ಗದ್ಯ ವಿವರಣೆಯಾಗದೇ ಅವುಗಳಲ್ಲಿ ಸಚಿತ್ರ ಬರವಣಿಗೆ ಹೇರಳವಾಗಿರುವುದರಿಂದ ಮಕ್ಕಳಲ್ಲಿ ಆಸಕ್ತಿಯನ್ನು ಹುಟ್ಟಿಸುವಲ್ಲಿ ಯಶಸ್ವಿಯಾಗಿತ್ತು. "ಮೂರನೆಯ ಇಯತ್ತೆಯ ಭಾಷಾ ಪಠ್ಯ ಪುಸ್ತಕಗಳಲ್ಲಿ ಇಷ್ಟು ಚೆಲುವಿನ, ಆಕರ್ಷಕ (ದೇಶ-ವಿದೇಶಗಳಿಂದ ಪಡೆದ) ಚಿತ್ರಗಳನ್ನು ಭಾರತದ ಮಿಕ್ಕ ಭಾಷೆಗಳಲ್ಲೆಲ್ಲೂ ಬಳಸಿದ್ದು ಇರಲಾರದು. ಈ ಮಕ್ಕಳಿಗಾಗಿಯೇ ಜೆಟ್‌ಲ್ಯಾಂಡಿನ ಸ್ಪಂದನ ಸಾಹಸದ ಕತೆ, ಚೀನಾದ ಕುಅನ್‌ಯುನ ಕತೆ, ಇಂಡಿಯನ್ ಗೀರು ಮೋರೆಯ ಕತೆಗಳೆಲ್ಲಾ ಪುಸ್ತಕದ ಸ್ವಾರಸ್ಯವನ್ನು ಹೆಚ್ಚಿಸಿದೆ"[೨೬] ಎಂಬ ಶೇಖರ ಇಡ್ಯ ಇವರ ಮಾತು ಅತಿಶಯೋಕ್ತಿಯಲ್ಲ.

ಪಠ್ಯ ಪುಸ್ತಕಗಳ ಪಾಠಗಳ ಬೆಳವಣಿಗೆ ಒಂದು ವಿಧಿವತ್ತಾದ ಕ್ರಮದಲ್ಲಿದೆ. ಮೊದಮೊದಲ ಪಾಠಗಳಲ್ಲಿ ವಾಕ್ಯಗಳ ಗಾತ್ರ ಚಿಕ್ಕದಾಗಿದ್ದು, ಮುಂದೆ ಮುಂದೆ ಹೋದಂತೆ ದೊಡ್ಡದಾಗುತ್ತದೆ. ವಾಕ್ಯಗಳ ಪ್ರಮಾಣವೂ ಹೆಚ್ಚುತ್ತದೆ. ಪ್ರಶ್ನೆಗಳ ಮಾದರಿಯಲ್ಲಿ, ಆಶ್ಚರ್ಯವನ್ನು ಸೂಚಿಸುವ ಮಾದರಿಯಲ್ಲಿ ವಾಕ್ಯಗಳು ಸಾಕಷ್ಟಿವೆ. ಲಯಬದ್ಧವಾದ, ತಾರ್ಕಿಕ ಪ್ರತಿಪಾದನೆ ವಾಕ್ಯಗಳಲ್ಲಿವೆ. ನಿದರ್ಶನವಾಗಿ ಗಮನಿಸುವುದಾದರೆ,

"ಇದು ಕಾಗೆ; ಇದು ಕರಿ ಕಾಗೆ, ಇದು ಮರಿ ಕಾಗೆ,
ಇದು ಕರಿ ಮರಿ ಕಾಗೆ, ಇದು ಕ ಕ ಕಾ ಕಾಗೆ"

ಎಂದು 'ಕಾಗೆ' ಎಂಬ ಪಾಠದಲ್ಲಿ ಹೇಳುತ್ತಾರೆ. ಲಯಬದ್ಧವಾದ ಒಂದು ತಾರ್ಕಿಕ ಪ್ರಗತಿಗೆ ಈ ಸಾಲು ಸಾಕ್ಷಿ. ವ್ಯಾಕರಣದ ಸಂದರ್ಭದಲ್ಲಿ ಕಲಿಸಿ ಕೊಡುವ 'ಕನಿಷ್ಠ ಯುಗ್ಮ'ಗಳನ್ನು ಧ್ವನಿ ಹಾಗೂ ಸ್ಪಷ್ಟತೆಯ ದೃಷ್ಟಿಯಿಂದ ಪಠ್ಯದೊಳಗೆ ಬಳಸುತ್ತಾರೆ. "ಹರೆ–ಹರಿ; ಹರೆಯುವುದು ಬೇರೆ, ಹರಿಯುವುದು ಬೇರೆ" ಎನ್ನುತ್ತಾರೆ. ಇಂತಹ ಕನಿಷ್ಠ ಯುಗ್ಮಗಳನ್ನು ಮತ್ತೆ ಮತ್ತೆ ಬಳಸುವುದರಿಂದ ಉಚ್ಚಾರಣೆಯ ದೋಷವನ್ನು ತಿದ್ದಲು ಸಹಕಾರಿಯಾಗಿದೆ. ಮಹಾಪ್ರಾಣಗಳನ್ನು ಕಲಿಸಿ ಕೊಡುವ ಮತ್ತು ಅಲ್ಪ ಪ್ರಾಣದೊಂದಿಗೆ ಅದು ಹೊಂದಿರುವ ವ್ಯತ್ಯಾಸವನ್ನು ವಿದ್ಯಾರ್ಥಿಗೆ ಕಲಿಸಿ ಕೊಡುವುದಕ್ಕೆ ಒಂದು ಕಿರು ಪದ್ಯರೂಪವನ್ನೇ ಪಠ್ಯದಲ್ಲಿ ಹೇಳುತ್ತಾರೆ. ಆ ಮೂಲಕ ಮಗುವಿಗೆ ನೆನಪಿಟ್ಟುಕೊಳ್ಳಲು ಅನುಕೂಲವಾಗುತ್ತದೆ.

"ಗೆಜ್ಜೆಗೆ ಬೇಡ ಅದು
ಹೆಜ್ಜೆಗೆ ಬೇಡ ಅದು
ಗೆಜ್ಜೆಯ ಝಣರಿಗೆ ಅದೇ ಬೇಕು"
"ಠ ಯಾರಿಗೆ ಬೇಕು?
ಠಕ್ಕಗೆ ಬೇಕು ಠಿಕ್ಕಿಗು ಬೇಕು
ಠೀವಿಗು ಬೇಕು, ಠಂಕಾರಕು ಬೇಕು"

ಈ ಸಾಲುಗಳ ಮೂಲಕ ಮಗುವಿಗೆ ಅದನ್ನು ನೆನಪಿಟ್ಟುಕೊಳ್ಳಲು ಅನುಕೂಲವಾಗುವ ಹಾಡಬಹುದಾದ ಮಾದರಿಯಲ್ಲಿ ರಚಿಸಲಾಗಿದೆ.

ಒತ್ತಕ್ಷರಗಳನ್ನು ಪರಿಚಯಿಸಲು ಕೂಡ ಒಂದು ಪಾಠವನ್ನು ಕೊಡಲಾಗಿದೆ.

'ಕ್ಕ' – ಅಕ್ಕನು ಸಾಕಿದ ಚಿಕ್ಕ ಹಕ್ಕಿ
ರೆಕ್ಕೆ ಬರಲು ಹಾರಿ ಹೋಯ್ತು
'ಚ್ಚ' – ಕಿಚ್ಚಿನೊಡನೆ ಆಡಬೇಡ
ಹುಚ್ಚರೊಡನೆ ನಂಟು ಬೇಡ

ಈ ಎಲ್ಲ ಉದಾಹರಣೆಗಳಿಂದ ಕಾರಂತರ ಪಠ್ಯದ ವಿಶಿಷ್ಟತೆ ಮತ್ತು ಅನನ್ಯತೆ ಸಹಜವಾಗಿಯೇ ಅರಿವಾಗುತ್ತದೆ. ಮಕ್ಕಳಿಗೆ ಓದು ಬರಹ ಕಲಿಸಲು ಪಠ್ಯ ಪುಸ್ತಕಗಳ ಹೊರತಾಗಿ ಬೇರೇನೂ ಇಲ್ಲದಿರುವಾಗ ಪಠ್ಯ ಪುಸ್ತಕವೇ ಪರಿಣಾಮಕಾರಿಯಾದ ಮಾಧ್ಯಮವಾಗಿತ್ತು. ಆ ಮಾಧ್ಯಮವನ್ನು ಕಾರಂತರು ಯಶಸ್ವಿಯಾಗಿ ಬಳಸಿಕೊಂಡಿದ್ದಾರೆ.

೩.೩.೨ ಪಠ್ಯ ಪುಸ್ತಕದ ಮಿತಿಗಳು

ಕಾರಂತರ ಪ್ರಯೋಗಶೀಲ ವ್ಯಕ್ತಿತ್ವದ ಭಾಗವಾಗಿಯೇ ಬಂದ ಪಠ್ಯ ಪುಸ್ತಕಗಳ ರಚನೆ ಅನನ್ಯವಾದರೂ ಅವುಗಳು ಮಿತಿಯಿಂದ ಹೊರತಾದುದಲ್ಲ. ಆದರೂ ೧೯೩೦-೪೦ರ ದಶಕದಲ್ಲೇ ಪಠ್ಯ ಪುಸ್ತಕಗಳ ರಚನೆ ಎನ್ನುವುದು ಸಾಮಾನ್ಯ ಸಂಗತಿಯಾಗಿರಲಿಲ್ಲ. ಯಾವುದೇ ಸೌಲಭ್ಯಗಳು ಲಭ್ಯವಾಗಿಲ್ಲದೇ ಇದ್ದಾಗಲೂ ಕಾರಂತರು ಒಂದು ಬಗೆಯಲ್ಲಿ ಒಂಟಿ ಸಾಹಸವನ್ನು ಈ ವಿಷಯದಲ್ಲಿ ಮಾಡಿದ್ದರು. ಇಂತಹ ಪಠ್ಯಗಳನ್ನು ರಚಿಸಿದಾಗ ಅದನ್ನೇ ಪರಸ್ಪರ ಚರ್ಚಿಸಿ, ಅದನ್ನು ಹೆಚ್ಚು ಪರಿಷ್ಕಾರ ಮಾಡಬಹುದಾದ ಅವಕಾಶವೂ ಕಾರಂತರಿಗೆ ಇದ್ದಂತಿಲ್ಲ. ಕೇವಲ ಪಠ್ಯ ಪುಸ್ತಕಗಳ ರಚನೆಯಷ್ಟೇ ಕಾರಂತರ ಪ್ರಯತ್ನವಾಗಿರಲಿಲ್ಲ. ಹಾಗಿದ್ದಿದ್ದರೆ ಆ ಮಿತಿಗಳು ಸ್ವಲ್ಪ ಪ್ರಮಾಣದಲ್ಲಿ ಕಡಿಮೆಯಾಗುತ್ತಿತ್ತು. ಏಕಕಾಲದಲ್ಲಿ ಬಾಲವನ, ಪಠ್ಯಪುಸ್ತಕ, ಮಕ್ಕಳ ಸಾಹಿತ್ಯ, ಮುದ್ರಣಾಲಯ, ಚಲನಚಿತ್ರ, ದೇಶ ವಿದೇಶಗಳ ಪ್ರವಾಸ, ಕಾದಂಬರಿ ರಚನೆ ಇವೆಲ್ಲವುಗಳಿಂದಾಗಿ ಅವರ ಗಮನ ಪೂರ್ಣವಾಗಿ ಒಂದರಲ್ಲೇ ಇದ್ದಂತಿಲ್ಲ. ಹೀಗಾಗಿ ಅನೇಕ ವೇಳೆ ಕನ್ನಡದ ಆಡುನುಡಿಯ ಜಾಯಮಾನಕ್ಕೆ ವಿರುದ್ಧವಾದ, ಸಹಜವಲ್ಲದ ಅನೇಕ ವಾಕ್ಯಗಳು, ಪದಗಳು ಬಳಕೆಯಾಗಿದ್ದು ಕಂಡು ಬರುತ್ತದೆ. ಪ್ರಾಸವನ್ನು ತರುವುದಕ್ಕಾಗಿ ಕೆಲವು ಕೃತಕವಾದ ಪದಗಳನ್ನು ಸೃಷ್ಟಿಸಲಾಗಿದೆ. "ನನಗೆ ಇವೆ- ನಡೆಯಬಲ್ಲ ಎರಡು ಕಾಲು", "ಅದಕಿಹ ಹೆಸರೇ ಹೇಳುವುದು", "ನನಗೆ ಬೇಕು ಚೆಂದ ಹೂವು, ನನಗೆ ಬೇಕು ರುಚಿ ಮಾವು", "ಶಾಲೆ ತೊಡಗುವ ಘಂಟೆಗೆ ಸದ್ದಿಲ್ಲ, ನಾವ್ ಆಟದಿ ಮುಳುಗಿರೆ ಕೇಳಿಸದು", "ಬೆಳೆದರೆ ನೀವೂ ನಮ್ಮಂತಾಪಿರಿ" ಮೊದಲಾದ ಪದ, ವಾಕ್ಯ ಪ್ರಯೋಗಗಳು ಕಾರಂತರ ಕಲ್ಪನೆಯ ಶಿಕ್ಷಣದ ಚಿಂತನೆಗೆಯೇ ವಿರುದ್ಧವಾಗಿ ಪ್ರಯೋಗಿಸಲ್ಪಟ್ಟಿದೆ. ಯಾಕೆಂದರೆ ಕಾರಂತರೇ ತಮ್ಮ ಬರವಣಿಗೆಯಲ್ಲಿ ಮಕ್ಕಳು ಕಲಿತ ಶಬ್ದಗಳನ್ನು ಬಳಸಬೇಕಾದುದು ಮುಖ್ಯ, ಈ ರೀತಿಯಲ್ಲೇ ಅವರ ಶಬ್ದ ಭಂಡಾರ ರಚನೆಗೊಳ್ಳಬೇಕೆ ಹೊರತು ಬೇರೆ ಪದಗಳನ್ನು ಅವರಿಗೆ ತುಂಬಿಸಬಾರದು ಎನ್ನುತ್ತಾರೆ. ಆದರೆ ಇಲ್ಲಿ ಪ್ರಯೋಗಿಸಿದ ಅನೇಕ ಪದಗಳು ನಿತ್ಯ ಬಳಕೆಯ ರೂಪದ್ದಲ್ಲ. ಹಳೆಯ ಕಾಲದ ರೂಪಗಳು. ಇನ್ನೂ ಅನೇಕ ಸಂದರ್ಭದಲ್ಲಿ ಭಾಷೆಗೆ ಸಹಜವಾದ ವ್ಯಾಕರಣ ಸರಣಿಯೂ ಇಲ್ಲ. ಮಾತಿನ ಸಹಜಗತಿಯೂ ಕೆಲವೆಡೆ ಇಲ್ಲ. ಕೆಲವೊಮ್ಮೆ ಪ್ರಾಸಕ್ಕಾಗಿ ಜಾಳು ಜಾಳಾದ

ಪದಗಳನ್ನು ಪ್ರಯೋಗಿಸಿದ್ದೂ ಉಂಟು. ತಾರ್ಕಿಕ ಸಂಬಂಧವಿಲ್ಲದ ವಾಕ್ಯಗಳ ಪ್ರಯೋಗವೂ ಆಗಿರುವುದುಂಟು.

"ಅಗೆದ ನೆಲವ; ಕಂಡ ಮೊಲವ
ಜಿಗಿದ ಹಗ್ಗ ಅಲ್ಲೆ ಬಿಟ್ಟು
ಕೆರೆಗೆ ಹೋಗಿ ಬಟ್ಟೆ ಒಗೆದ
ಮಿಂದ ಬಳಿಕ ಮನೆಗೆ ಬಂದ"
'ಸರಸರ' ಎಂಬುದು ಏನು ಹೇಳು?
ಸರಗಳು ಎರಡು – ಒಂದಲ್ಲ
ಸರಸರ – ಬರಬರ ಎನ್ನುವ ಮಾತು
ಅವಸರ ಸೂಚಿಸಲು
ತೊಡಲು ಬಾರದ ಸರ – ಬೇಸರ
ನುಡಿಯ ಬಾರದ ಸರ – ಅಪಸರ"[೨೭]

ಎಂಬ ಪದ್ಯಗಳನ್ನು ನೀಡಲಾಗಿದೆ. ಇಂತಹ ವಾಕ್ಯವನ್ನು ಮಗುವು ಅರ್ಥೈಸಿಕೊಳ್ಳುವ ಬಗೆ ಹೇಗೆ? ಅರಗಿಸಿಕೊಳ್ಳುವ ಬಗೆ ಹೇಗೆ? ಎಂಬ ಪ್ರಶ್ನೆ ಸಹಜವಾಗಿಯೇ ಬರುತ್ತದೆ.

ಕಾರಂತರ ಪಠ್ಯಗಳಲ್ಲಿ ಅನೇಕ ಬಗೆಯ ಚಿತ್ರಗಳನ್ನು ಬಳಸಿಕೊಳ್ಳಲಾಗಿದೆ. ಕಾರಂತರು 'ಬಾಲಪ್ರಪಂಚ', 'ವಿಜ್ಞಾನ ಪ್ರಪಂಚ', 'ಚಿತ್ರಮಯ ದಕ್ಷಿಣ ಕನ್ನಡ' – ಮೊದಲಾದ ಪುಸ್ತಕಗಳಲ್ಲಿ ಬಳಸಿಕೊಂಡಂತೆ ಚಿತ್ರಗಳನ್ನು ಆಕರ್ಷಕವಾಗಿ ಅವರ ಓದುವ ಆಟ ಪುಸ್ತಕದಲ್ಲಿ ಬಳಸಿಕೊಂಡಿಲ್ಲ. ಓದುವ ಆಟದ ಪಾಠ – ೭, ದೇಹದ ಅಂಗಾಂಗಗಳನ್ನು ಪರಿಚಯಿಸುವ ಪಾಠ ಮೊದಲಿಗೆ "ನನಗೆ ಇದೆ ನಡೆಯಬಲ್ಲ ಎರಡು ಕಾಲು" ಎಂದು ಹೇಳಿ ಎರಡು ಕಾಲಿನ ಚಿತ್ರ ತೋರಿಸಿದರೆ, ಮುಂದೆ 'ಬೀಸಬಲ್ಲ ತೋಳು ಎರಡು' ಎಂದು ಹೇಳಿ ಒಂದೇ ತೋಳನ್ನು, 'ಎರಡು ಕಣ್ಣು' ಎಂದು ಹೇಳಿ ಒಂದೇ ಕಣ್ಣನ್ನು, 'ಎರಡು ಕಿವಿ' ಎಂದು ಹೇಳಿ ಒಂದೇ ಕಿವಿಯನ್ನು ಚಿತ್ರಿಸಲಾಗಿದೆ. 'ಒಂದೇ ಮುಖ' ಎಂಬ ಪದಕ್ಕೆ ಕೊಟ್ಟ ಮುಖದ ಚಿತ್ರಕ್ಕೆ ಒಂದೇ ಕಿವಿ ಇದೆ. ಇಂತಹ ಇನ್ನೂ ಕೆಲವು ಚಿತ್ರದ ದೋಷಗಳಿವೆ.

ಕಾರಂತರು ತಾವು ೧೯೩೦–೪೦ರ ದಶಕಗಳಲ್ಲಿ ಬರೆದ ಪುಸ್ತಕಗಳನ್ನು, ಬಳಸಿದ ಚಿತ್ರಗಳನ್ನು ಮತ್ತೆ 'ಓದುವ ಆಟ'ವಾಗಿ ಪುನಃ ಮುದ್ರಿಸುವಾಗ ಅವುಗಳನ್ನು ಪರಿಷ್ಕಾರ ಮಾಡಬಹುದಾಗಿತ್ತು. ಅದನ್ನು ಬದಲಾದ ಕಾಲಕ್ಕೆ ಅರ್ಥಪೂರ್ಣಗೊಳಿಸಬಹುದಾಗಿತ್ತು. ಮಕ್ಕಳ – ಶಿಕ್ಷಕರ ಸಂದರ್ಭ, ಸನ್ನಿವೇಶಗಳೆಲ್ಲವೂ ಬದಲಾಗಿದ್ದರೂ ಪಠ್ಯ ಪುಸ್ತಕ ಮಾತ್ರ ಅದೇ ಉಳಿದದ್ದು ದುರಂತ. ಸ್ವತಃ ಸದಾ

ಪ್ರಯೋಗಶೀಲರಾದ ಕಾರಂತರು ಈ ಬಗೆಯ ಮಿತಿಯನ್ನು ತಮಗೆ ತಾವೇ ಹೇರಿಕೊಂಡಂತಿದ್ದರೂ, ಕಾರಂತರ ಪಠ್ಯಗಳ ಅನನ್ಯತೆಯನ್ನು ಈ ಕೊರತೆಗಳು ಮಸುಕಾಗಿಸುವುದಿಲ್ಲ. ಒಂದಕ್ಕಿಂತ ಹೆಚ್ಚು ಕ್ಷೇತ್ರಗಳಲ್ಲಿ ಕ್ರಿಯಾಶೀಲವಾಗಿ ತೊಡಗಿಸಿಕೊಂಡ ಕಾರಂತರಿಗೆ ಪ್ರತಿ ಸಂಗತಿಯನ್ನು ಅಷ್ಟೇ ಸೂಕ್ಷ್ಮವಾಗಿ ಪರಿಶೀಲಿಸಿ, ಅದನ್ನು ಮತ್ತೆ ಪರಿಷ್ಕರಿಸಲು ಅಸಾಧ್ಯವೇ ಆಗಿತ್ತು ಎಂಬುದನ್ನು ನಾವು ಮರೆಯುವಂತಿಲ್ಲ. ಹೀಗಾಗಿ ಕಾರಂತರೊಬ್ಬರು ಅನನ್ಯ ಪ್ರಯೋಗಶೀಲ ವ್ಯಕ್ತಿತ್ವವಾಗಿಯೇ ನಮ್ಮ ಮುಂದೆ ನಿಂತು ಬಿಡುತ್ತಾರೆ.

೩.೪ ಕಾರಂತರು ಮಕ್ಕಳ ಶಿಕ್ಷಣದಲ್ಲಿ ನಡೆಸಿದ ಪ್ರಯೋಗಗಳು:

ಡಾ. ಶಿವರಾಮ ಕಾರಂತರು ಕೇವಲ ಓರ್ವ ಶೈಕ್ಷಣಿಕ ವಿಚಾರಗಳನ್ನು ತಿಳಿದುಕೊಂಡು ಅದನ್ನು ಒಂದು ಸಿದ್ಧಾಂತವಾಗಿ ಮಾತ್ರ ಮಂಡಿಸಿದವರಲ್ಲ. ತಮ್ಮ ವರ್ತಮಾನದ ಶಿಕ್ಷಣ ವ್ಯವಸ್ಥೆಯನ್ನು ಓರ್ವ ಪ್ರಯೋಗಶೀಲ ವ್ಯಕ್ತಿಯಾಗಿ ಗಮನಿಸುತ್ತಿದ್ದರು. ಹೀಗಾಗಿ ಆ ಬಗೆಯ ನೋಡುವಿಕೆಯಲ್ಲಿ ಒಂದು ಬಗೆಯ ಒಳನೋಟವಿತ್ತು. ಇಂತಹ ಒಳನೋಟದ ಕಾರಣದಿಂದಾಗಿ ಅದನ್ನು ಪ್ರಯೋಗಾತ್ಮಕವಾಗಿ ತರುವ ಪ್ರಯತ್ನವನ್ನು ಮಾಡಿದ್ದರು. ಕಾರಂತರು ಕೇವಲ ಶಿಕ್ಷಣ ರಂಗದ ಪ್ರಯೋಗಶಾಲಿಯಲ್ಲ. ತನ್ನೆದುರಿನ ಅನೇಕ ಸಂಗತಿಗಳನ್ನು ಪ್ರಯೋಗಶೀಲ ಗುಣದಿಂದಾಗಿ ಅವುಗಳಿಗೆ ಒಂದು ಸಮಕಾಲೀನತೆಯನ್ನು ತಂದುಕೊಂಡರು.

ಒಂದೆಡೆ ತಮ್ಮ ಕಾಲದ ವಿದ್ಯಾಭ್ಯಾಸದ ಕ್ರಮದ ಕುಂದು ಕೊರತೆಗಳನ್ನು ಬಯಲು ಮಾಡುತ್ತಾ, ಇನ್ನೊಂದೆಡೆ ತಾವು ಓದಿಕೊಂಡು, ಅರಗಿಸಿಕೊಂಡ ಶೈಕ್ಷಣಿಕ ತತ್ವ – ಪ್ರಭಾವಗಳನ್ನು ತಮ್ಮದೇ ರೀತಿಯಲ್ಲಿ ಆಚರಣೆಗೆ ತಂದರು. ಆ ನಿಟ್ಟಿನಲ್ಲಿ ಕಾರಂತರ ಪ್ರಯೋಗಶೀಲತೆಯ ಮುಖ್ಯ ಸಂಗತಿಗಳು 'ಬಾಲವನ, ದಸರಾ ನಾಡ ಹಬ್ಬ, ಮಕ್ಕಳ ಕೂಟ' ಮೊದಲಾದವುಗಳನ್ನು ಪುತ್ತೂರಿನ ಜನತೆಗೆ ತೋರಿಸಿಕೊಟ್ಟರು. ಪ್ರಯೋಗಶೀಲತೆ ಮುಂದುವರಿದು ಅದು ಮತ್ತೆ ಮಕ್ಕಳ ಮತ್ತು ವಯಸ್ಕರ ಶಿಕ್ಷಣಕ್ಕೂ ಪಠ್ಯ ಪುಸ್ತಕಗಳನ್ನು ರೂಪಿಸುವವರೆಗೆ ಕ್ರಿಯಾಶೀಲವಾಗಿತ್ತು.

೩.೪.೧ ಮಕ್ಕಳ ಕೂಟ

೧೯೩೧ರಲ್ಲಿ ಮೊತ್ತ ಮೊದಲ ಬಾರಿಗೆ ಪುತ್ತೂರಿನ ಸಮೀಪದ ಉಪ್ಪಿನಂಗಡಿಯಲ್ಲಿ ಹಿರಿಯ ಸಹಕಾರಿ, ಅಂದಿನ ಪುತ್ತೂರು ತಾಲೂಕು ಬೋರ್ಡಿನ ಅಧ್ಯಕ್ಷರಾಗಿದ್ದ ಮೊಳಹಳ್ಳಿ ಶಿವರಾಯರ ಸಹಕಾರ, ಪ್ರೋತ್ಸಾಹದೊಂದಿಗೆ ೫–೧೬ ವರ್ಷಗಳ ಒಳಗಿನ ಮಕ್ಕಳಿಗಾಗಿ 'ಮಕ್ಕಳ ಕೂಟ'

ಏರ್ಪಡಿಸಿದರು. ಆ ಮೂಲಕ ಮಕ್ಕಳ ಸೃಷ್ಟಿಶಕ್ತಿಯ ಬೆಳವಣಿಗೆಗಾಗಿ ನಡೆಸಿದ ಮೊದಲ ಪ್ರಯೋಗವಾಗಿ ಕಂಡು ಬರುತ್ತದೆ. ಈ 'ಮಕ್ಕಳ ಕೂಟ'ದ ಸ್ವರೂಪವೇ ವಿಶಿಷ್ಟ ಬಗೆಯದ್ದಾಗಿತ್ತು. ಮುಖ್ಯವಾಗಿ ಈ 'ಮಕ್ಕಳ ಕೂಟ' ಮಕ್ಕಳದ್ದೊಂದು ಹಬ್ಬವೆನಿಸುವಂತಿರಬೇಕು. ಮಕ್ಕಳ ನಗುವನ್ನು ಹೆಚ್ಚಿಸಲು, ಬಾಲ್ಯ ಜೀವನದ ರಸಹೀನತೆಯನ್ನು ತೊಲಗಿಸಿ, ಆನಂದಮಯವಾಗುವಂತೆ ಪ್ರೇರಿಸುವುದೇ ಮಕ್ಕಳ ಕೂಟದ ಉದ್ದೇಶವಾಗಿತ್ತು. ಹಳ್ಳಿಯಿಂದಲೇ ಹೆಚ್ಚಾಗಿ ಮಕ್ಕಳು ಈ ಕೂಟಕ್ಕೆ ಬರುವುದರಿಂದಾಗಿ ಈ ಕೂಟದ ಕಲಿಕೆ ಗ್ರಾಮಸಂಬಂಧಿಯಾಗಿರಬೇಕು. ಸುತ್ತಲಿನ ನಿಸರ್ಗದ ಗಣಿಯಿಂದಲೇ ಕಲಿಯುವಂತಿರಬೇಕು. ಮಕ್ಕಳಲ್ಲಿ ಉತ್ಪಾದಕ ಶಕ್ತಿಯನ್ನು ಬೆಳೆಸಬೇಕು, ಅವರನ್ನು 'Creative artists' ಆಗಿ ರೂಪಿಸಲು ಸಾಧ್ಯವಾಗಬೇಕು ಎಂಬ ಉದ್ದೇಶದಿಂದ ಈ ಮಕ್ಕಳ ಕೂಟವನ್ನು ಏರ್ಪಡಿಸಿದ್ದರು. ಈ ಕೂಟದಲ್ಲಿ ಮಕ್ಕಳ ಬಾಯಿಂದ ನಾನಾ ಬಗೆಯ ಹಾಡುಗಳನ್ನು ಹಾಡಿಸಿದರು. ಕತೆ, ಗಾದೆ, ಒಗಟುಗಳನ್ನು ಹೇಳಿಸಿದರು. ನಾಟಕ, ಯಕ್ಷಗಾನ, ಜನಪದ ಕುಣಿತಗಳನ್ನು ಆಡಿಸಿದರು. ಇವೆಲ್ಲವನ್ನು ಮಕ್ಕಳೇ ಸ್ವತಃ ಮಾಡಿ ತೋರಿಸುತ್ತಿದ್ದರು. ಮಕ್ಕಳ ಕೂಟಕ್ಕಾಗಿಯೇ ಕಾರಂತರು ಸ್ವತಃ ಹಾಡು, ನಾಟಕ, ಸಂಗೀತ ರೂಪಕಗಳನ್ನು ರಚಿಸಿದರು. ಮಕ್ಕಳು ತಮಗೆ ಲಭ್ಯವಿರುವ ವಸ್ತುಗಳಿಂದ ತಾವೇ ವೇಷಭೂಷಣ, ಪ್ರಸಾಧನಗಳನ್ನು ಸಿದ್ಧಪಡಿಸಲು ಉತ್ತೇಜನ ನೀಡಿದರು. ಮಾಮೂಲಿಯಾಗಿ ಪ್ರತಿಕೃತಿ ರಚಿಸುವ, ಅನುಕರಣ ಚಿತ್ರಗಳಿಗಿಂತ ಭಿನ್ನವಾದ ಚಿತ್ರಗಳ ರಚನೆಗೆ ಈ ಕೂಟದಲ್ಲಿ ಅವಕಾಶ ಕಲ್ಪಿಸಲಾಯಿತು. ಇದಕ್ಕಾಗಿ ಒಂದೊಂದು ಸಲ ಒಂದೊಂದು ಬಗೆಯಲ್ಲಿ ಒಮ್ಮೆ ಬೇರೆ ಬೇರೆ ಬಣ್ಣದ ಮಣ್ಣಿನ ಹುಡಿಯಿಂದ, ಮತ್ತೊಮ್ಮೆ ಎಲೆಗಳಿಂದ, ಇನ್ನೊಮ್ಮೆ ಹೂವುಗಳಿಂದ ಚಿತ್ರ ಬಿಡಿಸಲಾಗುತ್ತಿತ್ತು. ಈ ಬಗೆಯಿಂದ ಮಕ್ಕಳ ಉತ್ಪಾದಕ ಶಕ್ತಿ ಇಲ್ಲಿ ಬೆಳಕಿಗೆ ಬರುವಂತಿತ್ತು. ಅವರ ಮಾತುಗಳು, ಅಭಿನಯ, ಬಾಯಿಪಾಠ ಮಾಡಿ ಒಪ್ಪಿಸುವ ಪದ್ಧತಿಗಿಂತ ಮೇಲಾಗಿತ್ತು ಎಂಬುದನ್ನು ಕಾರಂತರು ಗುರುತಿಸುತ್ತಾರೆ. ಮಕ್ಕಳ ಉತ್ಪಾದಕ ಶಕ್ತಿಯೇ ನಿಜವಾದ ಭಾವಪ್ರಕಾಶನದ ಹಾದಿಯಾದುದರಿಂದ ಶಿಕ್ಷಣದಲ್ಲಿ ಮಕ್ಕಳ ಕ್ರಿಯಾಶಕ್ತಿಯನ್ನು ಬೆಳೆಸಲು ಅವಕಾಶ ಮಾಡಿಕೊಟ್ಟಿತು.

ಒಟ್ಟಿನಲ್ಲಿ ಈ ಕೂಟವೆಂಬುದು ಮಕ್ಕಳ ಪಾಲಿಗೆ ತರಗತಿಯ ಏಕತಾನತೆಯಿಂದ ಬಿಡುಗಡೆ ಹೊಂದುವ ಮಾಧ್ಯಮವಾಯಿತು. ಇಲ್ಲಿ ಅವರ ಸುಪ್ತ ಪ್ರತಿಭೆಯ ಪ್ರಕಟಣೆಗೆ ಅವಕಾಶ ಲಭಿಸಿತು. ಮಕ್ಕಳ ಜೀವನದ ಪುಟಗಳಲ್ಲಿ ಅಳಿಸಲಾರದ ಒಂದು ಗುರುತನ್ನು ಈ ಕೂಟ ಏರ್ಪಡಿಸಿತು. ರಂಜನೆಯೊಂದಿಗೆ ಅರ್ಥಪೂರ್ಣ ಕಲಿಕೆಯ ಅನುಭವಗಳು ಅವರ ಪಾಲಿಗೆ ಒದಗಿ ಬಂದಿತು ಎಂದು ತಿಳಿಯುತ್ತವೆ. ಈ ಕೂಟದ ಮೂಲಕ ಸಹಪಠ್ಯ ಚಟುವಟಿಕೆಗಳ ಮಹತ್ವವೇನೆಂಬುದು ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಮನವರಿಕೆಯಾಯಿತು. ಈ ಕೂಟದಲ್ಲಿ ಇನ್ನೂ ಒಂದು ಪ್ರಯೋಗ

ನಡೆಸಲ್ಪಟ್ಟಿತು. ಶಿಕ್ಷಕರಿಗಾಗಿ ಕೂಡ ಈ ಕೂಟದಲ್ಲಿ ಕಾರ್ಯಕ್ರಮಗಳನ್ನು ಏರ್ಪಡಿಸಿ, ಆ ಮೂಲಕ ಪಠ್ಯ ವಿಷಯಗಳನ್ನು ನೀರಸವಾಗಿ ಬೋಧಿಸದೆ ನಾಟಕದ ಮೂಲಕ ಪರಿಣಾಮಕಾರಿಯಾಗಿ ಹೇಗೆ ಬೋಧಿಸಬಹುದೆಂದು ಕಲಿಸಲಾಗುತ್ತಿತ್ತು.

೩.೪.೨ ಬಾಲವನ

ಕಾರಂತರ ಚಿಂತನೆಯ ಶಿಕ್ಷಣ ಎನ್ನುವುದು ಮಕ್ಕಳ ಕೂಟದಲ್ಲಿ ಒಂದು ರೀತಿಯಲ್ಲಿ ಪ್ರಯೋಗಕ್ಕೆ ಒಳಗಾದರೂ ಅದು ಒಂದು ಮೂರ್ತ ರೂಪವನ್ನು ಪಡೆದದ್ದು ಕಾರಂತರ ಕಲ್ಪನೆಯ ಶಾಲೆ 'ಬಾಲವನ' ದಲ್ಲಿ. ತಮ್ಮ ಚಿಂತನೆಯ ಶಿಕ್ಷಣ ವಿಧಾನಕ್ಕೆ ಒಂದು ಪ್ರಾಯೋಗಿಕ ರೂಪವನ್ನು ಕೊಡುವ ಸಲುವಾಗಿ ಕಾರಂತರು ಬಾಲವನವನ್ನು ತೆರೆಯುತ್ತಾರೆ. ಈ ಬಾಲವನದ ಕಲ್ಪನೆ, ಪ್ರಾಚೀನ ಶಿಕ್ಷಣ ವ್ಯವಸ್ಥೆಯ 'ಆಶ್ರಮ' ವ್ಯವಸ್ಥೆ ಅಥವಾ 'ಗುರುಕುಲ' ಮಾದರಿಗಿಂತ ಭಿನ್ನವಾಗಿತ್ತು. ಕಾರಂತರಲ್ಲಿ ಆರಂಭದಲ್ಲಿ 'ಆಶ್ರಮ' ಮಾದರಿಯ ಕಲ್ಪನೆ ಮೂಡಿದ್ದರೂ, ಅದು ಕಂಠಪಾಠವನ್ನಾಧರಿಸಿದ, ಮಕ್ಕಳಿಗೆ ಒಳ್ಳೆಯದೆಂದು ಹಿರಿಯರು ತಿಳಿದುಕೊಂಡ ಶಿಸ್ತನ್ನು ಅವರ ಮೇಲೆ ಹೇರುವ ರೀತಿಯ ಕಲ್ಪನೆಯಾದುದರಿಂದ ಕಾರಂತರಿಗದು ಹಿಡಿಸಲಿಲ್ಲ. ಮಕ್ಕಳ ಎಳೆತನದ ಆಟ, ಪಾಠಗಳು, ಆ ಬಗೆಯ ಚಟುವಟಿಕೆಗಳು ಅವರ ಜೀವನದ ವಿಕಾಸಕ್ಕೆ ಅನಿವಾರ್ಯವಾದ ಅಂಶಗಳು ಎಂದು ಎನಿಸಿ, ಸುತ್ತಲಿನ ಜಗತ್ತಿನ ನಿಕಟ ಪರಿಚಯವಾಗುವ ರೀತಿಯು ಇಲ್ಲಿ ಪ್ರಧಾನವಾಗಿತ್ತು.

ಇಟೆಲಿಯ ಮೇಡಮ್ ಮಾಂಟೆಸೂರಿಯವರ ಮತ್ತು ಪ್ರೊಬೆಲ್‌ನ 'ಕಿಂಡರ್ ಗಾರ್ಡನ್' ಇವರ ಶಿಕ್ಷಣದ ಪ್ರಯೋಗದ ಅರಿವಿದ್ದ ಕಾರಂತರು ಅದೇ ಬಗೆಯಲ್ಲಿ ಹೊಸದೊಂದು ಪ್ರಯೋಗವನ್ನು ಯೋಚಿಸಿದ್ದರು. ಇದಕ್ಕಾಗಿ ಮೊಳಹಳ್ಳಿ ಶಿವರಾಯರ ಸಹಕಾರದೊಂದಿಗೆ ಪುತ್ತೂರಿನ ಸಮೀಪದ 'ಬೀರುಮಲೆ' ಎಂಬಲ್ಲಿ ಗಿಡ ಮರಗಳು ಸೊಂಪಾಗಿ ಬೆಳೆದಿದ್ದ ಪ್ರದೇಶದಲ್ಲಿ ಈ ಶಾಲೆ ಆರಂಭ ಮಾಡಿದರು. 'ಕಿಂಡರ್ ಗಾರ್ಡನ್' ಎಂಬ ಪರಿಕಲ್ಪನೆಯ ಸ್ಥೂಲ ಅನುವಾದ ರೂಪದಂತೆ 'ಬಾಲವನ' ಎಂಬ ಹೆಸರನ್ನು ಇಟ್ಟರು. ಸ್ಥಳೀಯರ ಸಹಕಾರದೊಂದಿಗೆ, ದಾನಿಗಳು ನೀಡಿದ ವಸ್ತುಗಳಿಂದ ಕಟ್ಟಡ ರೂಪುಗೊಂಡರೂ ಮುಂದಿನ ದಿನಗಳಲ್ಲಿ ತನ್ನ ಬರವಣಿಗೆಯ ಸಂಭಾವನೆಯಿಂದ ನಡೆಯಿಸಿಕೊಂಡು ಹೋದರು. ಮಕ್ಕಳಿಗೆ ಚಟುವಟಿಕೆಯಿಂದ ಕೂಡಿದ ಶಿಕ್ಷಣ ಕೊಡುವುದೇ 'ಬಾಲವನ'ದ ಉದ್ದೇಶವಾಗಿತ್ತು. ಅದಕ್ಕಾಗಿ ಮಕ್ಕಳ ಆಕರ್ಷಣೆಯ ಸಲುವಾಗಿ, ಬಾಲವನದ ಜಾಗದಲ್ಲೇ ೨೦೦ ಅಡಿ ಉದ್ದಕ್ಕೆ ಕಬ್ಬಿಣದ ಹಳಿಗಳನ್ನು ಹಾಕಿ ಒಂದು ಮಕ್ಕಳ ರೈಲನ್ನು ತಯಾರಿಸಿ ಕೊಟ್ಟಿದ್ದರು. ಹಾಗೆಯೇ ಜಾರು ಬಂಡಿ, ಆಟಕ್ಕಾಗಿ ಹತ್ತಿ ಇಳಿಯುವ ಏಣಿಗಳ ಅಟ್ಟಣಿಗೆ ಮಾಡಿದ್ದರು. ಅಲ್ಲೇ ಜಿಂಕೆ, ಕಡವೆಗಳಂತಹ ಪ್ರಾಣಿಗಳ ಒಂದು ಮೃಗಾಲಯವನ್ನು ನಿರ್ಮಾಣ

ಮಾಡಿದರು. ಹಕ್ಕಿಗಳು ವಾಸವಾಗಲು ಅನುಕೂಲವಾದ ಒಂದು ಹಕ್ಕಿಯ ಮನೆ ತಯಾರಿಸಿದರು. ದೊಡ್ಡ ಪ್ರಾಣಿಗಳಿಗಾಗಿ ಪಂಜರ ತಯಾರು ಮಾಡಿದರು. "ಜಿಂಕೆ, ಹರಿಣ, ಕಡವೆ, ನವಿಲು, ಕಪಿ ಮೊದಲಾದ ಪ್ರಾಣಿಗಳನ್ನು ಹಲ ಕೆಲವು ಪಕ್ಷಿಗಳನ್ನು, ಹಾವು-ಹೆಬ್ಬಾವುಗಳನ್ನು ಸಹ ಶಾಲೆ ತೆರೆಯುವ ಹೊತ್ತಿಗೆ ಅಲ್ಲಿ ತಂದು ತುಂಬಿಸಿದೆ. ಅಂದಿನಿಂದ ಈ ಮೃಗಾಲಯ ಇರುವ ತನಕವೂ ಆಟದ ಸಾಮಗ್ರಿಗಳು ಇರುವ ತನಕವೂ ಪುತ್ತೂರಿನ ಮಕ್ಕಳು ಸಂಜೆಯ ಹೊತ್ತಿಗೆ ಅಲ್ಲಿಗೆ ಬಂದು ಆಡಿ, ನೋಡಿ, ಸಂತೋಷಪಡತೊಡಗಿದರು. ಅವರು ಬರುತ್ತಿದ್ದುದು ನನ್ನ ಶಾಲೆಗಲ್ಲ, ಅಲ್ಲಿ ಒದಗಿಸಿದ ಕ್ರೀಡಾ ವಿನೋದಗಳ ಸಲುವಾಗಿ"[೨೮] ಎನ್ನುತ್ತಾರೆ. ಬಹುಶಃ ಈ ಮಾತಿನಲ್ಲೇ ಒಂದು ಬಗೆಯ ವಿಷಾದವೂ ಇದೆ. ತನ್ನ ಪ್ರಯೋಗದ ವಿಶಿಷ್ಟತೆ, ಸಾಧನಗಳ ಬಗೆಗೆ ಹೇಳಿಕೊಂಡರೂ ಮಕ್ಕಳು ಬರುತ್ತಿದ್ದುದು ಶಾಲೆಗಲ್ಲ, ಕ್ರೀಡಾ ವಿನೋದದ ಸಲುವಾಗಿ ಎಂಬ ಮಾತು ಗಮನಿಸಬೇಕು. ಬಾಲವನ ಎಂಬ ಈ ವಿಶೇಷ ಶಿಕ್ಷಣ ಪ್ರಯೋಗಕ್ಕಾಗಿ ಕಾರಂತರೇ ಸ್ವತಃ ಪಠ್ಯಕ್ರಮಗಳನ್ನು ರೂಪಿಸಿದ್ದರು. ಕಲಿಕೆಯಲ್ಲೂ ಕೂಡ ಹೊಸ ಹೊಸ ಪ್ರಯೋಗಗಳನ್ನು ಅಳವಡಿಸಿದ್ದರು. ಭಾಷಾ ಶಿಕ್ಷಣಕ್ಕಾಗಿ ಬಲ್ಲಾರ್ಡ್ ಎಂಬ ಭಾಷಾ ಚಿಂತಕನ ಸೂತ್ರಗಳನ್ನು ಅನುಸರಿಸಿ ವಾಕ್ಯದಿಂದ ಭಾಷೆಯನ್ನು ಕಲಿಸುವ ಕ್ರಮವನ್ನು ಅನುಸರಿಸಿದ್ದರು. ಗಣಿತದ ಕೂಡುವ ಮತ್ತು ಕಳೆಯುವ ಲೆಕ್ಕಗಳಿಗೆ ಪ್ಲೈವುಡ್ಡಿನ ಆಕೃತಿಗಳನ್ನು ಬಳಸಿದರು. ಬಾಲವನದ ಆವರಣದಲ್ಲಿ ತಾನು ಕಂಡು ಯಾವುದರ ಬಗೆಗೆ ಮಕ್ಕಳಿಗೆ ಕುತೂಹಲ ಹುಟ್ಟುವುದೋ ಅದಕ್ಕೆ ಉಪಾಧ್ಯಾಯರು ಉತ್ತರಿಸಬೇಕಿತ್ತು. ಭಾಷೆಯನ್ನು ಕಲಿಸುವ ಮತ್ತು ಗಣಿತದ ಕಲಿಕೆಗೆ ಸಂಬಂಧಿಸಿದಂತೆ ಕಾರಂತರಲ್ಲಿ ಆವರೆಗೆ ಎಲ್ಲೂ ಇಲ್ಲದ ಹೊಸ ಬಗೆಯ ಪ್ರಯೋಗವನ್ನು ಬಾಲವನದ ಮೂಲಕ ಮಾಡಿದ್ದರು. ಗಣಿತ ಕಲಿಕೆಯ ಬಗೆಗೆ ಹೇಳುತ್ತಾ "ಸರಳ ಗಣಿತ ಪ್ರಶ್ನೆಗಳನ್ನು ಕುತೂಹಲದಿಂದಲೇ ಬಿಡಿಸಲು ಪ್ರಯತ್ನಿಸುತ್ತಾರೆ. ನಮ್ಮ ಆಯುಷ್ಯದಲ್ಲೇ ಬರಲಾರದಂಥ ಅಂಕೆ ಸಂಖ್ಯೆ, ಪ್ರಮೇಯಗಳನ್ನೆಲ್ಲ - ಪುಸ್ತಕದಲ್ಲಿ ತಂದು ಹಾಕುವುದರಿಂದ ಮಕ್ಕಳಲ್ಲಿ ಗಣಿತ ವಿಷಯದಲ್ಲಿ ಭಯ ಹುಟ್ಟುತ್ತದೆ. ಅಂಥ ಭಯ ಕೊನೆಯ ತನಕ ಉಳಿಯಲೂ ಬಹುದು. ನಿತ್ಯ ಜೀವನದ ನಮ್ಮ ಯಾವ ವ್ಯವಹಾರದಲ್ಲೂ ಅಷ್ಟೆಲ್ಲಾ ದೊಡ್ಡ ಸಂಖ್ಯೆಗಳಾಗಲಿ, ಸಮಸ್ಯೆಗಳಾಗಲಿ ಬರುವುದಿಲ್ಲ. ನಮ್ಮ ಅವಾಸ್ತವಿಕ ದೃಷ್ಟಿ ಮಕ್ಕಳಲ್ಲಿ ಇರುವ ಜ್ಞಾನವನ್ನು ಸಹ ಕೆಡಿಸುವುದಕ್ಕೆ ಕಾರಣವಾದೀತು"[೨೯] ಎನ್ನುತ್ತಾರೆ. ಇದು ಕಾರಂತರು ತಮ್ಮ ಬಾಲವನದ ಪ್ರಯೋಗದಿಂದಲೇ ಕಂಡುಕೊಂಡ ಸಂಗತಿಯಾಗಿದ್ದಿರಬಹುದು. ಶಿಕ್ಷಣದ ಚಿಂತನೆ, ಸಿದ್ಧಾಂತಗಳು ಮೂರ್ತ ಪ್ರಯೋಗದಲ್ಲೇ ಅದು ಸಾಕಾರಗೊಳ್ಳುವುದು, ಮತ್ತು ತನ್ನ ಮಿತಿಯನ್ನು ಕಂಡುಕೊಳ್ಳಲು ಸಾಧ್ಯವಾಗುವುದು. ಬಾಲವನದ ಮೂಲಕ ಕಾರಂತರು ಒಂದು ಪ್ರಯೋಗಶೀಲ ವ್ಯವಸ್ಥೆಯೊಂದನ್ನು

ರೂಪಿಸಿದರೂ ಅದು ತನ್ನ ಉತ್ಕೃಷ್ಟ ಫಲಿತಾಂಶವನ್ನು ತೋರಿಸುವಲ್ಲಿ ಒಂದು ಮಾದರಿ ವ್ಯವಸ್ಥೆಯಾಗಿ ನಿಲ್ಲಲಿಲ್ಲ ಎಂಬುದು ಒಂದು ದುರಂತ ಎಂದೇ ಹೇಳಬೇಕು.

೩.೫ ಕಾರಂತರ ಮಕ್ಕಳ ಸಾಹಿತ್ಯ: ವಸ್ತು ವೈವಿಧ್ಯ, ಮತ್ತು ವಿಶಿಷ್ಟತೆ

ಕನ್ನಡದಲ್ಲಿ ಬಾಲ ಸಾಹಿತ್ಯದ ಬಗ್ಗೆ ಜೀವನದುದ್ದಕ್ಕೂ ಆಸಕ್ತಿ ಹೊಂದಿ ಸಕ್ರಿಯರಾಗಿದ್ದ ಶಿವರಾಮ ಕಾರಂತರು ಬಾಲ ಸಾಹಿತ್ಯ ಕೃತಿಗಳನ್ನು ರಚಿಸಿದ್ದಾರೆ. ವಿಜ್ಞಾನ ಮತ್ತು ಸಮಾಜ ಪರಿಚಯ, ಜಗತ್ತಿನ ಇತರ ಪ್ರದೇಶಗಳ ವೈಶಿಷ್ಟ್ಯ ಹಾಗೂ ಜನಜೀವನದ ಪರಿಚಯವೂ ಮಕ್ಕಳ ಸಾಹಿತ್ಯವೇ ಎಂದು ಅವರು ನಂಬಿದ್ದರು. ಅವರ ಸಾಹಿತ್ಯ ಚಿಂತನೆ, ಸೃಷ್ಟಿ ಹಾಗೂ ಬಾಲ ಶಿಕ್ಷಣ ಚಟುವಟಿಕೆಗಳಲ್ಲೆಲ್ಲಾ ಈ ಚಿಂತನೆ ಅಂತರ್ಗತವಾಗಿದೆ.

ಶಿವರಾಮ ಕಾರಂತರ ಮಕ್ಕಳ ಸಾಹಿತ್ಯವನ್ನು ಜೀವನ ಪ್ರೀತಿಯ ಬಾಲಪ್ರಜಾಶಿಕ್ಷಣದ ಭಾಗವಾಗಿ ನೋಡಬೇಕಾಗುತ್ತದೆ. ಅದರಲ್ಲಿ ಅವರು ಮಕ್ಕಳಿಗೆಂದು ಬರೆದ ಕಥೆ, ನಾಟಕ, ನೀಳ್ಗತೆಗಳು ಒಂದು ಮುಖವಾಗಿದೆ ಅಷ್ಟೆ. ಕಾರಂತರು ಮಕ್ಕಳ ಚಟುವಟಿಕೆಗಳನ್ನು ನಡೆಸಿದಷ್ಟು ಬೇರೆಯವರು ನಡೆಸಿರಲಾರರು. ಕಾರಂತರು ೧೯೩೦ರ ದಶಕದಲ್ಲಿ ಮಕ್ಕಳ ಮನೋವಿಕಾಸದ ಚಟುವಟಿಕೆಗಳನ್ನು ಪ್ರಾಯೋಗಿಕವಾಗಿ ಮಾಡಿದರು. ಇದರ ಅಂಗವಾಗಿ ಅವರ ಸೃಜನಶೀಲ ಮಕ್ಕಳ ಸಾಹಿತ್ಯ, ಪಠ್ಯಪುಸ್ತಕಗಳು, ನಾಟಕಗಳು ಮುಂತಾದವುಗಳನ್ನು ಕಾಣಬಹುದು. ೧೯೮೦ರ ದಶಕದಲ್ಲಿ 'ತರಂಗ' ವಾರಪತ್ರಿಕೆಯ 'ಬಾಲವನ' ವಿಭಾಗದಲ್ಲಿ ಕಾರಂತರು ಮಕ್ಕಳ ಪ್ರಶ್ನೆಗಳಿಗೆ ಉತ್ತರಿಸುವ ಪ್ರಶ್ನೋತ್ತರ ಅಂಕಣವನ್ನು 'ಬಾಲವನದಲ್ಲಿ ಕಾರಂತಜ್ಜ' ಎನ್ನುವ ಅಂಕಣವನ್ನು ಆರಂಭಿಸಿದರು. ಅವರು ಮಕ್ಕಳ ಪುಟ್ಟ ಪುಟ್ಟ ಪುಸ್ತಕಗಳನ್ನು ಇಂಗ್ಲಿಷಿನಿಂದ ಅನುವಾದಿಸಿಕೊಡುತ್ತಿದ್ದರು.

೩.೫.೧. ಕಾರಂತರ ಮಕ್ಕಳ ಸಾಹಿತ್ಯ ಕೃತಿಗಳು

ಈಗಾಗಲೇ ಇರುವ ಮಕ್ಕಳ ಸಾಹಿತ್ಯ ಕೃತಿಗಳಲ್ಲಿ ಮಕ್ಕಳ ಸುಪ್ತಚೇತನ ಹೊರಗೆ ಬರಲು ಸಾಧ್ಯ ಇಲ್ಲ ಎಂದು ಕಾರಂತರು ಮಕ್ಕಳಿಗಾಗಿ ಸೃಜನಶೀಲ ಸಾಹಿತ್ಯ ಕೃತಿಗಳ ಪ್ರಕಟಣೆ ಮಾಡಿದರು. ಅವುಗಳು ಯಾವುದೆಂದರೆ.

೧. ಅನಾದಿ ಕಾಲದ ಮನುಷ್ಯ

೨. ಒಂದೇ ರಾತ್ರಿ! ಒಂದೇ ಹಗಲು!!

೩. ಗಜರಾಜ

೪. ಗೆದ್ದವರ ಸತ್ಯ

೫. ಢಂ ಢಂ ಡೋಲು

೬. ನರನೋ ವಾನರನೋ

೭. ಮರಿಯಪ್ಪನ ಸಾಹಸಗಳು

೮. ಮಂಗನ ಮದುವೆ

೯. ಸೂರ್ಯಚಂದ್ರ

೧೦. ಹುಲಿರಾಯ

೧೧. ಸಿಹಿ ಮೂಲಂಗಿ

೧೨. ಕೊಂಚತಂತ್ರ

೧೩. ಪಶುಬಲ

೩.೫.೧.೧ ಕಾರಂತರ ಮಕ್ಕಳ ನಾಟಕಗಳು

೧. ಮಂಗನ ಮದುವೆ

ಈ ನಾಟಕವು ಕಾರಂತರ ಯಶಸ್ವಿ ನಾಟಕಗಳಲ್ಲಿ ಒಂದಾಗಿದೆ. ಈ ನಾಟಕದ ಪಾತ್ರಗಳು – ಸುಮಂತ, ವಸಂತ, ರಾಜಕುಮಾರ, ಚೆಲುವೆ – ಸೆರೆಸಿಕ್ಕಿದ ರಾಜಕುಮಾರಿ, ಋಷಿ, ಚೆಲುವೆಯ ತಂದೆ, ಶೃಂಗಾಸುರ – ರಾಕ್ಷಸ, ಶೃಂಗಿ – ರಾಕ್ಷಸನ ಹೆಂಡತಿ, ದ್ರಿಮಿತ್ರಿಕಿಟ ಅವರ ಮಗ ಮತ್ತು ಹುಲಿ, ನರಿ ಹಾಗೂ ಗಿಳಿ. ಈ ನಾಟಕದ ಪ್ರಾರಂಭದಲ್ಲಿ ಸುಮಂತನನ್ನು ರಾಕ್ಷಸ ಎತ್ತಿಕೊಂಡು ಹೋಗುತ್ತಾನೆ. ಆ ನಂತರ ಸುಮಂತನನ್ನು ಹುಡುಕಿಕೊಂಡು ವಸಂತ ಮತ್ತು ಹರಿಣ ಹೋಗುತ್ತಾರೆ. ಹೋಗುವಾಗ ಇವರಿಗೆ ಹುಲಿ. ನರಿ, ಋಷಿ ಗಿಳಿ, ಹೆಗ್ಗಣಗಳು ಸಹಾಯ ಮಾಡುತ್ತಾರೆ. ಇವರ ಸಹಾಯದಿಂದ ಸುಮಂತನನ್ನು ಬಿಡಿಸಿಕೊಂಡು ಬರುತ್ತಾರೆ. ಈ ನಾಟಕದಲ್ಲಿ ಬರುವ ಕಥೆಯನ್ನು ನೋಡಿದರೆ ಮಕ್ಕಳಿಗೆ ಆಸಕ್ತಿದಾಯಕವಾಗಿದೆ. ಇಲ್ಲಿ ಬರುವ ರಾಕ್ಷಸನ ಮಾತುಗಳಲ್ಲಿ ಆಕರ್ಷಕವಾದ ಶಾಬ್ಧಿಕ 'ಕೋಡಂಗಿತನ'ವಿದೆ. ಉದಾಹರಣೆಗೆ ಸುಮಂತ, ಬಿಲ್ಲೆತ್ತಿ ಬಗ್ಗಿಸಲು ಮುಂದಾದಾಗ ರಾಕ್ಷಸ ಹಾಕುವ ಮಂತ್ರ ಹೀಗೆ – 'ಟ್ರಕ ಟಟ್ರಾಷ್ಟುಕ ಟ್ರಾಂಕು!'

ಪ್ರಾಣಿಗಳು ಮಾತನಾಡುವಾಗ ಅವುಗಳ ಗುರುತಾಗಿ ಅವುಗಳ ಧ್ವನಿ ಅನುಕರಣೆ ಮಾಡುವ ಶಬ್ಧಗಳನ್ನು ಉದಾಹರಣೆಗೆ, ನರಿಗೆ 'ಉಕ್ಯೋ, ಹುಕ್ಯೋ ಹುಕ್ಯೋ' ಶಬ್ಧಗಳನ್ನು ಬಳಸಿದ್ದಾರೆ. ಇಲ್ಲಿ ಬರುವ ಕಥೆಯು ಮಕ್ಕಳಿಗೆ ಇಷ್ಟ ಆಗುವ ಹಾಗೆ ಸುಖಾಂತ್ಯವನ್ನು ಪಡೆದಿದೆ. ಮಕ್ಕಳ ಮನಸ್ಸಿನಲ್ಲಿ ಪ್ರಾಣಿ ಪಕ್ಷಿಗಳನ್ನು ಪ್ರೀತಿಸುವ ಭಾವನೆ ಮೂಡುವ ಹಾಗೆ ಈ ಕಥೆ ಚಿತ್ರಿತವಾಗಿದೆ.

೨. ಸಿಹಿ ಮೂಲಂಗಿ

ರಷ್ಯಾನ್ ಮಕ್ಕಳ ಕತೆಯೊಂದರ ಇಂಗ್ಲಿಷ್ ಅನುವಾದವನ್ನು ಓದಿ ಕಾರಂತರು ಕನ್ನಡದಲ್ಲಿ ರಚಿಸಿದ ನಾಟಕವಿದು. ಇದು ಕಾರಂತರ ಬಾಲ ಸಾಹಿತ್ಯದಲ್ಲಿ ವಿಶೇಷ ಸ್ಥಾನವನ್ನು ಪಡೆಯುವಷ್ಟು ಚೆನ್ನಾಗಿದೆ. ಇದು ೩೩ ಪುಟಗಳ ದೊಡ್ಡ ನಾಟಕ. ಪ್ರಾಥಮಿಕ ಶಾಲೆಯ ಮತ್ತು ಹೈಸ್ಕೂಲಿನ ಮಕ್ಕಳಿಗೆ ಪ್ರಿಯವಾಗಬಹುದಾದ ನಾಟಕವಿದು. ಇದರ ಭಾಷೆ ಮಕ್ಕಳಿಗೆ ಇಷ್ಟವಾಗುವಂತೆ ಸರಳ ಆಡುಮಾತಿನಲ್ಲಿದೆ. ಮತ್ತು ನಡುನಡುವೆ ಬರುವ ಹಾಡುಗಳು ಸುಲಲಿತವಾಗಿದೆ. ಈ ನಾಟಕದ ಪಾತ್ರಧಾರಿಗಳಾಗಿ ನಾಯಿ, ಇಲಿ, ಬೆಕ್ಕು, ಆಮೆ, ಹೆಗ್ಗಣ ಮತ್ತು ಅಜ್ಜ ಇರುತ್ತಾರೆ. ಇಲ್ಲಿ ಬರುವ ಪ್ರಾಣಿ ಸಾಹಸ ಕಥೆ ಮಕ್ಕಳಿಗೆ ಇಷ್ಟವಾಗುವಂತದ್ದೆ. ಇಲಿಯ ಜೊತೆಗೆ ಬೆಕ್ಕಿನ ಮೈತ್ರಿ ಮಕ್ಕಳಿಗೆ ಪ್ರಿಯವಾಗುವ ಅಂಶಗಳಾಗಿವೆ.

೩. ಗೆದ್ದವರ ಸತ್ಯ

ಇದು ಒಂದು ಗೀತ ನಾಟಕವಾಗಿದೆ. ನಾಟಕದ ಕ್ರಿಯೆ ನಡೆಯುವ ಸ್ಥಳ, ಯುರೋಪಿನ ಮತ್ತು ಪ್ರಪಂಚದ ವಿವಿಧ ಅರಣ್ಯಗಳಲ್ಲಿ. ಈ ನಾಟಕದಲ್ಲಿ ಬರುವ ಪ್ರಾಣಿಗಳು ವಿವಿಧ ಜನಾಂಗಗಳನ್ನು ಸಂಕೇತಿಸುತ್ತದೆ. ಇದರ ಮುಖ್ಯ ಪಾತ್ರಗಳು ತೋಳ – ಜರ್ಮನಿ, ಕಿರುಬ– ಇಟೆಲಿ, ಚಿರತೆ – ಜಪಾನು, ನರಿ – ಬ್ರಿಟನ್, ನಾಯಿ – ಫ್ರಾನ್ಸ್, ದನ – ಚೀನಾ, ಕರಡಿ – ರಷ್ಯಾ, ಸಿಂಹ– ಸಂಯುಕ್ತ ಅಮೇರಿಕ. ಇತರ ಪಾತ್ರ ವರ್ಗ : ಮೊಲ – ಜೆಕೋಸ್ಲೊವಾಕಿಯ, ಟರ್ಕಿಕೋಳಿ– ಟರ್ಕಿ, ಕೋಳಿ – ಪೋಲಂಡ್, ಬೆಕ್ಕು – ಪರ್ಶಿಯಾ, ಕುರಿ – ಹಿಂದೂಸ್ಥಾನ, ಕಾಂಗರೂ – ಆಸ್ಟ್ರೇಲಿಯ.

ಇದೊಂದು ಸಂಗೀತ ನಾಟಕ. ಮಹಾಯುದ್ಧ ಮತ್ತು ಯುದ್ಧದ ನಂತರ ಜಗತ್ತಿನ ಪರಿಸ್ಥಿತಿಯನ್ನು ರೂಪಕದ ಮೂಲಕ ವಿವರಿಸುವ ಈ ನಾಟಕ ಮಕ್ಕಳಿಗೆ ವಿಶ್ವ ರಾಜಕೀಯದ ವರ್ತಮಾನ ಕಾಲದ ಪರಿಸ್ಥಿತಿಯನ್ನು ತಿಳಿಸುವ ಉದ್ದೇಶವುಳ್ಳದ್ದು.

೪. ಕೊಂಚತಂತ್ರ

ಇದು ೧೨ ಪುಟಗಳ ಶಿಶುನಾಟಕ. ಪಂಚತಂತ್ರದ ಕತೆಯನ್ನೇ ಆಧರಿಸಿ ಕಾರಂತರು ಸಣ್ಣ ಮಕ್ಕಳಿಗಾಗಿ ನಾಟಕವನ್ನು ರೂಪಿಸಿದ್ದಾರೆ. ಇದೊಂದು ಸಂಗೀತ ನಾಟಕವಾಗಿದೆ. ಸಿಂಹವೊಂದಕ್ಕೆ ದಿನಕ್ಕೊಂದು ಮೊಲ ಬಲಿಯಾಗಬೇಕಾಗುತ್ತದೆ. ನರಿಯ ಸಲಹೆಯಂತೆ ಒಂದು ಮೊಲ ತನಗೆ ದಾರಿಯಲ್ಲಿ ಇನ್ನೊಂದು ಸಿಂಹ ಸಿಕ್ಕಿತೆಂದು ಹೇಳುತ್ತದೆ. ಅದನ್ನು ಮುಗಿಸಿ ಬಿಡಲು ಸಿಂಹ ಹೊರಡುತ್ತದೆ. ಮೊಲ ಬಾವಿಯಲ್ಲಿ ಇಣುಕಿ ನೋಡಲು ಸಿಂಹಕ್ಕೆ ಹೇಳುತ್ತದೆ. ಸಿಂಹ ಬಾವಿಯಲ್ಲಿ

ಇಣುಕಿ ನೋಡಿದಾಗ ಅದರ ಎದುರಾಳಿ ಕಾಣುತ್ತದೆ. ಆಗ ಎದುರಾಳಿಯೊಡನೆ ಹೋರಾಡಲು ಸಿಂಹ ಬಾವಿಗೆ ಹಾರುತ್ತದೆ. ಬುದ್ಧಿ ಇದ್ದರೆ ಎಲ್ಲಿ ಕೂಡಾ ಬದುಕಬಹುದು ಎಂಬ ಸತ್ಯವನ್ನು ಕಾರಂತರು ಮಕ್ಕಳಿಗೆ ತಿಳಿಸುತ್ತಾರೆ.

೩.೫.೧.೨ ಕಾರಂತರ ಮಕ್ಕಳ ಗದ್ಯ ಕೃತಿಗಳು

೧. ಮರಿಯಪ್ಪನ ಸಾಹಸಗಳು

ಇದೊಂದು ಐದು ಭಾಗಗಳ ಜಾನಪದ ಅಪ್ಸರ ಕತೆಯ ಮಕ್ಕಳ ಕತೆ. ಇದರ ಕತೆ ಹೀಗಿದೆ. ಅರಮನೆಯಲ್ಲಿನ ಅಡುಗೆಯ ಮುದುಕಿಗೆ ಒಬ್ಬ ಮರಿಯಪ್ಪ ಎಂಬ ಮೊಮ್ಮಗ ಇರುತ್ತಾನೆ. ಮರಿಯಪ್ಪನಿಗೆ ಅರಮನೆಗೆ ಪ್ರವೇಶ ಇಲ್ಲ ಎಂದಾಗ ಅಜ್ಜಿ ಮೊಮ್ಮಗನನ್ನು ಕರೆದುಕೊಂಡು ಕಾಡಿಗೆ ಹೋಗಿ ಜೀವಿಸುತ್ತಾರೆ. ಕಾಡಿನಲ್ಲಿದ್ದ ಮಂತ್ರವಾದಿ ರಾಜಕುಮಾರಿಯನ್ನು ಅಪಹರಿಸಿರುತ್ತಾನೆ. ಅವಳನ್ನು ಮರಿಯಪ್ಪ ಉಪಾಯದಿಂದ ಬಿಡಿಸಿ ಕರೆದುಕೊಂಡು ಬರುತ್ತಾನೆ. ಅರಮನೆಗೆ ಪ್ರವೇಶವಿಲ್ಲವೆಂದು ಅದನ್ನು ತೊರೆದ ಮರಿಯಪ್ಪ ಸಾಧನೆಯ ಬಲದಿಂದ ಅರಮನೆಗೆ ಹಿಂದಿರುಗುತ್ತಾನೆ.

೨. ಒಂದೇ ರಾತ್ರಿ! ಒಂದೇ ಹಗಲು!!

ಇದರಲ್ಲಿ 'ಒಂದೇ ರಾತ್ರಿ! ಒಂದೇ ಹಗಲು!!' ಮತ್ತು 'ಪೆಂಗ್ವಿನ್ ಹಕ್ಕಿ ಹವಳದ ದ್ವೀಪಕ್ಕೆ ಹೋದದ್ದು' ಎಂಬ ಭಾಗಗಳಿವೆ. ಕಾರಂತರೇ ಸ್ವತಃ ಬಿಡಿಸಿದ 'ದಕ್ಷಿಣ ಧ್ರುವದಲ್ಲಿ ಪೆಂಗ್ವಿನ್ ಹಕ್ಕಿಯ ರಾಜ್ಯ' 'ಪೆಂಗ್ವಿನ್ ಹಕ್ಕಿಯನ್ನು ಕೊಕ್ಕರೆಗಳು ತೊಟ್ಟಿಲಲ್ಲಿ ಕುಳ್ಳಿರಿಸಿಕೊಂಡು ತಮ್ಮ ನಾಡಿಗೆ ಹಾರಿದವು' ಮತ್ತು 'ಅರೋರಾ ಬೆಳಕಿನ ನಾಡು ಎಸ್ಕಿಮೊ ಜನರಿರುವ ದೇಶ' ಎಂಬ ಮೂರು ಚಿತ್ರಗಳಿವೆ.

ಇದನ್ನು ಕಾರಂತರು ಮಕ್ಕಳಿಗೆ ಧ್ರುವ ಪ್ರದೇಶದ ವಾತಾವರಣ, ಜನಜೀವನ ಮತ್ತು ಅಲ್ಲಿರುವ ಜೀವ ವೈವಿಧ್ಯ ಮತ್ತು ವೈಶಿಷ್ಟ್ಯಗಳನ್ನು ಪರಿಚಯಿಸಲು ಬರೆದಿದ್ದಾರೆ. ಮೊದಲನೆಯ ಭಾಗದಲ್ಲಿ ಉತ್ತರಧ್ರುವದ ಎಸ್ಕಿಮೋ ಜನರ ಜೀವನಕ್ರಮ ಅಲ್ಲಿನ ಆರು ತಿಂಗಳು ರಾತ್ರಿ, ಆರು ತಿಂಗಳು ಬೆಳಕಿನ ವೈಚಿತ್ರ್ಯ, ಅರೋರಾ ಎಂಬ ರಾತ್ರಿಯ ಬೆಳಕಿನ ವೈಭವವನ್ನು ಕಣ್ಣಿಗೆ ಕಟ್ಟುವಂತೆ ವರ್ಣಿಸಿದ್ದಾರೆ.

ಎರಡನೆಯ ಭಾಗವನ್ನು ಕಥಾನಕದ ರೂಪದಲ್ಲಿ ಕೊಟ್ಟಿದ್ದಾರೆ. ಇದು ದಕ್ಷಿಣ ಧ್ರುವದ ಪೆಂಗ್ವಿನ್ ಸಾಮ್ರಾಜ್ಯದ ಜೀವನಕ್ರಮವನ್ನು ಅರ್ಥಮಾಡಿಕೊಳ್ಳುವ ಉದ್ದೇಶವುಳ್ಳದ್ದು.

೩. ಹುಲಿರಾಯ

ಇದು ಆರು ಭಾಗಗಳ ನೀಳ್ಗತೆ. ಹುಲಿರಾಯ ಎಂಬವನು ಹುಲಿಗಳ ಜತೆಯಲ್ಲಿ ಬೆಳೆದ ಮಾನವ ಯುವಕ. ಇದರ ಕಥೆ ಹೀಗಿದೆ. ಮಗುವೊಂದನ್ನು ಹುಲಿ ಆಹಾರಕ್ಕಾಗಿ ಎತ್ತಿಕೊಂಡು ಹೋಗುತ್ತದೆ. ಆದರೆ ಮಗುವನ್ನು ತಿನ್ನಲು ಆಗುವುದಿಲ್ಲ. ಯಾಕೆಂದರೆ, ಮಗು ಹುಲಿಯ ಎದುರು ಕೂಡ ಹಸನ್ಮುಖನಾಗಿ ಇರುತ್ತದೆ. ಇದನ್ನು ಕಂಡ ಹುಲಿ ಮಗುವನ್ನು ತಿನ್ನದೆ ತನ್ನ ಮಕ್ಕಳ ಜೊತೆಗೆ ಆಡಲು ಬಿಡುತ್ತದೆ. ಹೀಗೆ ರಾಯ ಎಂಬ ಹೆಸರಿನ ಮಗು ಹುಲಿರಾಯ ಆಗಿ ಹುಲಿಗಳೇ ಅಪ್ಪ ಅಮ್ಮ ಆದವು. ಹುಲಿಯು ತನ್ನ ನಿಜ ಗುಣವನ್ನು ಬಿಟ್ಟು ಜಿಂಕೆಗಳೊಟ್ಟಿಗೆ ಜೀವನ ಮಾಡುತ್ತದೆ. ಹೀಗೆ ಆ ಕಾಡಿನಲ್ಲಿ ಯಾರು ಯಾರ ಮೇಲೆಯೂ ವೈರತ್ವ ಇರದೆ ಜೀವನ ಮಾಡುತ್ತಿದ್ದವು. ನಂತರ ಹೇಮಾ ಎಂಬ ಹುಡುಗಿಯನ್ನು ಮದುವೆಯಾದ ನಂತರ ರಾಯ ತನ್ನ ತಂದೆ ತಾಯಿಯನ್ನು ಸೇರಿಕೊಳ್ಳುತ್ತಾನೆ, ಕಥೆ ಸುಖಾಂತ್ಯಗೊಳ್ಳುತ್ತದೆ. ಒಳ್ಳೆಯವರಿಗೆ ಎಲ್ಲಿ ಹೋದರೂ ಅವಕಾಶ ಇದೆ. ಮನುಷ್ಯನಿಗೆ ಒಳ್ಳೆಯ ನಡೆ ನುಡಿ ಇರಬೇಕು ಎಂಬ ನೀತಿಯನ್ನು ಈ ಕಥೆ ಮಕ್ಕಳಿಗೆ ಸಾರುತ್ತದೆ.

೪. ಗಜರಾಜ

ಇದು ಆನೆಗಳ ಜೀವನ ಕ್ರಮವನ್ನು ತಿಳಿಸಲು ಕಥಾನಕದ ರೂಪದಲ್ಲಿ ಬರೆದ ಬಾಲಸಾಹಿತ್ಯ. ತೀರಾ ಚಿಕ್ಕವರಿಗೆ ಓದಲು ಆಸಕ್ತಿಯಾಗದಾದರೂ ಪ್ರೌಢ – ಪ್ರಾಥಮಿಕ ಹಂತದ ವಿದ್ಯಾರ್ಥಿಗಳು ಓದಿ ಮೆಚ್ಚಬಹುದಾದ ಪುಸ್ತಕವಿದು. ಇದರಲ್ಲಿ ೪೮ ಪುಟಗಳ ಬರಹ ಮತ್ತು ಆರು ಪುಟಗಳಲ್ಲಿ ಕಾರಂತರೇ ಬಿಡಿಸಿದ ಚಿತ್ರಗಳಿವೆ. ಚಿತ್ರಗಳ ಜೊತೆಗೆ ಆಯಾಯ ಸನ್ನಿವೇಶವನ್ನು ನಾಲ್ಕು ಸಾಲುಗಳ ಪದ್ಯಗಳಲ್ಲಿ ಕ್ರೋಢೀಕರಿಸಿದ್ದಾರೆ. ಉದಾಹರಣೆಗೆ, ಒಂದು ಚಿತ್ರದಲ್ಲಿ ಆನೆಯು ಸಾಲಂಕೃತವಾಗಿ ದೇವಸ್ಥಾನದಲ್ಲಿ ಪೂಜೆಯ ವೇಳೆಗೆ ಮೊಣ ಕಾಲೂರಿ ವಂದಿಸುತ್ತಿದೆ. ಜೊತೆಗೆ ಮಾವುತ ಅಂಕುಶ ಹಿಡಿದುಕೊಂಡು ನಿಂತ ಚಿತ್ರವಿದೆ. ಜೊತೆಗಿರುವ ಪದ್ಯ ಹೀಗಿದೆ.

'ಮೊಣಕಾಲೂರುತೆ ವಂದಿಸುವ
ಕಾಡಿನ ದಿನಗಳ ನೆನೆಯುತಿಹ
ಅಂಕುಶದೇಟಿಗೆ ಬೆದರುತಿಹ
ದೇವನೆ ಬಿಡುಗಡೆ ಮಾಡೆನುವ'

ಈ ಪದ್ಯಗಳು ಸೂಚಿಸುತ್ತಿರುವುದೇನೆಂದರೆ ಆನೆಗಳನ್ನು ಪಳಗಿಸಿ ದೇವಸ್ಥಾನಗಳಲ್ಲಿ ಹಿಡಿದಿಟ್ಟುಕೊಳ್ಳಬಾರದು ಎನ್ನುವುದು ಈ ಕಥಾನಕದ ಆಶಯ.

ಕಾರಂತರಿಗೆ ದೇವರು, ದೇವಸ್ಥಾನ ಮಂತಾದವುಗಳ ಬಗ್ಗೆ ನಂಬಿಕೆ ಇಲ್ಲದಿದ್ದರೂ ಇಲ್ಲಿ ಅದನ್ನು ನೇರವಾಗಿ ಹೇಳಿಲ್ಲ. ಈ ಕಥಾನಕದಲ್ಲಿ ಹದಿಹರೆಯದ ಓದುಗರಿಗೆ ಆಘಾತ ಕೊಡುವುದಕ್ಕಿಂತ ದೇವರೇ ತಂದೆ ತಾಯಿಗಳು ತಮ್ಮ ಮರಿಯನ್ನು ಪಡೆಯುವಂತೆ ಕರುಣಿಸಿದ ಎಂಬಂತೆ ಕಥಾನಕವನ್ನು ಮುಗಿಸಿದ್ದಾರೆ. ದೇವಸ್ಥಾನಕ್ಕೆ ಒಂದು ಆನೆ ನಷ್ಟವಾಯಿತು ಅನ್ನುವ ಕಡೆಗೆ ಗಮನ ಸೆಳೆಯದೆ ಮಗು ತಂದೆ ತಾಯಿಗಳನ್ನು ಸೇರಿದ್ದಕ್ಕೆ ಪ್ರಾಮುಖ್ಯ ನೀಡಿರುವುದು ಉಚಿತವಾಗಿದೆ.

೫. ಪಶುಬಲ

ಕಾರಂತರು ಬರೆದ ವೈಜ್ಞಾನಿಕ ನೀಳ್ಗತೆ 'ಪಶುಬಲ'. ಕನ್ನಡದ ಮೊದಲನೆಯ ವೈಜ್ಞಾನಿಕ ಕಥಾನಕವೂ ಹೌದು. ಗಗನ ಯಾತ್ರೆಯ ವಿಧಾನವನ್ನು ಕಾರಂತರು ಈ ಸಂದರ್ಭದಲ್ಲಿ ನೀಡಿದ್ದಾರೆ. ಈಗಿನ ಜ್ಞಾನವನ್ನು ಲಕ್ಷಿಸಿದರೆ ಅದು ಪೂರ್ತಿ ವೈಜ್ಞಾನಿಕವಲ್ಲವಾದರೂ ಆ ಕಾಲದ ಜ್ಞಾನವನ್ನೆಲ್ಲ ಕಾರಂತರು ಅರಗಿಸಿಕೊಂಡಿದ್ದುದರಿಂದ ವೈಜ್ಞಾನಿಕ ಕಥಾನಕದ ಎಲ್ಲ ಲಕ್ಷಣಗಳನ್ನು ಈ ಕಥಾನಕ ಹೊಂದಿದೆ.

ಈ ವೈಜ್ಞಾನಿಕ ಕಥಾನಕ ವಸಾಹತೀಕರಣದ ರೂಪಕದಂತಿದೆ. ಇಂಗ್ಲಿಷರು ಭಾರತವನ್ನು ಆಳುತ್ತಿದ್ದಾಗ ಬರೆದ ಕಥಾನಕವಾದುದರಿಂದ ಇದಕ್ಕೆ ಹದಿಹರೆಯದ ವಿದ್ಯಾರ್ಥಿಗಳಲ್ಲಿ ನಮ್ಮನ್ನು ಅನ್ಯಾಯವಾಗಿ ಆಳುತ್ತಿದ್ದವರ ದೌರ್ಜನ್ಯದ ವಿರುದ್ಧ ಅರಿವು ಮೂಡಿಸುವ ಪ್ರಚ್ಛನ್ನ ಉದ್ದೇಶವೂ ಇತ್ತು.

೩.೫.೧.೩ ಕಾರಂತರ ಮಕ್ಕಳ ಪದ್ಯಗಳು

ಕಾರಂತರು ಮಕ್ಕಳ ಪದ್ಯಗಳನ್ನು ೧೯೪೦ರ ದಶಕದಲ್ಲಿಯೇ ರಚಿಸಿದರು. ಪ್ರಾಥಮಿಕ ಶಾಲಾ ಶಿಕ್ಷಕರಿಗಾಗಿ ನಡೆದ ಒಂದು ವಾರದ ಶಿಬಿರದಲ್ಲಿ ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಿಸಿದ ಪ್ರಯೋಗಗಳನ್ನು ನಡೆಸಿದರು. ಆ ಸಂದರ್ಭದಲ್ಲಿ ಸೃಷ್ಟಿಯಾದ ಪದ್ಯಗಳಿವು. ಮಕ್ಕಳ ಶಿಕ್ಷಣದಲ್ಲಿ ಹಾಡಿನ ಉಪಯುಕ್ತತೆಯನ್ನು ಕಾರಂತರ 'ಢಂ ಢಂ ಡೋಲು' ಕವನ ಸಂಕಲನದ ಮುನ್ನುಡಿಯಲ್ಲಿ ಹೀಗೆ ಹೇಳಿಕೊಳ್ಳುತ್ತಾರೆ. "ಮಕ್ಕಳ ಗೀತೆ, ಸಾಹಿತ್ಯ, ಕಥೆ ಇವೆಲ್ಲವೂ ವಿಷಯನಿಷ್ಠ ಪಾಠಗಳಾಗಬೇಕಿಲ್ಲ. ಅವು ಮಕ್ಕಳಲ್ಲಿ ಉತ್ಸಾಹ ಹುಟ್ಟಿಸಬಲ್ಲ ನಾದ, ಲಹರಿ, ಮಾತುಗಳ ಸ್ವಯಂಪೂರ್ಣ ಭಾವ ವಿಲಾಸಗಳ ಕೃತಿಗಳು ಆಗಿರಲು ಸಾಧ್ಯ"[೩೦] ಎನ್ನುತ್ತಾರೆ. ಹೀಗೆ ಕಾರಂತರು ತನ್ನ ಪದ್ಯಗಳಲ್ಲಿ ಶಿಶುಕೇಂದ್ರಿತ ವಿಷಯವನ್ನೆ ಆಯ್ಕೆ ಮಾಡಿಕೊಳ್ಳುತ್ತಾರೆ.

ಈ ಸಂಕಲನದಲ್ಲಿ ೩೭ ಪದ್ಯಗಳಿವೆ. ಪದ್ಯಗಳ ವಸ್ತುಗಳು ಮಕ್ಕಳಿಗೆ ಪರಿಚಿತವಾಗಿದೆ. ಮತ್ತು ಕಲ್ಪನೆಯಲ್ಲಿ ನಾವೀನ್ಯ ಉಳ್ಳವುಗಳಾಗಿವೆ. ಉದಾಹರಣೆಗೆ 'ಗುಮ್ಮನದೋಸೆ' ಎಂಬ ಪದ್ಯದಲ್ಲಿ ಮಳೆಗಾಲದಲ್ಲಿ ಆಕಾಶದಲ್ಲಿ ಮೋಡಗಳು ದಟ್ಟೈಸಿ ಗುಡುಗು ಮಿಂಚುಗಳಾಗಿ ಮಳೆ ಸುರಿದು, ಬಾನು ಶುಭ್ರವಾಗುವ ಸನ್ನಿವೇಶವನ್ನು ಒಂದು ಸ್ವಾರಸ್ಯಕರ ಕಲ್ಪನೆಯಾಗಿ ಕಾರಂತರು ನಿರೂಪಿಸಿದ್ದಾರೆ.

'ಕೋಳಿಯೊಂದು ಕೂಗಿತು' ಎಂಬ ಪದ್ಯದಲ್ಲಿ ಜಂಬದ ಕೋಳಿಗಳೆರಡು ತಾನು ಮೇಲೆ ತಾನು ಮೇಲೆಂದು ಜಗಳಾಡುತ್ತವೆ. ಗೆದ್ದ ಹುಂಜ ಬೀಗಿ ಕೂಗುತ್ತದೆ. ಕೂಗು ಕೇಳಿ ನರಿ ಮಾವ ಓಡಿ ಬಂದನು. ಒಂದೇ ಏಟಿಗದನು ಕಚ್ಚಿ ಒಯ್ದೇ ಬಿಟ್ಟನು! ಎಂದು ಪದ್ಯ ಕೊನೆಗೊಳ್ಳುತ್ತದೆ.

ಈ ಸಂಕಲನದಲ್ಲಿ ಸಣ್ಣ ಪುಟ್ಟ ಅಸಂಗತ ಶಿಶು ಪ್ರಾಸಗಳು ಹಾಗೂ ಹಾಡುಗಳು ಕೂಡಾ ಇವೆ. ಉದಾಹರಣೆಗೆ, ಢಂ ಢಂ ಡೋಲು ಪದ್ಯ ಹೀಗಿದೆ. 'ತುಂಬಿ ತುಂಬಿ ತುಳುಕಿತು। ಎಮ್ಮೆ ಹಾಲು ಬತ್ತಿತು॥ ಕೊಬ್ಬಿ ಕೊಬ್ಬಿ ಹೆಚ್ಚಿತು। ಎಮ್ಮೆ ಕಾಲು ಬಚ್ಚಿತು॥ ಥಳಿಸಿ ಹೊಳೆದು ಮಿನುಗಿತು। ಎಮ್ಮೆ ಕಣ್ಣು ಹೊಟ್ಟೆತು॥ ಎಮ್ಮೆ ಪ್ರಾಣ ಬಿಟ್ಟಿತು। ಢಂ ಢಂ ಡೋಲು ಆಯಿತು'.

೩.೫.೨. ಕಾರಂತರ ಸೃಜನೇತರ ಕೃತಿಗಳು

ಕಾರಂತರು ಶಾಲಾ ವಿದ್ಯಾರ್ಥಿಗಳಿಗೆ ಪೂರಕ ಪಠ್ಯಪುಸ್ತಕಗಳಾಗಿ ಕೆಲವು ಸೃಜನೇತರ ಕೃತಿಗಳನ್ನು ರಚಿಸಿದ್ದಾರೆ. ಅವುಗಳ ಹೆಸರು ಈ ಕೆಳಗಿನಂತಿದೆ.

೩.೫.೨.೧ ಸಚಿತ್ರ ಸಮಾಜ ವಿಜ್ಞಾನ ಸಾಹಿತ್ಯ

೧. ಚಿತ್ರಮಯ ದಕ್ಷಿಣ ಹಿಂದೂಸ್ಥಾನ

೨. ಚಿತ್ರಮಯ ದಕ್ಷಿಣ ಕನ್ನಡ

೩. ನಾಗರಿಕತೆಯ ಹೊಸ್ತಿಲಲ್ಲಿ

೪. ನಮ್ಮ ನೆರೆಕರೆಯವರು

೫. ರಮಣ ತಾತ

೬. ಚಿತ್ರಮಯ ದಕ್ಷಿಣ ಕನ್ನಡ ಅಂದು – ಇಂದು

೧. ಚಿತ್ರಮಯ ದಕ್ಷಿಣ ಕನ್ನಡ

ಚಿತ್ರಮಯ ದಕ್ಷಿಣ ಕನ್ನಡ ಪಠ್ಯಪುಸ್ತಕವನ್ನು ರಚಿಸಿದ್ದು ಮಕ್ಕಳಿಗೆ ಆಕರ್ಷಕವಾದ ಪಠ್ಯಕ್ರಮ ಆಗಬೇಕು ಎನ್ನುವ ಉದ್ದೇಶದಿಂದ. ಆಗ ಮದ್ರಾಸ್ ಸರಕಾರದ ಶಿಕ್ಷಣ ಕ್ರಮದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಭೂ ವಿವರಣೆ ಪಾಠವೊಂದಿತ್ತು. ಅದಕ್ಕಾಗಿ ಇದ್ದ ಪಠ್ಯ ಪುಸ್ತಕವನ್ನು ಕಂಡು

ಬೇಸರಗೊಂಡು ಈ ಪುಸ್ತಕವನ್ನು ಬರೆದರು. "ಯುರೋಪು ಅಮೇರಿಕ ಮೊದಲಾದ ಮುಂದುವರಿದ ದೇಶಗಳಲ್ಲಿ ಪಠ್ಯ ಪುಸ್ತಕಗಳೆಂದರೆ ತುಂಬ ರಸವತ್ತಾಗಿರುವುದು. ಅದರಲ್ಲೂ ಭೂಗೋಲವೆಂದರೆ ಕಾದಂಬರಿಯನ್ನು ಓದಿದಂತೆ. ಆದರೆ ನಮ್ಮ ದೇಶದಲ್ಲಿ ಭೂಗೋಳವೆಂದರೆ ಹೆಸರು, ಸಂಖ್ಯೆಗಳಿಂದ ತುಂಬಿದ ಒಂದು ಸಹಸ್ರನಾಮಾವಳಿ. ಚಿಕ್ಕ ಮಕ್ಕಳಿಗೆ ಅದರಲ್ಲಿ ಮಮತೆಯುಂಟಾಗುವುದೆಂತು?"[೩೧] ಎಂದು ಕಾರಂತರು ಚಿತ್ರಮಯ ದಕ್ಷಿಣ ಕನ್ನಡದಲ್ಲಿ ಹೀಗೆ ಹೇಳಿಕೊಳ್ಳುತ್ತಾರೆ. ಚಿಕ್ಕ ಮಕ್ಕಳ ಮನಸ್ಸನ್ನು ಸೆಳೆಯುವಂತೆ ಕಥಾನಕವಾಗಿ ಬರವಣಿಗೆಯಾಗಬೇಕೆಂಬ ಆಸೆಯನ್ನು ಇಲ್ಲಿ ವ್ಯಕ್ತ ಪಡಿಸುತ್ತಾರೆ.

ಕಾರಂತರು ಚಿತ್ರಮಯ ದಕ್ಷಿಣ ಕನ್ನಡವನ್ನು ಫೋಟೋಗಳುಳ್ಳ ಮತ್ತು ಆಕರ್ಷಕ ನಿರೂಪಣಾ ಕಥಾನಕವುಳ್ಳ ಈ ಪುಸ್ತಕವನ್ನು ರಚಿಸಿದರು. ಕಿಟ್ಟು ಎಂಬ ಹುಡುಗನ ಅನುಭವ ಗೆಳೆಯರೊಂದಿಗೆ ಅವನ ಪ್ರವಾಸಗಳ ಮೂಲಕ ದಕ್ಷಿಣ ಕನ್ನಡದ ವಿವಿಧ ಸ್ಥಳ, ವಾಸ್ತು ಹಾಗೂ ಜೀವನಕ್ರಮಗಳನ್ನು ಕಾರಂತರು ಪರಿಚಯಿಸಿದ್ದಾರೆ. ಅಪೂರ್ವವಾದ ೯೬ ಫೋಟೋಗಳನ್ನು ಸೆರೆಹಿಡಿದು, ಬಾಸೆಲ್ ಮಿಶನಿನವರ ಮೂಲಕ ಜರ್ಮನಿಗೆ ಕಳುಹಿಸಿ ಫೋಟೋ ಗ್ರೆವ್ಯೂರ್ ತಂತ್ರಜ್ಞಾನದ ಮೂಲಕ ಅವುಗಳನ್ನು ಕಾರಂತರು ಮುದ್ರಿಸಿದರು.

೩.೫.೨.೨ ಕಾರಂತರ ವಿಶ್ವಕೋಶ ಅಥವಾ ಜ್ಞಾನಕೋಶಗಳು

ಕನ್ನಡದಲ್ಲಿ ಆಸಕ್ತಿ ಹುಟ್ಟಿಸುವ ಅಧ್ಯಯನ ಕೋಶಗಳ ಕೊರತೆಯನ್ನು ಮನಗಂಡ ಕಾರಂತರು ಬಾಲ ಪ್ರಪಂಚ ಮತ್ತು ವಿಜ್ಞಾನ ಪ್ರಪಂಚ ಸಂಪುಟಗಳನ್ನು ಬರೆದು ಪ್ರಕಟಿಸಿದರು. ವಿ.ಎಂ.ಇನಾಂದಾರರ ಪ್ರಕಾರ "ಕಾರಂತರು ಬೇರೆ ಏನನ್ನೂ ಬರೆಯದೆ ಹೋಗಿದ್ದರೂ ಕನ್ನಡದಲ್ಲಿಯ ಪ್ರಪ್ರಥಮ ವಿಶ್ವಕೋಶಕಾರರೆಂದು ಅವರ ಹೆಸರು ಕನ್ನಡ ನಾಡಿನಲ್ಲಿ ಅಮರ ಕೀರ್ತಿಯನ್ನು ಪಡೆಯುತ್ತಿತ್ತು. ನಿಜವಾಗಿಯೂ ಈ ಅಖಂಡ ಸಾಧನೆ ಒಂದು ಅದ್ಭುತ"[೩೨] ಎನ್ನುತ್ತಾರೆ.

೧. ಬಾಲ ಪ್ರಪಂಚ

'ಬಾಲ ಪ್ರಪಂಚ'ದ ಮೂರು ಸಂಪುಟಗಳು ಮಕ್ಕಳಿಗಾಗಿಯೇ ಬರೆದ ಗ್ರಂಥಗಳು. "ಬಾಲ ಪ್ರಪಂಚವು ಮಕ್ಕಳ ಮನಸ್ಸಿನ ಹಸಿವನ್ನು ಹೆಚ್ಚಿಸುವ ದೊಡ್ಡ ಸಾಹಸ" ಇವು ಕಾರಂತರ ಮಾತುಗಳು. ಬಾಲವನದಲ್ಲಿನ ಚಿಕ್ಕ ಮಕ್ಕಳ ಆಸೆ, ಇಂಗಿತ ಮತ್ತು ಸಹಜ ಕುತೂಹಲಗಳನ್ನು ಲಕ್ಷ್ಯಿಸಿದ ಕಾರಂತರು ಪ್ರಪಂಚದ ಎಲ್ಲ ವಿಚಾರಗಳನ್ನೂ ಕುರಿತು ಒಂದು ದೊಡ್ಡ ಗಾತ್ರದ ಗ್ರಂಥವನ್ನು ರಚಿಸಿದರು. 'ಚಿಕ್ಕ ಮಕ್ಕಳಲ್ಲೂ, ಹಳ್ಳಿಗಾಡಿನ ಉಪಾಧ್ಯಾಯರುಗಳಲ್ಲೂ ತಕ್ಕ ಆಸೆ ಉತ್ಸಾಹ ಮತ್ತು ರುಚಿಕಟ್ಟುಗಳು' ಮೂಡುವಂತೆ ಕನ್ನಡದಲ್ಲಿ ಪ್ರಪಂಚದ ರಚನೆ, ಸ್ಥಿತಿ, ಜೀವನ, ಇತಿಹಾಸ, ಧರ್ಮ,

ಸಾಹಿತ್ಯ ಮೊದಲಾದ ವಿಚಾರಗಳನ್ನೆಲ್ಲ ಒಳಗೊಂಡ ಈ ಗ್ರಂಥ ರಚನೆಯು ಮಹಾ ಸಾಹಸವೆ ಸರಿ. ಕಾರಂತರು ತಾನೇ ಎಲ್ಲಾ ವಿಷಯಗಳನ್ನೂ ಓದಿಕೊಂಡು ತನಗೆ ಅರ್ಥವಾಗದ ವಿಚಾರಗಳನ್ನು ತನ್ನ ಮಿತ್ರರಿಂದ ತಿಳಿದುಕೊಂಡು. ವಿವರಗಳನ್ನು ತಕ್ಕ ಜ್ಞಾನಕೋಶಗಳಿಂದಲೋ, ಚಿತ್ರಮಯ ಪುಸ್ತಕಗಳಿಂದಲೋ ಓದುತ್ತ ಅವಶ್ಯವಿರುವ ಚಿತ್ರಗಳನ್ನು ಪರರಾಷ್ಟ್ರಗಳಲ್ಲಿನ ಸಂಸ್ಥೆಗಳಿಂದಲೋ, ಸ್ನೇಹಿತರಿಂದಲೋ ಪಡೆದು, ತಾನೆ ತೆಗೆದ ಫೋಟೋಗಳನ್ನು ಉಪಯೋಗಿಸಿ ಬೇಕಾದಲ್ಲೆಲ್ಲ ವಿವರಣಾತ್ಮಕ ಚಿತ್ರಗಳನ್ನು ತಾನೇ ಬರೆದು, ಹೀಗೆ ವಿವಿಧ ವಿಚಾರಗಳನ್ನು ಪೋಣಿಸುತ್ತ ಕಾರಂತರು 'ಬಾಲ ಪ್ರಪಂಚ'ದ ಮೂರು ಸಂಪುಟಗಳನ್ನು ಬರೆದರು.

'ಬಾಲ ಪ್ರಪಂಚ'ವು ಎಂಥ ವಿಚಾರಗಳನ್ನೊಳಗೊಂಡಿದೆ ಎಂದರೆ ಖಗೋಲ, ಸೌರವ್ಯೂಹ, ಭೂ ವಿಜ್ಞಾನ, ಪ್ರಕೃತಿ ವಿಜ್ಞಾನ, ಜೀವಸೃಷ್ಟಿ, ಜೀವದ ನಾನಾ ಬಗೆಗಳು, ಜೀವ ವಿಕಾಸ, ಪ್ರಾಚೀನ ಜೀವರೂಪಗಳು, ಭೂಮಿಯಲ್ಲಿ ಜೀವಿಗಳ ಹಂಚಿಕೆ, ಭೂಖಂಡಗಳ ಪರಿಚಯ, ನಾನಾ ದೇಶಗಳ ಜನರ ಪರಿಚಯ, ಸಸ್ಯ ಜೀವನ, ಸಸ್ಯ ವರ್ಗಗಳು, ಮನುಷ್ಯನ ವಿವಿಧ ಕಸುಬುಗಳು, ಕಲೆ, ಕಲೋಪಾಸನೆ, ಸಾಹಿತ್ಯ, ಸಂಗೀತ, ಸಂಗೀತ ಸಾಹಿತ್ಯಗಳ ನಾನಾ ಪ್ರಕಾರಗಳು, ಯಂತ್ರ ತಂತ್ರ ವಿದ್ಯೆ ಯುದ್ಧಗಳು ಮತ್ತು ಧರ್ಮ ಪ್ರವೃತ್ತಿ, ಸಾಗರಗಳು, ನಾಗರಿಕ ಜೀವನ, ಹವಾಶಾಸ್ತ್ರ ಮೊದಲಾದ ವಿಚಾರಗಳನ್ನು ಒಳಗೊಂಡಿದೆ.

೨. ವಿಜ್ಞಾನ ಪ್ರಪಂಚ

ಇದೊಂದು ಅಮೂಲ್ಯವಾದ ವಿಶ್ವಕೋಶವಾಗಿದೆ. 'ವಿಜ್ಞಾನ ಪ್ರಪಂಚ'ದ ಸಂಖ್ಯೆ ನಾಲ್ಕು ಮಾತ್ರ. ಕಾರಣ ಗ್ರಂಥದ ವಸ್ತು ವಿಜ್ಞಾನ ವಿಷಯಗಳಿಗೆ ಮಾತ್ರ ಸೀಮಿತವಾಗಿದೆ. ಪರಸ್ಪರ ಸಂಬಂಧವಿರುವ ವಿಷಯಗಳನ್ನು ಒಂದುಗೂಡಿಸಿ ಒಂದೊಂದಕ್ಕೂ ಒಂದೊಂದು ಸಂಪುಟವನ್ನು ಮೀಸಲಾಗಿರಿಸಿದೆ.

ಮೊದಲ ಸಂಪುಟ 'ಈ ಜಗತ್ತು' ವಿಶ್ವದ ರಚನೆ, ನಕ್ಷತ್ರಗಳು, ನಕ್ಷತ್ರ ಗುಚ್ಛಗಳು, ಸೌರವ್ಯೂಹ, ಅದರ ಹುಟ್ಟು, ಭೂಮಿ, ಭೂಮಿಯ ಪದರಗಳು, ಸಾಗರಗಳು, ವಾಯುಮಂಡಲ, ಭೂಮಿಯಲ್ಲಿನ ಖನಿಜ ಸಂಪತ್ತು ಈ ಎಲ್ಲ ವಿಷಯಗಳು ಈ ಸಂಪುಟದ ವಸ್ತು. ಎರಡನೆಯ ಸಂಪುಟ 'ಜೀವ-ಜೀವನ', ಸಸ್ಯ ಮತ್ತು ಪ್ರಾಣಿ ಜೀವನ, ತಳಿ ವಿಜ್ಞಾನ, ವಿಕಾಸವಾದ, ಶರೀರ ವಿಜ್ಞಾನ, ಆರೋಗ್ಯ ಶಾಸ್ತ್ರ, ಮನಶಾಸ್ತ್ರಗಳೂ ಈ ಸಂಪುಟಕ್ಕೆ ವಸ್ತುವನ್ನೊದಗಿಸಿವೆ. ಮೂರನೆಯ ಸಂಪುಟ 'ವಸ್ತು-ಚೈತನ್ಯ'. ಸ್ಥೂಲವಾಗಿ ಹೇಳುವುದಾದರೆ ಭೌತ ಮತ್ತು ರಸಾಯನ ವಿಜ್ಞಾನಗಳು ಈ ಸಂಪುಟದ ವಸ್ತು. ವಸ್ತು, ಶಕ್ತಿ, ವಸ್ತುವಿನ ಸ್ಥಿತಿಕ್ರಿಯ, ಶಕ್ತಿಯ ವಿವಿಧ ರೂಪಗಳು. ಪರಮಾಣು ರಚನೆ. ಸಾಪೇಕ್ಷ

ಸಿದ್ಧಾಂತ, ಸಾವಯವ ಮತ್ತು ನಿರವಯವ ರಾಸಾಯನಿಕಗಳು, ಮಾನವ ಜೀವನದಲ್ಲಿ ಅವುಗಳ ಪಾತ್ರ ಈ ಎಲ್ಲ ವಿಷಯಗಳನ್ನು ಈ ಸಂಪುಟದಲ್ಲಿ ಚರ್ಚಿಸಿದ್ದಾರೆ. ಕೊನೆಯ ಮತ್ತು ನಾಲ್ಕನೆಯ ಸಂಪುಟ 'ವಿಜ್ಞಾನ ಸಾಧನ'. ಅನ್ವಯಾತ್ಮಕ ವಿಜ್ಞಾನ ಶಾಖೆಗಳಾದ ಇಂಜಿನಿಯರಿಂಗ್ ಮತ್ತು ವೈದ್ಯ ವಿಜ್ಞಾನದ ವಿಷಯಗಳನ್ನು ಈ ಸಂಪುಟದಲ್ಲಿ ಚರ್ಚಿಸಲಾಗಿದೆ. ಕಾರಂತರು ಇಂತಹ ಕೋಶಗಳು ಚಿತ್ರ ಪ್ರಧಾನವಾಗಿರಬೇಕೆಂಬ ಧ್ಯೇಯದಿಂದಲೇ ಹೊರಟವರು. ಈ ಕೆಲಸಗಳು ಶ್ರಮದಾಯಕವೂ ಅಗಾಧ ಖರ್ಚಿನದ್ದೂ ಆಗಿದ್ದವು. ಕನ್ನಡದಲ್ಲಿ ವಿಜ್ಞಾನ ವಿಷಯಗಳನ್ನು ಇಷ್ಟ ಪಟ್ಟು ಕಲಿಯುವಂತೆ ಈ ಸಂಪುಟ ಇದೆ.

೩.೫.೩ ಕಾರಂತರ ಮಕ್ಕಳ ಸಾಹಿತ್ಯದ ವಿಶಿಷ್ಟತೆ

ಕಾರಂತರು ಮಕ್ಕಳ ಮಟ್ಟಕ್ಕೆ ಇಳಿದು ಮಕ್ಕಳ ಸಾಹಿತ್ಯ ರಚಿಸಿದರು. ಇಲ್ಲಿ ಭಾಷೆ ಪ್ರಾಣಿಗಳ ಮಾತುಗಳನ್ನು ವ್ಯಕ್ತಪಡಿಸುವ ಕೋಡಂಗಿ ಶಬ್ದಗಳ ಬಳಕೆ, ಕಥೆಯ ನಿರೂಪಣೆ, ನಾಟಕದ ಸಂಭಾಷಣೆ ಮಕ್ಕಳ ಮನಸ್ಸನ್ನು ಕೆರಳಿಸುವಂತವಾಗಿದೆ. ಕಾರಂತರು ಮಕ್ಕಳ ಸಾಹಿತ್ಯದಲ್ಲಿ ವಿವಿಧ ವಯೋಮಾನದವರಿಗೆ ತಕ್ಕ ಹಾಗೆ ಸಾಹಿತ್ಯ ರಚಿಸಬೇಕೆಂಬ ಚಿಂತನೆಯನ್ನು ಹೊಂದಿದ್ದರು. ಇಲ್ಲಿ ಪರಿಚಯಿಸಿದ ಕೃತಿಗಳ ಬಗ್ಗೆ ಹೇಳುವುದಾದರೆ ಮಕ್ಕಳ ಕತೆಗಳು, ಪದ್ಯಗಳು, ನಾಟಕಗಳು ತೀರಾ ಪುಟ್ಟ ಮಕ್ಕಳಿಗಾದರೆ ಕೇವಲ ಸಂತೋಷ ನೀಡಬೇಕು. ಸ್ವಲ್ಪ ದೊಡ್ಡವರಾಗುತ್ತಾ ಹೋದ ಹಾಗೆ ಮಾಹಿತಿ, ಲೋಕಜ್ಞಾನ, ಚಿಂತನೆಗಳನ್ನು ಒಳಗೊಂಡ ಕಥಾನಕಗಳಿರಬೇಕು ಎಂಬ ಮಾರ್ಗದರ್ಶಿ ಸೂತ್ರವನ್ನು ಕಾರಂತರು ತಮಗೆ ತಾವೇ ಹಾಕಿಕೊಂಡ ಹಾಗೆ ಕಾಣುತ್ತದೆ. ಉದಾ: 'ಮಂಗನ ಮದುವೆ' ನಾಟಕವನ್ನು ನೋಡಿದರೆ ಪುಟ್ಟ ಮಕ್ಕಳಿಗೆ ಸಂತೋಷವನ್ನು ನೀಡುವ ನಾಟಕವಾಗಿದೆ. ಇಲ್ಲಿ ಬರುವ ಕೋಡಂಗಿತನದ ಮಾತು ಪ್ರತಿಹಂತದಲ್ಲಿಯೂ ಮನುಷ್ಯನಿಗೆ ಪ್ರಾಣಿಗಳ ಸಹಕಾರ, ಅಲ್ಲಿ ಯಾವುದೇ ದ್ವೇಷ ಭಾವನೆ ಇಲ್ಲ. ಸುಮಂತನನ್ನು ಹುಡುಕಿಕೊಂಡು ಹೋದ ವಸಂತನಿಗೆ ಪ್ರತಿಯೊಂದು ಹಂತದಲ್ಲಿ ಗೆಲುವು ಮತ್ತು ಸಹಕಾರ, ಸುಲಭವಾಗಿ ಸುಮಂತನನ್ನು ಪಡೆದುಕೊಳ್ಳುವುದು ಮಕ್ಕಳಿಗೆ ನೆಮ್ಮದಿಯನ್ನು ಕೊಡುವ ಕತೆಯಾಗಿದೆ. ಇಲ್ಲಿ ಎಲ್ಲಿಯು ವೈಚಾರಿಕತೆ ಇಲ್ಲ. ನೇರವಾದ ಕತೆಯಾಗಿದೆ. 'ಗಜರಾಜ' ಎಂಬ ಗದ್ಯಕೃತಿ ಪ್ರೌಢ ಶಾಲಾ ಹಂತದ ವಿದ್ಯಾರ್ಥಿಗಳಿಗೆ ಓದಲು ಸೂಕ್ತವಾದ ಕತೆ. ಇಲ್ಲಿ ವೈಚಾರಿಕ ಚಿಂತನೆಯಿದೆ. ದೇವಸ್ಥಾನದಲ್ಲಿ ಆನೆಗಳನ್ನು ಸಾಕುವುದು ತಪ್ಪು, ಆನೆಗಳ ಸ್ವಾತಂತ್ರ್ಯವನ್ನು ಕಿತ್ತುಕೊಂಡ ಹಾಗೆ ಎಂದು ಕಾರಂತರು ಸೂಕ್ಷ್ಮವಾಗಿ ಈ ಕಥೆಯಲ್ಲಿ ಹೇಳಿದ್ದಾರೆ. "ದೇವರೇ ತಂದೆ ತಾಯಿಗಳು ತಮ್ಮ ಮರಿಯನ್ನು ಪಡೆಯುವಂತೆ ಕರಣಿಸಿದ" ಎಂದು ಹೇಳುವ ಮೂಲಕ ಪರೋಕ್ಷವಾಗಿ ಇದರ ವಿರುದ್ಧ ಧ್ವನಿ ಎತ್ತಿದ್ದಾರೆ.

'ಪಶುಬಲ' ಎಂಬ ಕಥೆಯು ವೈಚಾರಿಕವಾದ ಕಥೆಯಾಗಿದೆ. ಇದೊಂದು ವೈಜ್ಞಾನಿಕ ಕಥನವು ಆಗಿದೆ. ಇಂಗ್ಲಿಷರ ಆಳ್ವಿಕೆಯ ಬಗ್ಗೆ ಭಾರತೀಯರಿಗೆ ಯಾವ ರೀತಿ ಅನ್ಯಾಯ ಮಾಡುತ್ತಿದ್ದರು, ಅವರು ಸ್ವಾತಂತ್ರ್ಯವನ್ನು ಯಾವ ರೀತಿ ಕಿತ್ತುಕೊಂಡರು' ಎಂಬುದನ್ನು ಮಕ್ಕಳಿಗೆ ಸೂಕ್ಷ್ಮವಾಗಿ ತಿಳಿಸಿದ್ದಾರೆ. ಬ್ರಿಟಿಷರ ದೌರ್ಜನ್ಯದ ವಿರುದ್ಧ ಹೋರಾಡುವ ಮನೋಭಾವ ಬೆಳೆಯುವ ಹಾಗೆ ಕಥೆಯನ್ನು ನಿರೂಪಿಸಿದ್ದಾರೆ.

ಲೋಕಜ್ಞಾನವನ್ನು ಕಥೆಗಳ ಮೂಲಕ ಕೊಡುವ ಪ್ರಯತ್ನವನ್ನು ಕಾರಂತರು ಮಾಡಿದ್ದಾರೆ. ಗಜರಾಜ, ಒಂದೇ ರಾತ್ರಿ ಒಂದೇ ಹಗಲು, ಕೃತಿಗಳಲ್ಲಿ ಇದನ್ನು ಕಾಣಬಹುದು. ಲೋಕಜ್ಞಾನ ಅಂದರೆ ಅಭಿಪ್ರಾಯ, ರಾಷ್ಟ್ರಪ್ರೇಮ, ಸಿದ್ಧಾಂತ ಮುಂತಾದ ಮತೀಯ ವಿಚಾರಗಳಲ್ಲ. ಅಂತಹ ವಿಚಾರಗಳನ್ನು ಮಕ್ಕಳ ಸಾಹಿತ್ಯದಿಂದ ದೂರ ಇಡಬೇಕು ಎನ್ನುವುದು ಅವರ ಸ್ಪಷ್ಟವಾದ ಅಭಿಪ್ರಾಯವಾಗಿದೆ. ಇದರ ಕುರಿತು ಕಾರಂತರು 'ತಟ್ಟು ಚಪ್ಪಾಳೆ ಪುಟ್ಟ ಮಗು' ಎಂಬ ಪುಸ್ತಕದ ಮುನ್ನುಡಿಯಲ್ಲಿ ಹೀಗೆ ಹೇಳಿದ್ದಾರೆ. "ಅವರ (ಮಕ್ಕಳ) ಲೋಕ ಹಿರಿಯ ಲೋಕವಲ್ಲ. ಅದು ಲೋಕವೂ ಅಲ್ಲ, ದೇಶವೂ ಅಲ್ಲ, ಅದನ್ನು ಎಣಿಸದೆ ನಾವು ತುರುಕುವ ಘೋಷಣೆಗಳು ಅರ್ಥ ವೈಪರೀತ್ಯದಿಂದ ಹೊರ ಹೊಮ್ಮುತ್ತದೆ. ಕನ್ನಡದ ಮಕ್ಕಳಿಗೆ ಸಂಸ್ಕೃತ, ಹಿಂದಿಗಳ ರೂಢಿಯಿಲ್ಲ. ಹಾಗಾಗಿ ಅವರಿಗೆ 'ಭಾರತ ಮಾತೆ' ಎಟುಕದ ವ್ಯಕ್ತಿ. ಅವಳ ಸಲುವಾಗಿ ಮಕ್ಕಳ ಬಾಯಿಯಿಂದ 'ಭಾರತ್ ಮಾತಾ ಕೀ ಜೈ' ಅನ್ನಿಸುವಾಗ ನಗು ಬರುತ್ತದೆ. 'ತಾಯಿಯೇ ನಿನಗೆ ನಮಸ್ಕಾರ' ಎಂಬ ಅರ್ಥದ ಮಾತುಗಳನ್ನು 'ವಂದೇ ಮಾತರಮ್' ಎಂದು ವಿನಯರಹಿತವಾಗಿ 'ಜೋ ಹುಷಾರ್' ಎಂಬಂತೆ, ಸಾಮೂಹಿಕವಾಗಿ ಒದರಿಸುವುದನ್ನು ಕೇಳಿದಾಗ ದುಃಖವಾಗುತ್ತದೆ. ಅದು ದೇಶವಾದರೂ ಸರಿಯೇ, ದೇಶದ ಬಾವುಟವಾದರೂ ಸರಿಯೇ... ಅದರ ಮರಿ ಕನ್ನಡ ಬಾವುಟವಾಗಲಿ ದೇಶದ ಕಲ್ಪನೆ, ಚರಿತ್ರೆಯ ಕಲ್ಪನೆ, ಯುದ್ಧ ಶಾಂತಿ, ದಂಗೆ, ಕೋಲಾಹಲಗಳ ಕಲ್ಪನೆ ಬಂದ ತರುವಾಯ ಬರಬಹುದಾದವು. ಹಾಡಿನ ಕಂಠಪಾಠದಿಂದ ಅವು ಬರುವಂಥವು ಅಲ್ಲವೇ ಅಲ್ಲ!" ಎನ್ನುತ್ತಾರೆ.

ಕಾರಂತರ ಮಕ್ಕಳ ಸಾಹಿತ್ಯಗಳಾದ ಗದ್ಯ, ನಾಟಕ, ಪದ್ಯ ಇವುಗಳಲ್ಲಿ ಪ್ರತಿಯೊಂದು ಹಂತದಲ್ಲಿ ಪ್ರಕೃತಿ ವರ್ಣನೆಯಿದೆ. ಮಕ್ಕಳು ಪ್ರಕೃತಿಯಲ್ಲಿರುವ ಪ್ರಾಣಿ, ಪಕ್ಷಿ, ಗಿಡಮರ, ನೀರು, ಮಣ್ಣು ಇವುಗಳ ಜೊತೆ ಬದುಕಬೇಕು ಎಂಬ ಆಶಯವನ್ನು ಕಾಣಬಹುದು. ಇದನ್ನೆಲ್ಲ ಗಮನಿಸಿದಾಗ ರೂಸೊ, ಟಾಗೋರರ ವಿಚಾರಗಳ ಪ್ರಭಾವ ಕಾರಂತರ ಮೇಲೆ ಬಿದ್ದಿರುವುದನ್ನು ಕಾಣಬಹುದು.

ಕಾರಂತರು ಮಕ್ಕಳ ಸಾಹಿತ್ಯ ಅಂದರೆ ಪದ್ಯವೇ ಪ್ರಧಾನವಾದ ಸಾಹಿತ್ಯ ಎಂದು ಭಾವಿಸುವ ಸೀಮಿತ ದೃಷ್ಟಿಕೋನದವರಲ್ಲ. ಪದ್ಯವನ್ನು ಬರೆದಿರುವ ಕಾರಂತರು ಅದರ ಬಳಕೆಯ ಬಗ್ಗೆ ಸ್ಪಷ್ಟವಾದ

ನಿಲುವನ್ನು ಹೊಂದಿದ್ದರು. ಆದರೆ ಅವರ ಬಾಲ ಸಾಹಿತ್ಯದಲ್ಲಿ ಕಥಾನಕ ಮತ್ತು ನಾಟಕಗಳಿಗೆ, ಅದಕ್ಕಿಂತಲೂ ಮುಖ್ಯವಾಗಿ ಜ್ಞಾನ, ವಿಜ್ಞಾನ ಕೋಶಗಳಿಗೆ ಪ್ರಾಮುಖ್ಯ ಇರುವುದನ್ನು ಕಾಣಬಹುದು.

ಕಾರಂತರು ತಮ್ಮ ಸೃಜನಶೀಲ ಮತ್ತು ಸೃಜನೇತರ ಬಾಲ ಸಾಹಿತ್ಯ ಸೃಷ್ಟಿಗೆ ಪಾಶ್ಚಾತ್ಯ ದೇಶಗಳಲ್ಲಿ ಈ ಕ್ಷೇತ್ರಗಳಲ್ಲಿ ನಡೆದ ಸೃಷ್ಟಿ ಹಾಗೂ ಚಿಂತನೆಗಳನ್ನು ಮಾದರಿಯಾಗಿ ಇರಿಸಿಕೊಂಡಿದ್ದರು. ಅದೇ ವೇಳೆಗೆ ಮುಕ್ತ ಮನಸ್ಸಿನ ಪ್ರಯೋಗಶೀಲರಾದ ಕಾರಣ, ಅವರಿಗೆ ನಮ್ಮ ಜನಪದ ಕಥೆ ಹಾಗೂ ಅಸಂಬದ್ಧ ಪ್ರಾಸಗೀತೆಗಳೂ ಮಾದರಿಯಾಗಿ ಒದಗಿ ಬಂದಿದೆ. ಅವುಗಳಲ್ಲಿ ಕೂಡಾ ಮಗುವಿನ ಮನಸ್ಸನ್ನು ಅರಳಿಸುವ ಸಂಗತಿಗಳು ಯಾವುವೆಂದು ಕಾರಂತರು ಅನ್ವೇಷಿಸಿ ತಮ್ಮ ರಚನೆಗಳಲ್ಲಿ ಬಳಸಿಕೊಂಡಿದ್ದಾರೆ.

ಕಾರಂತರ 'ಬಾಲ ಪ್ರಪಂಚ'ದ ವಿಷಯ ನಿರೂಪಣೆಯ ಕ್ರಮವು ನೇರವಾಗಿದೆ. ಸ್ಪಷ್ಟವಾಗಿದೆ ಮತ್ತು ಮಾತುಗಳ ಹರಿವು ಯಾವುದೇ ತರದ ಪಾರಿಭಾಷಿಕ ಪದಗಳ ಜಾಲವನ್ನು ತೋರದೆ ಅತ್ಯಂತ ಸರಳವಾಗಿದೆ, ಮೋಹಕವಾಗಿದೆ. ಉದಾಹರಣೆಯಾಗಿ ಹೇಳುವುದಾದರೆ, 'ಒಂದು ರಟ್ಟಿನ ತುಂಡಿನ ಅಗಲವಾದ ಮೈಯನ್ನು ಸಮತೋಲದಲ್ಲಿ ನಿಲ್ಲಿಸಲು ಯತ್ನಿಸುವ.. ಆ ರಟ್ಟನ್ನು ಯಾವುದಾದರೂ ಒಂದು ಮೂಲೆಯಿಂದ ತೂಗುವ ಅದು ಒಂದು ರೇಖೆಯಲ್ಲಿ ನಿಲ್ಲುವುದಕ್ಕಾಗಿ ಅದನ್ನು ತೂಗು ಹಾಕಿದ ಸ್ಥಳದಿಂದ ನೇರವಾಗಿ, ಕಲ್ಲು ಕಟ್ಟಿದ ಹಗ್ಗವನ್ನು ಇಳಿಯಬಿಟ್ಟರೆ ರಟ್ಟನ್ನು ಒಂದು ರೇಖೆಯು ಹಾದು ಹೋಗುವುದು. ಈಗ ಇನ್ನೊಂದು ಮೂಲೆಯಿಂದ ರಟ್ಟನ್ನು ತೂಗುವ ಈಗಲೂ ಕಲ್ಲು ಕಟ್ಟಿದ ಹಗ್ಗವನ್ನು ಇಳಿಯ ಬಿಟ್ಟರೆ ಇನ್ನೊಂದು ರೇಖೆಯು ಸಿಗುವುದು. ಈ ಎರಡನೆಯ ರೇಖೆಯು ಮೊದಲ ರೇಖೆಯನ್ನು ಕತ್ತರಿಸುವಷ್ಟೆ ಇಲ್ಲೇ, ಈ ಕೇಂದ್ರದಲ್ಲಿ ಒಂದು ತೂತನ್ನು ಕೊರೆದು, ಹಗ್ಗವನ್ನು ಹಾಕಿ ತೂಗಿದಾಗ ರಟ್ಟು ಚಪ್ಪಟೆಯಾಗಿರುವಾಗಲೂ ಸಮತೋಲವಾಗಿ ನಿಲ್ಲುವುದು'.

ಈ ನಿರೂಪಣೆಗಳಲ್ಲಿ ಶಬ್ದಗಳ ಆಡಂಬರವಿಲ್ಲ, ಶಬ್ದಗಳ ಜಾಲವಿಲ್ಲ, ಉದ್ದುದ್ದ ಇಲ್ಲದೆ ಕ್ಲಿಷ್ಟ ಪಾರಿಭಾಷಿಕ ಪದಗಳ ಪ್ರಯೋಗವನ್ನು ಕಾಣೆವು. ಹೇಳತಕ್ಕದನ್ನು ಎಳ್ಳಷ್ಟು ಸಂದಿಗ್ಧತೆ, ಅತಿ ವಿವರಣೆಗಳ ಪ್ರಯೋಗವಿಲ್ಲದೆ ನಿರೂಪಿಸಲಾಗಿದೆ.

'ವಿಜ್ಞಾನ ಪ್ರಪಂಚ'ದಲ್ಲಿ ಸಾಮಾನ್ಯ ಜನರಿಗೆ ಅರ್ಥವಾಗುವಂತೆ ವೈಜ್ಞಾನಿಕ ತತ್ವಗಳು, ನಿಯಮಗಳು, ವಾದಗಳನ್ನು ವಿವರಿಸಿದ್ದಾರೆ. ಪ್ರಚಲಿತ ಸಂಶೋಧನೆ, ವಿಜ್ಞಾನ ಸಾಧನೆಗಳನ್ನು ಪರಿಚಯ ಮಾಡಿಕೊಡುವುದು, ಜನರಲ್ಲಿ ವೈಜ್ಞಾನಿಕ ಕುತೂಹಲ, ಆಸಕ್ತಿಗಳನ್ನು ವೈಜ್ಞಾನಿಕ ಮನೋಧರ್ಮವನ್ನು ಬೆಳೆಸುವುದು ಇವರ ಉದ್ದೇಶವಾಗಿದೆ.

ವರದಿ ಮಾಡುವುದರಲ್ಲಿಯೂ ಒಂದು ಕಲೆ ಇದೆ. ಆ ಕಲೆ ಕಾರಂತರಿಗೆ ಒಲಿದಿದೆ. ಆದುದರಿಂದಲೇ ವರ್ಣನೆಗೆ ಪ್ರಾಶಸ್ತ್ಯವಿರುವ ವಿಜ್ಞಾನ ಶಾಖೆಗಳಾದ ಜೀವ ವಿಜ್ಞಾನ. ಭೂ

ವಿಜ್ಞಾನಗಳನ್ನು ಕುರಿತ ಅವರ ಬರಹ ಹೆಚ್ಚು ಶೋಭಿಸುತ್ತದೆ. ಪ್ರಾಣಿ ಮತ್ತು ಸಸ್ಯ ಜೀವನ, ಭೂಗೋಳ, ಇತಿಹಾಸಗಳ ವಿಷಯದಲ್ಲಿ ಓದುಗರ ಕುತೂಹಲ, ಆಸಕ್ತಿಗಳನ್ನು ಕೆರಳಿಸುವುದರಲ್ಲಿ ಅವರು ಯಶಸ್ವಿಯಾಗಿದ್ದಾರೆ. ಕಾರಂತರ ಬರಹಗಳ ಇನ್ನೊಂದು ಮಹತ್ಸಾಧನೆ ಎಂದರೆ, ಪ್ರೌಢ ವಿಜ್ಞಾನ ವಿಷಯಗಳನ್ನು ಕುರಿತು ಕನ್ನಡದಲ್ಲಿ ಬರೆಯುವುದು ಸಾಧ್ಯವಿಲ್ಲವೆಂಬ ಅರ್ಥವಿಲ್ಲದ ಕೂಗನ್ನು ಅಡಗಿಸಲು ಅದು ಸಹಕಾರಿಯಾಗಿದೆ. ವಿಷಯದ ಮೇಲೆ ಪ್ರಭುತ್ವ, ತಿಳಿಸಬೇಕೆಂಬ ಅಭಿಲಾಷೆ, ಈ ಎರಡೂ ಇದ್ದುದೇ ಆದರೆ ಭಾಷೆ ಅಡ್ಡಿ ಮಾಡದೆಂಬುದನ್ನು ಅವರು ತೋರಿಸಿಕೊಟ್ಟಿದ್ದಾರೆ.

ಹೀಗೆ ಮಕ್ಕಳ ಜ್ಞಾನಲೋಕವನ್ನು ವಿಸ್ತಾರಗೊಳಿಸುವ ನಿಟ್ಟಿನಲ್ಲಿ ಕಾರಂತರು ಬಗೆ ಬಗೆಯ ಪ್ರಯೋಗಗಳಲ್ಲಿ ತಲ್ಲೀನರಾದರು. ಬಹಳ ಮುಖ್ಯವಾಗಿ ಕುತೂಹಲಿಗಳಾದ ಮಕ್ಕಳಿಗೆ ಪಠ್ಯಗಳ ಹೊರತಾಗಿ ಜ್ಞಾನ ಸಂಚಯಕ್ಕೆ ಅವಕಾಶ ಒದಗಿಸಿಕೊಟ್ಟು ಮಕ್ಕಳ ಅನುಭವ ಪ್ರಪಂಚವನ್ನು ವಿಸ್ತರಿಸುವ ತುಡಿತ ಕಾರಂತರ ಈ ಬರವಣಿಗೆಯಲ್ಲಿ ಕಾಣುತ್ತದೆ. ಹೀಗಾಗಿ ಗಂಭೀರವಾದ ಕಾದಂಬರಿಗಳನ್ನು ಬರೆದ ಕಾರಂತರೇ ಬಹಳ ನವಿರಾದ ಸರಳವಾದ ಭಾಷೆಯಲ್ಲಿ ಮಕ್ಕಳ ಗೀತೆಗಳನ್ನು, ಮಕ್ಕಳ ಕಥೆಗಳನ್ನು ಬರೆಯುತ್ತಾರೆ. ತಮ್ಮದಲ್ಲದ ಕ್ಷೇತ್ರವಾದ ವಿಜ್ಞಾನ ಕ್ಷೇತ್ರವನ್ನು ಪ್ರವೇಶಿಸಿ ಕಲಿತು ಜ್ಞಾನವನ್ನು ಕರಗತಗೊಳಿಸಿಕೊಂಡು ಮತ್ತು ಇದೇ ಆಡಂಬರವಿಲ್ಲದ ಭಾಷೆಯಲ್ಲಿ ನವಿರಾದ ಅನುಭವ ಉಂಟಾಗುವ ಹಾಗೆ 'ಬಾಲ ಪ್ರಪಂಚ', 'ವಿಜ್ಞಾನ ಪ್ರಪಂಚ', 'ಪ್ರಾಣಿ ಪ್ರಪಂಚ' ಮೊದಲಾದ ಸಂಪುಟಗಳನ್ನು ರಚಿಸಿದ್ದಾರೆ. ಆ ಮೂಲಕ ಕಾರಂತರು ಸಾಹಿತ್ಯ ಕ್ಷೇತ್ರದಲ್ಲಿ ಒಬ್ಬ ವಿಶಿಷ್ಟ ಬರಹಗಾರರಾಗಿ ಉಳಿಯುತ್ತಾರೆ.

೩.೫.೪ ವಯಸ್ಕರ ಶಿಕ್ಷಣ ಮತ್ತು ಕಾರಂತರು

ಬಹುಮುಖಿ ವ್ಯಕ್ತಿತ್ವದ ಕಾರಂತರು ಶಿಕ್ಷಣದ ಕುರಿತ ಹಾಗೆ ಮಾಡಿದ ಬಹುತೇಕ ಪ್ರಯೋಗ ಹಾಗೂ ನಡೆಸಿದ ಚಿಂತನೆಗಳು ಮಕ್ಕಳ ಶಿಕ್ಷಣಕ್ಕೆ ಸಂಬಂಧಿಸಿದ್ದೇ ಆದರೂ ಕಾರಂತರು ವಯಸ್ಕರ ಶಿಕ್ಷಣದಲ್ಲೂ ಕೆಲವು ಬಗೆಯ ಪ್ರಯೋಗಗಳನ್ನು ಮಾಡಿ, ಅದರಲ್ಲಿ ತೊಡಗಿಸಿಕೊಂಡವರು. ಮಕ್ಕಳ ಶಿಕ್ಷಣಕ್ಕೆ ಸಂಬಂಧಿಸಿದಂತೆ ನಡೆಸಿದ ಪ್ರಯೋಗಗಳಲ್ಲಿ ತಾನು ಅನುಭವಿಸಿದ ಮತ್ತು ಕಂಡ ಸಂಗತಿಗಳಿಂದ ಪ್ರೇರೇಪಿತವಾದುದಾಗಿದ್ದರೆ, ವಯಸ್ಕರ ಶಿಕ್ಷಣದ ಪ್ರಯೋಗಗಳು ಈ ಬಗೆಯದ್ದಲ್ಲ.

ಎಳೆಯರು ಹೇಗೆ ವಯಸ್ಕರಲ್ಲವೋ, ಹಾಗೆಯೇ ವಯಸ್ಕರೂ ಎಳೆಯರಲ್ಲ. ಅವರದು ಕೇವಲ ವಯಸ್ಸಿನ ಮೆಟ್ಟಲುಗಳಲ್ಲ. ಮನಸ್ಸಿನ ಮೆಟ್ಟಲುಗಳು. ಹೀಗಾಗಿ ಅವರ ಅಭಿರುಚಿ–ಅನಭಿರುಚಿಗಳನ್ನು ಮೊದಲೇ ಕಂಡುಕೊಳ್ಳಬೇಕು ಎಂಬುದು ಕಾರಂತರ ನಿಲುವಾಗಿತ್ತು. ಪಠ್ಯವಾಗಿ

ಬರೆದ ಪುಸ್ತಕಗಳು ನಿಜವಾಗಿಯೂ ಉದ್ದೇಶಿತ ಸಮುದಾಯವನ್ನು ಮುಟ್ಟುವಲ್ಲಿ ಯಶಸ್ವಿಯಾಗಿದೆಯೆ? ಅವುಗಳು ನಿರ್ದಿಷ್ಟವಾಗಿದೆಯೋ? ಎಂಬುದನ್ನು ಯೋಚಿಸುವ ಹಾಗೆ ಮಾಡುವಲ್ಲಿ ಕಾರಂತರಿಗೆ ಅವಕಾಶವನ್ನು ಒದಗಿಸಿದ್ದು ವಯಸ್ಕರ ವಿದ್ಯಾಭ್ಯಾಸದ ತರಬೇತಿ.

೧೯೫೩ರಲ್ಲಿ ಯುನೆಸ್ಕೊ ಸಂಸ್ಥೆ ವಯಸ್ಕರ ವಿದ್ಯಾಭ್ಯಾಸದ ಸಮಸ್ಯೆಯನ್ನು ಕಂಡು ಹಿಡಿಯುವುದಕ್ಕಾಗಿ 'Fundamental group Training Scheme' ಎಂಬ ಒಂದು ಯೋಜನೆಯನ್ನು ರೂಪಿಸಿದ್ದು, ಅದನ್ನು ಮೈಸೂರು ಬಳಿಯ ಯಳವಾಲ ಎಂಬಲ್ಲಿ ನಡೆಸಿದರು. ವಯಸ್ಕರಿಗೆ ಶಿಕ್ಷಣವನ್ನು ಫಿಲ್ಮ್, ಪುಸ್ತಕ, ರೇಡಿಯೋ ಪ್ರಸಾರ ಮೊದಲಾದ ಮಾಧ್ಯಮಗಳ ಮೂಲಕ ಕೊಡುವ ಬಗ್ಗೆ ಚರ್ಚಿಸಲಾಗಿತ್ತು. ವಯಸ್ಕರಿಗೆ ಶಿಕ್ಷಣ ಕಲಿಸುವುದು ಹೇಗೆ ಎಂಬ ಪ್ರಶ್ನೆ ಸಹಜವಾಗಿಯೇ ಬರುತ್ತದೆ. ಅದು ಉಪದೇಶಾತ್ಮಕವಾಗಿದ್ದರೆ ಇಷ್ಟಪಡಲಾರರು. ಅದಕ್ಕಾಗಿ ಸಂಭಾಷಣೆಯನ್ನು ನಡೆಸುವ ಮೂಲಕ ಪಾಠದಲ್ಲಿ ಬರುವ ಶಬ್ಧಗಳನ್ನು ಅವರ ಕಿವಿಗೆ ಬೀಳುವಂತೆ ಮಾಡಿ, ಆ ಬಳಿಕ ಶಬ್ಧಗಳನ್ನು, ಅದಕ್ಕೆ ಸಂಬಂಧಿಸಿದ ಚಿತ್ರಗಳನ್ನು, ಅವರ ಕಣ್ಣ ಮುಂದೆ ತೋರಿಸಬೇಕು. ಆಗ ಅವರು ಕಣ್ಮುಂದಿನ ಚಿತ್ರದಿಂದ 'ಶಬ್ಧ' ಯಾವುದು ಎಂದು ತಿಳಿಯುವಂತಾಗಬೇಕು ಎಂಬ ಹೊಸ ಪ್ರಯೋಗವನ್ನು ಕಾರಂತರು ಮಾಡಿದರು. ಹೀಗೆ ಪ್ರಯೋಗಕ್ಕಾಗಿ ಗಂಡ-ಹೆಂಡಿರ ನಿತ್ಯದ ಜಗಳಕ್ಕೆ ಸಂಬಂಧಿಸಿ ಒಂದು ಕಥೆಯನ್ನು ಬರೆದರು. ಆದರೆ ಅದು ಪಾಠ ಕಲಿಯುವವರ ನಿತ್ಯ ಬದುಕಿಗೆ ಸಂಬಂಧಿಸಿದ ವಿಷಯವಾದದ್ದರಿಂದ, ಸಾಮಾಜಿಕ ಆವರಣದ ಕಾರಣದಿಂದ ಅದು ವಿಫಲವಾಯಿತು. ಮುಂದೆ 'ಜೋಗಿ ಕಂಡ ಊರು' ಮತ್ತು 'ಜೋಗಿ ಒಲಿದ ಊರು' ಎಂಬ ಎರಡು ಪುಸ್ತಕಗಳನ್ನು ಬರೆಯುತ್ತಾರೆ. ಊರಿನ ಸಮಸ್ಯೆಯನ್ನೇ ಕುರಿತಾದ ಕತೆ ಇದು. ಆ ಮೂಲಕ ಸಾಮಾಜಿಕ ಜಾಗೃತಿಯುಂಟುಮಾಡುವ ಉದ್ದೇಶವೂ ಒಳಗೆ ಇದೆ. ಇದನ್ನು ಸಂಭಾಷಣೆಯ ಮಾದರಿಯಲ್ಲಿ ರಚಿಸಿದರು. ಸಂಭಾಷಣೆಯ ಸಂದರ್ಭದಲ್ಲಿ ಪಾಠದ ಪದಗಳು ಮತ್ತೆ ಮತ್ತೆ ವಿಳಂಬಿತವಾಗದೆ ಪುನರಾವರ್ತನೆಯಾಗುವಂತೆ ರಚಿಸಿದ್ದರು. ದೊಡ್ಡ ಶಬ್ಧಗಳಿಲ್ಲದಂತೆ, ಊರಿನಲ್ಲಿ ನಿತ್ಯ ರೂಢಿಯಲ್ಲಿರುವ ಪದಗಳೇ ಬರುವಂತೆ, ಪಾಠಗಳನ್ನು ಸಿದ್ಧಪಡಿಸಲಾಗಿತ್ತು.

ಪಠ್ಯ ಪುಸ್ತಕಗಳಲ್ಲದೆ ವಯಸ್ಕರ ಸಾಮಾನ್ಯ ಓದಿಗೆ ಅನುಕೂಲವಾದ ಮೂರು ಬೇರೆ ಬೇರೆ ಕಿರುಕತೆಗಳನ್ನು ಕಾರಂತರು ಬರೆದರು. 'ಅಳಿಲ ಭಕ್ತಿ', 'ಹುಟ್ಟು ಸಾವು ಒಟ್ಟು-ಒಟ್ಟು', 'ಇತರರೂ ಸರಿಯಿರಬಹುದು' ಎಂಬ ಮೂರು ಪುಸ್ತಕಗಳೂ ಅಕ್ಷರ ಕಲಿಸಲು ಉಪಯೋಗವಾಗುವಂತಾಯಿತು. ವಯಸ್ಕರ ಕಲಿಕೆಯ ಪುಸ್ತಕ ಬರವಣಿಗೆಯ ಜೊತೆಗೆ ಚಿತ್ರಗಳನ್ನು ಸಾಕಷ್ಟು ಪ್ರಮಾಣದಲ್ಲಿ ಒಳಗೊಂಡಿತ್ತು. ಚಿತ್ರ ಮತ್ತು ಬರವಣಿಗೆ ಕೂಡಿದಾಗ ಮಾತ್ರ ಸ್ಪಷ್ಟ ಪರಿಣಾಮವನ್ನು ಬೀರುತ್ತದೆ ಎಂದು ಕಾರಂತರು ಹೇಳುತ್ತಾರೆ. ಈ ಪಠ್ಯದಲ್ಲಿ ಪ್ರಯೋಗವಾದ ಸಾಲುಗಳು ವಿಶೇಷವಾಗಿ ಗಮನ

ಸೆಳೆಯುವಂತಿದೆ. "ನೀರು ಇರದ ಕೆರೆ, ಬೆಳೆ ಇರದ ಹೊಲ, ಹಣ ಇರದ ಜನ, ಅಗದು ಅಗೆದು ದಣಿದರು, ದಣಿದು ದಣಿದು ಅಗೆದರು, ಬುದ್ಧಿ ತಿಳಿದು ದುಡಿದರು, ತಿಳಿವು ಬಂದು ದುಡಿದರು, ವರ್ಷ ವರ್ಷ ಹರ್ಷದಿಂದ ದುಡಿದರು" ಮೊದಲಾದ ಸಾಲುಗಳು ವಯಸ್ಕ ಅನಕ್ಷರಸ್ಥ ಓದುಗರನ್ನು ಸೆಳೆಯುವಂತಿದೆ. ಇದರ ಬಹಳ ಮುಖ್ಯ ಲಕ್ಷಣವೆಂದರೆ ಒತ್ತಕ್ಷರಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಬಳಸದೆ ಪಾಠಗಳನ್ನು ಬರೆದಿರುವುದು. ಮತ್ತು ಎರಡೂ ಪುಸ್ತಕಗಳಲ್ಲಿ ೮-೧೦ ಸಜಾತೀಯ ಸಂಯುಕ್ತಾಕ್ಷರಗಳನ್ನು ಬಳಸಲಾಗಿದ್ದು, ಅವುಗಳು ಮತ್ತೆ ಮತ್ತೆ ಬೇರೆ ಬೇರೆ ಸಂದರ್ಭಗಳಲ್ಲಿ ಅರ್ಥಪೂರ್ಣವಾಗಿ ಪುನರಾವರ್ತಿತವಾಗುವಂತೆ ಬಳಸಲಾಗಿದೆ. ಎರಡನೆಯ ಪುಸ್ತಕದಲ್ಲಷ್ಟೇ ವಿಜಾತಿಯ ಸಂಯುಕ್ತಾಕ್ಷರಗಳನ್ನು ಬಹಳ ಕಡಿಮೆ ಪ್ರಮಾಣದಲ್ಲಿ ಬಳಸಲಾಗಿದೆ.

ಮುಂದೆ 'ಅಳಿಲ ಭಕ್ತಿ'ಯಲ್ಲಿ ವಾಕ್ಯಗಳ ಸಂಖ್ಯೆ ಸಹಜವಾಗಿಯೇ ಹೆಚ್ಚಿದೆ. ವಯಸ್ಕರ ಓದುವ ಶಕ್ತಿ ಸ್ವಲ್ಪ ಹೆಚ್ಚಾಗಿರುವುದರಿಂದ ಸರಳ ವಾಕ್ಯಗಳ ಬಳಕೆಯಾಗಿದೆ. ಇಲ್ಲಿ ವಯಸ್ಕರು ಓದಿ ಆನಂದಿಸಬಹುದಾದ ನಿರೂಪಣೆ ಇದೆ. ಇಲ್ಲೂ ವಿಜಾತಿಯ ಸಂಯುಕ್ತಾಕ್ಷರಗಳನ್ನು ಬಹಳ ವಿರಳವಾಗಿ ಬಳಸಲಾಗಿದೆ. ಪದಗಳ ಗುರುತಿಸುವಿಕೆ, ಓದು-ಬರಹದ ದೃಷ್ಟಿಯಿಂದ ಕಾರಂತರ ಈ ಪುಸ್ತಕ ಬಹಳ ಉಪಯುಕ್ತವಾದದ್ದು.

ಉದ್ದೇಶಿತ ಸಮುದಾಯವೊಂದನ್ನು ಪುಸ್ತಕ ತಲುಪಬೇಕಾದರೆ ಅದು ಅಂತಹ ಹಿನ್ನೆಲೆಯ ವ್ಯಕ್ತಿಗಳ ನಡುವೆಯೇ ಪರೀಕ್ಷೆಯಾಗಬೇಕು. ಈ ಹಿನ್ನೆಲೆಯಿಂದ ಕಾರಂತರಿಗೆ ಮುಂದೆ ಮಕ್ಕಳ ಶಿಕ್ಷಣಕ್ಕೆ ಪುಸ್ತಕ ಬರೆಯುವಾಗಲೂ ಈ ಅನುಭವ ಉಪಯುಕ್ತವಾಯಿತು ಎಂದು ಹೇಳುತ್ತಾರೆ.

ಹೀಗೆ ಕಾರಂತರು ವಯಸ್ಕರ ಶಿಕ್ಷಣಕ್ಕೆ ಸಂಬಂಧಿಸಿದಂತೆ ಪ್ರಯೋಗಗಳನ್ನು ನಡೆಸಿದರು ಮತ್ತು ಹಾಗೆ ಪ್ರಯೋಗ ನಡೆಸುವವರ ಜೊತೆ ಸಹಭಾಗಿಗಳಾದರು. ಕಾರಂತರ ಈ ಬಗೆಯ ಪ್ರಯೋಗಶೀಲತೆ ಅವರ ವ್ಯಕ್ತಿತ್ವದ ಇನ್ನೊಂದು ಮುಖವನ್ನು ತೋರಿಸಿಕೊಡುತ್ತದೆ.

ಸಂದರ್ಭಸೂಚಿ

೧. ಮಾಲಿನಿ ಮಲ್ಯ (ಸಂ): 'ಶಿವರಾಮ ಕಾರಂತರ ಲೇಖನಗಳು, ಸಂಪುಟ –೨', ಪ್ರಸಾರಂಗ, ಮಂಗಳೂರು ವಿ.ವಿ ೧೯೯೪, ಪುಟ ೬೭

೨. ಮಾಲಿನಿ ಮಲ್ಯ (ಸಂ): 'ಶಿವರಾಮ ಕಾರಂತರ ಲೇಖನಗಳು, ಸಂಪುಟ –೨', ಪ್ರಸಾರಂಗ, ಮಂಗಳೂರು ವಿ.ವಿ ೧೯೯೪, ಪುಟ ೬೮

೩. ಮಾಲಿನಿ ಮಲ್ಯ (ಸಂ): 'ಶಿವರಾಮ ಕಾರಂತರ ಲೇಖನಗಳು, ಸಂಪುಟ –೨', ಪ್ರಸಾರಂಗ, ಮಂಗಳೂರು ವಿ.ವಿ ೧೯೯೪, ಪುಟ ೭೨

೪. ಮಾಲಿನಿ ಮಲ್ಯ (ಸಂ): 'ಶಿವರಾಮ ಕಾರಂತರ ಲೇಖನಗಳು, ಸಂಪುಟ –೨', ಪ್ರಸಾರಂಗ, ಮಂಗಳೂರು ವಿ.ವಿ ೧೯೯೪, ಪುಟ ೭೨

೫. ಶಿವರಾಮ ಕಾರಂತ: 'ಸ್ಮೃತಿ ಪಟಲದಿಂದ ಸಂ –೧', ರಾಜಲಕ್ಷ್ಮಿ ಪ್ರಕಾಶನ, ಬೆಂಗಳೂರು ನಗರ ೧೯೭೭, ಪುಟ ೩೭೯

೬. ಡಾ. ಸಬಿಹಾ ಭೂಮಿಗೌಡ (ಸಂ):
ಡಾ. ಬಿ.ವಿ. ಮಹಿದಾಸ (ಲೇ): 'ಕಾರಂತರು ಮತ್ತು ಶಿಕ್ಷಣ, ಕಾರಂತರ ಶಿಕ್ಷಣದ ಪರಿಕಲ್ಪನೆ', ಡಾ. ಶಿವರಾಮ ಕಾರಂತ ಪೀಠ, ಮಂಗಳೂರು, ವಿ.ವಿ. ೨೦೦೯, ಪುಟ ೫೨

೭. ಡಾ. ಶಿವರಾಮ ಕಾರಂತ: 'ಸ್ಮೃತಿ ಪಟಲದಿಂದ ಸಂ –೧', ರಾಜಲಕ್ಷ್ಮಿ ಪ್ರಕಾಶನ, ಬೆಂಗಳೂರು ನಗರ ೧೯೭೭, ಪುಟ ೩೫೪

೮. ಡಾ. ಶಿವರಾಮ ಕಾರಂತ: 'ಸ್ಮೃತಿ ಪಟಲದಿಂದ ಸಂ –೧', ರಾಜಲಕ್ಷ್ಮಿ ಪ್ರಕಾಶನ, ಬೆಂಗಳೂರು ನಗರ ೧೯೭೭, ಪುಟ ೩೫೫

೯. ಡಾ. ಶಿವರಾಮ ಕಾರಂತ: 'ಸ್ಮೃತಿ ಪಟಲದಿಂದ ಸಂ –೧', ರಾಜಲಕ್ಷ್ಮಿ ಪ್ರಕಾಶನ, ಬೆಂಗಳೂರು ನಗರ ೧೯೭೭, ಪುಟ ೩೫೭

೧೦. ಮಾಲಿನಿ ಮಲ್ಯ (ಸಂ): 'ಶಿವರಾಮ ಕಾರಂತರ ಲೇಖನಗಳು, ಸಂಪುಟ –೨', ಪ್ರಸಾರಂಗ, ಮಂಗಳೂರು ವಿ.ವಿ ೧೯೯೪, ಪುಟ ೮೧

೧೧. ಮಾಲಿನಿ ಮಲ್ಯ (ಸಂ): 'ಶಿವರಾಮ ಕಾರಂತರ ಲೇಖನಗಳು, ಸಂಪುಟ –೨', ಪ್ರಸಾರಂಗ, ಮಂಗಳೂರು ವಿ.ವಿ ೧೯೯೪, ಪುಟ ೮೯

೧೨. ಮಾಲಿನಿ ಮಲ್ಯ (ಸಂ): 'ಶಿವರಾಮ ಕಾರಂತರ ಲೇಖನಗಳು, ಸಂಪುಟ –೨', ಪ್ರಸಾರಂಗ, ಮಂಗಳೂರು ವಿ.ವಿ ೧೯೯೪, ಪುಟ ೧೨೭

೧೩. ಮಾಲಿನಿ ಮಲ್ಯ (ಸಂ): 'ಶಿವರಾಮ ಕಾರಂತರ ಲೇಖನಗಳು, ಸಂಪುಟ –೨', ಪ್ರಸಾರಂಗ, ಮಂಗಳೂರು ವಿ.ವಿ ೧೯೯೪, ಪುಟ ೨೨೦

೧೪. ಮಾಲಿನಿ ಮಲ್ಯ (ಸಂ): 'ಶಿವರಾಮ ಕಾರಂತರ ಲೇಖನಗಳು, ಸಂಪುಟ –೨', ಪ್ರಸಾರಂಗ, ಮಂಗಳೂರು ವಿ.ವಿ ೧೯೯೪, ಪುಟ ೨೨೧

೧೫. ಮಾಲಿನಿ ಮಲ್ಯ (ಸಂ): 'ಶಿವರಾಮ ಕಾರಂತರ ಲೇಖನಗಳು, ಸಂಪುಟ –೨', ಪ್ರಸಾರಂಗ, ಮಂಗಳೂರು ವಿ.ವಿ ೧೯೯೪, ಪುಟ ೧೧೧

೧೬. ಮಾಲಿನಿ ಮಲ್ಯ (ಸಂ): 'ಶಿವರಾಮ ಕಾರಂತರ ಲೇಖನಗಳು, ಸಂಪುಟ –೨', ಪ್ರಸಾರಂಗ, ಮಂಗಳೂರು ವಿ.ವಿ ೧೯೯೪, ಪುಟ ೨೧೨

೧೭. ಮಾಲಿನಿ ಮಲ್ಯ (ಸಂ): 'ಶಿವರಾಮ ಕಾರಂತರ ಲೇಖನಗಳು, ಸಂಪುಟ –೨', ಪ್ರಸಾರಂಗ, ಮಂಗಳೂರು ವಿ.ವಿ ೧೯೯೪, ಪುಟ ೨೨೫

೧೮. ಸಬಿಹಾ ಭೂಮಿಗೌಡ (ಸಂ): 'ದಕ್ಷಿಣ ಕನ್ನಡ ಜಿಲ್ಲೆಯ ಮಕ್ಕಳ ಸಾಹಿತ್ಯ'
ಡಾ. ಬಿ.ವಿ. ಮಹಿದಾಸ (ಲೇ): ಶಿವರಾಮ ಕಾರಂತ ಅಧ್ಯಯನ ಕೇಂದ್ರ ಮಂಗಳ ಗಂಗೋತ್ರಿ ೨೦೦೯, ಪುಟ ೫೫

೧೯. ಡಾ. ಮಹಾಬಲೇಶ್ವರ ರಾವ್: 'ಶಿಕ್ಷಣ – ಕಾರಂತ ದೃಷ್ಟಿ ಸೃಷ್ಟಿ', ಕರ್ನಾಟಕ ಸಂಘ, ಪುತ್ತೂರು ೧೯೯೨, ಪುಟ ೧೨

೨೦. ಮಾಲಿನಿ ಮಲ್ಯ (ಸಂ): 'ಶಿವರಾಮ ಕಾರಂತರ ಲೇಖನಗಳು, ಸಂಪುಟ –೨', ಪ್ರಸಾರಂಗ, ಮಂಗಳೂರು ವಿ.ವಿ ೧೯೯೪, ಪುಟ·೧೬೭

೨೧. ಮಾಲಿನಿ ಮಲ್ಯ (ಸಂ): 'ಶಿವರಾಮ ಕಾರಂತರ ಲೇಖನಗಳು, ಸಂಪುಟ –೨', ಪ್ರಸಾರಂಗ, ಮಂಗಳೂರು ವಿ.ವಿ ೧೯೯೪, ಪುಟ ೨೧೮

೨೨. ಬಿ. ಮಾಲಿನಿ ಮಲ್ಯ (ಸಂ): 'ಶಿವರಾಮ ಕಾರಂತರ ಲೇಖನಗಳು ಸಂ–೨', ಪ್ರಸಾರಾಂಗ ಮಂಗಳೂರು ವಿ.ವಿ. ೧೯೯೪ ಪುಟ ೧೦೯.

೨೩. ಡಾ. ಶಿವರಾಮ ಕಾರಂತ: 'ಸ್ಮೃತಿ ಪಟಲದಿಂದ' ರಾಜಲಕ್ಷ್ಮಿ ಪ್ರಕಾಶನ, ಬೆಂಗಳೂರು ೧೯೯೭, ಪುಟ ೪೦೧.

೨೪. ಡಾ. ಶಿವರಾಮ ಕಾರಂತ: 'ಓದುವ ಆಟ', ಕರ್ನಾಟಕ ಬುಕ್ ಏಜೆನ್ಸಿ ಬೆಂಗಳೂರು, ೧೯೯೧ ಪುಟ. ೪

೨೫. ಡಾ. ಮಹಾಬಲೇಶ್ವರ ರಾವ್: 'ಶಿಕ್ಷಣ – ಕಾರಂತ ದೃಷ್ಟಿ ಸೃಷ್ಟಿ', ಕರ್ನಾಟಕ ಸಂಘ, ಪುತ್ತೂರು ೧೯೯೨, ಪುಟ ೩೩

೨೬. ಶೇಖರ ಇಡ್ಯಾ (ಲೇ): 'ಶಿಕ್ಷಕ', ಕಾರಂತ ಪ್ರಪಂಚ, ಗೀತಾ ಬುಕ್ ಹೌಸ್, ಮೈಸೂರು ೧೯೬೯, ಪುಟ ೩೧೬

೨೭. ಡಾ. ಶಿವರಾಮ ಕಾರಂತ: 'ಓದುವ ಆಟ', ಕರ್ನಾಟಕ ಬುಕ್ ಏಜೆನ್ಸಿ, ಬೆಂಗಳೂರು ೧೯೯೧, ಪುಟ ೧೧

೨೮. ಡಾ. ಶಿವರಾಮ ಕಾರಂತ: 'ಸ್ಮೃತಿ ಪಟಲದಿಂದ ಸಂ –೧', ರಾಜಲಕ್ಷ್ಮಿ ಪ್ರಕಾಶನ, ಬೆಂಗಳೂರು ನಗರ ೧೯೭೭, ಪುಟ ೪೦೦

೨೯. ಡಾ. ಶಿವರಾಮ ಕಾರಂತ: 'ಸ್ಮೃತಿ ಪಟಲದಿಂದ ಸಂ –೧', ರಾಜಲಕ್ಷ್ಮಿ ಪ್ರಕಾಶನ, ಬೆಂಗಳೂರು ನಗರ ೧೯೭೭, ಪುಟ ೪೦೬

೩೦. ಶಿವರಾಮ ಕಾರಂತ: 'ಢಂ ಢಂ ಡೋಲು', ಎಸ್.ಬಿ.ಎಸ್ ಪಬ್ಲಿಷರ್ಸ್ ಆ್ಯಂಡ್ ಡಿಸ್ಟ್ರಿಬ್ಯೂಟರ್ಸ್ ಬೆಂಗಳೂರು ೧೯೯೧ ಪುಟ ೩

೩೧. ಶಿವರಾಮ ಕಾರಂತ: 'ಚಿತ್ರಮಯ ದಕ್ಷಿಣ ಕನ್ನಡ' (ಬಾಲಕರ ಭೂಗೋಲ), ಬಾಸೆಲ್ ಮಿಶನ್ ಬುಕ್ ಆ್ಯಂಡ್ ಟ್ರೆಕ್ಟ್ ಡಿಪೊಸಿಟರಿ, ಮಂಗಳೂರು ೧೯೩೪, ಪುಟ ೧

೩೨. ಎಂ. ವಿ. ಇನಾಂದಾರ್: 'ಶಿವರಾಮ ಕಾರಂತ' ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿ.ವಿ.

೩೩. ಬೊಳುವಾರು ಮಹಮ್ಮದ್ ಕುಂಞ: 'ತಟ್ಟು ಚಪ್ಪಾಳೆ ಪುಟ್ಟ ಮಗು' ದಿವ್ಯ ಪ್ರಕಾಶನ ಬೆಂಗಳೂರು ೧೯೯೧, ಪುಟ ೨

೪. ಕಾರಂತರ ಶೈಕ್ಷಣಿಕ ಪ್ರಯೋಗದ ಇತ್ಯಾತ್ಮಕ ಮತ್ತು ನೇತ್ಯಾತ್ಮಕ ಅಂಶಗಳು

೪.೧ ಪ್ರವೇಶ:

೪.೨ ಇತ್ಯಾತ್ಮಕ ಅಂಶಗಳು

೪.೩ ನೇತ್ಯಾತ್ಮಕ ಅಂಶಗಳು

೪. ಕಾರಂತರ ಶೈಕ್ಷಣಿಕ ಪ್ರಯೋಗದ ಇತ್ಯಾತ್ಮಕ ಮತ್ತು ನೇತ್ಯಾತ್ಮಕ ಅಂಶಗಳು

೪.೧ ಪ್ರವೇಶ:

ಕಾರಂತರು ಶಿಕ್ಷಣ ಕ್ಷೇತ್ರದಲ್ಲಿ ಅಧಮ್ಯ ಉತ್ಸಾಹವಿದ್ದ ಒಬ್ಬ ಕ್ರಿಯಾತ್ಮಕ ಪ್ರಯೋಗಶಾಲಿ ವ್ಯಕ್ತಿ. ಅವರ ಪ್ರಯೋಗಗಳ ಹಿಂದೆ ಒಂದು ಬಗೆಯ ಅಪಾರ ಶ್ರಮವಿದೆ. ಬುದ್ಧಿ ಕುಶಲತೆ ಇದೆ. ಭಾವ ಸಂಯೋಜನೆಯಿಂದ ಕೂಡಿದೆ. ಹೀಗಾಗಿ ಮತ್ತೆ ಮತ್ತೆ ಮಗುವಿನ ಅನುಭವ ಲೋಕದ ಕುರಿತು, ಮಗುವಿನ ಉತ್ಪಾದಕ ಶಕ್ತಿಯನ್ನು ಕುರಿತಂತೆ ಮಾತನಾಡುತ್ತಾರೆ. ಮಾತ್ರವಲ್ಲ ಇಂತಹ ಅನುಭವ ಲೋಕವು ವಿಸ್ತಾರಗೊಳ್ಳುವ ಬಗೆಯಲ್ಲಿ ಉತ್ಪಾದಕ ಶಕ್ತಿಯು ಅನಾವರಣಗೊಳ್ಳುವ ಬಗೆಯಲ್ಲಿ, ಅವರ ಪ್ರಯೋಗಗಳು ನಡೆದಿದೆ. ಈ ಪ್ರಯೋಗಗಳ ಹಿಂದೆ ಒಂದು ಸುಧಾರಣೆಯ ತುಡಿತವಿತ್ತು. ಹೊಸ ಬಗೆಯ ಮಾರ್ಗದ ಅನ್ವೇಷಣೆಯ ಸಾಹಸಶೀಲತೆ ಇತ್ತು. ಹೀಗಿದ್ದರಿಂದಲೇ ಔಪಚಾರಿಕ ಶಿಕ್ಷಣ ವ್ಯವಸ್ಥೆಯೊಳಗೆ ಕೇವಲ ಎಸ್.ಎಸ್.ಎಲ್.ಸಿ. ಪೂರೈಸಿದ ಶಿವರಾಮ ಕಾರಂತರು ಶಿಕ್ಷಣ ರಂಗದಲ್ಲಿ ನಡೆಸಿದ ಪ್ರಯೋಗಗಳಾಗಲಿ, ಮಂಡಿಸಿದ ವಿಚಾರಗಳಾಗಲಿ ಸಾಮಾನ್ಯ ಸಂಗತಿಯೇನಲ್ಲ.

ಕೇವಲ ಶಿಕ್ಷಣವೇ ಎಂದಲ್ಲ, ತನ್ನ ಸುತ್ತಲಿನ ಲೋಕದ ಎಲ್ಲಾ ಸಂಗತಿಗಳೂ ಕೂಡಾ ಅವರ ಕುತೂಹಲವನ್ನು ಕೆರಳಿಸುತ್ತಿತ್ತು. ಹೀಗಾಗಿ ಚಲನಚಿತ್ರ ನಿರ್ಮಿಸಿದರು, ಯಕ್ಷಗಾನಕ್ಕೆ ಹೊಸ ರೂಪ ಕೊಟ್ಟರು, ನಾಟಕ ಅಭಿನಯಿಸಿದರು, ಕಾದಂಬರಿ ಬರೆದರು, ಬಾಲವನ ನಡೆಸಿದರು, ಪಠ್ಯ ಪುಸ್ತಕ ಬರೆದರು, ಮುದ್ರಣಾಲಯ ತೆರೆದರು, ವಿಶ್ವಕೋಶ ಶಬ್ಧಕೋಶಗಳನ್ನು ನಿರ್ಮಿಸಿದರು. ಹೀಗೆ ಇಂತಹ ಬಹುಮುಖ ವ್ಯಕ್ತಿತ್ವದ ಕಾರಂತರು ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಹೊಸ ಹೊಸ ಕಲ್ಪನೆಯೊಂದಿಗೆ, ಚಿಂತನೆಯೊಂದಿಗೆ ಪ್ರಯೋಗಕ್ಕೆ ಸಜ್ಜಾಗಿದ್ದರು.

'ಬಾಲಪ್ರಪಂಚ' ಎಂಬ ಕಿರಿಯರ ವಿಶ್ವಕೋಶವನ್ನು ರಚಿಸಲು ತೊಡಗಿ ಮೂರು ಸಂಪುಟಗಳಲ್ಲಿ ಪ್ರಕಟಿಸಿದರು. ದೇಶದಲ್ಲೇ, ದೇಶಭಾಷೆಯೊಂದು ಪ್ರಕಟಿಸಿದ ವಿಶ್ವಕೋಶಗಳಲ್ಲೇ ದೊಡ್ಡ ಸಾಧನೆ ಇದೆಂದು ಗುರುತಿಸಲಾಗಿದೆ. ಮುಂದಿನ ಎಲ್ಲ ಬಗೆಯ ಪ್ರಯೋಗಗಳಲ್ಲೂ ವಿಶಿಷ್ಟತೆ ಮತ್ತು ಸಕಾರಾತ್ಮಕ ಸಂಗತಿಗಳು ಒಳಗೊಂಡಿರುವುದನ್ನು ಕಾಣುತ್ತೇವೆ. ಕಲಿಕೆಯ ಪಠ್ಯಗಳು ಮತ್ತು ಪಾಠಗಳು ಮಕ್ಕಳಲ್ಲಿ ಆಕರ್ಷಣೆ ಹುಟ್ಟುವಂತೆ ಮಾಡುವುದಕ್ಕಾಗಿ ಪ್ರಯತ್ನ ಶೀಲರಾಗಿದ್ದರು.

೪.೨ ಇತ್ಯಾತ್ಮಕ ಅಂಶಗಳು

ಕಾರಂತರ ಶೈಕ್ಷಣಿಕ ಪ್ರಯೋಗದ ಬಹಳ ಮುಖ್ಯವಾದ ಸಂಗತಿ ಎಂದರೆ, ಮಕ್ಕಳಿಗೆ ಕಲಿಕೆ ಎನ್ನುವುದು ಯಾವುದೇ ಸಂದರ್ಭದಲ್ಲೂ ಹೊರೆಯಾಗದಂತೆ, ಬದಲಾಯಿಸಿದ್ದು. ಯಾವ ವಯಸ್ಸಿನ ಮಕ್ಕಳಿಗೆ ಯಾವ ಬಗೆಯ ಪಠ್ಯಗಳು ಇರಬೇಕು ಎಂಬುದನ್ನು ನಿರಂತರ ಪರಿಶ್ರಮದಿಂದ ಶೋಧಿಸಿಕೊಂಡಿದ್ದರು. ಚಿತ್ರಗಳನ್ನು ನೋಡುತ್ತಲೇ ಅದಕ್ಕೆ ಪೂರಕವಾಗಿ ಬರುವ ಸರಳ ಪದಗಳಿಂದ ಶಿಕ್ಷಣ ಆರಂಭವಾಗುವುದರಿಂದ ಮಗುವು ತಾನು ಕಲಿತದ್ದನ್ನು ಕಂಠಸ್ಥ ಮಾಡಿಕೊಂಡು ಸರಳಾನುವಾದವನ್ನು ಹೇಳುವುದಕ್ಕಾಗಿ ತನ್ನ ಶ್ರಮವನ್ನು ವ್ಯಯಿಸಬೇಕಾಗಿರಲಿಲ್ಲ. ಕಾರಂತರ ಪ್ರಯೋಗದಲ್ಲಿ ಕಲಿಕೆ ಎನ್ನುವುದು ಒಂದು ಜೀವಂತ ಸಹಭಾಗಿತ್ವವಾಗಿದ್ದುದರಿಂದ ಮಗುವಿಗೆ ಆಕರ್ಷಕ ಸಂಗತಿಯಾಗಿತ್ತು.

ಭಾಷೆಯನ್ನು ಕಲಿಸುವ ಸಂದರ್ಭದಲ್ಲೂ ಕಾರಂತರು ವಿಶೇಷ ಪ್ರಯೋಗವನ್ನು ಮಾಡುತ್ತಿದ್ದರು. ಭಾಷೆಯನ್ನು ಕೇಳುವ ಮೂಲಕ, ಕಲಿಯುವ ರೀತಿಯನ್ನು ಹೇಳುತ್ತಾರೆ. ಮಗುವಿನ ಗ್ರಹಣ ಶಕ್ತಿಯನ್ನು ಹೆಚ್ಚಿಸುವ ನೆಲೆಯಿಂದ ಮಗುವಿಗೆ ಆರಂಭದಲ್ಲಿ ತಾನು ಕೇಳಿರುವ ಪದಗಳನ್ನೇ ಕಲಿಸಬೇಕು ಎನ್ನುತ್ತಾರೆ. ಕಲಿಯುವಿಕೆ ಸುಖಮಯವಾಗಿರಬೇಕು ಎಂಬುದೇ ಕಾರಂತರ ಶಿಕ್ಷಣ ಪ್ರಯೋಗದ ಬಹಳ ದೊಡ್ಡ ಗುಣಾತ್ಮಕ ಅಂಶ. ಮಗುವಿನ ಸಹಜ ಸ್ವಭಾವದ ವಿಕಾಸಕ್ಕೆ ಈ ಶಿಕ್ಷಣ ಪ್ರಯೋಗದಲ್ಲಿ ಅವಕಾಶಗಳಿದೆ. ತಮ್ಮ ತಮ್ಮ ಅನುಭವ ಪರಿಧಿಯನ್ನು ವಿಸ್ತರಿಸಿಕೊಳ್ಳಲು ಮತ್ತು ಆ ಅನುಭವ ವ್ಯಾಪ್ತಿಗೆ ತಕ್ಕಂತೆ ಭಾಷೆಯೇ ಮೊದಲಾದ ಸಂಗತಿಗಳನ್ನು ಕಲಿತುಕೊಳ್ಳಲು ಅವಕಾಶವಿತ್ತು.

ಕಾರಂತರಿಗೆ ತಮ್ಮ ಸಮಕಾಲೀನ ಶಿಕ್ಷಣ ವ್ಯವಸ್ಥೆಯಲ್ಲಿ ಇರುವ ದೋಷಗಳ ಅರಿವು ಬಹಳ ಸ್ಪಷ್ಟವಾಗಿತ್ತು. ಅವುಗಳಲ್ಲಿ ಒಂದು ಎಂದರೆ, ಮಕ್ಕಳ ಶಿಕ್ಷಣದ ಹೆಸರಿನಲ್ಲಿ ಹಿರಿಯರು ತಮಗೆ ಉತ್ತಮ ಎಂದು ಕಂಡದ್ದನ್ನು, ಪಠ್ಯವಾಗಿ ಕಲಿಸುವ, ಅವರಿಗೆ ನೀತಿ, ದೇಶಭಕ್ತಿ ಕಲಿಸುವ ಕೆಲಸವನ್ನು ಮಾಡುತ್ತಿದ್ದರು. ಆದರೆ ಕಾರಂತರು ಇದನ್ನು ಭಿನ್ನವಾಗಿ ಯೋಚಿಸುತ್ತಾರೆ. ಈ ಶಿಕ್ಷಣ ಕ್ರಮದ ಒಳಗಡೆ ಕೇವಲ ಕಂಠಪಾಠಕ್ಕೆ ಮಾತ್ರ ಪ್ರಾಧಾನ್ಯವಿದ್ದು, ಇಲ್ಲೆಲ್ಲೂ ಮಗುವಿಗೆ ತನ್ನ ಸ್ವಂತ ಅನುಭವದ ನಿರೂಪಣೆಗೆ ಅವಕಾಶವಿಲ್ಲ. ಕಾರಂತರ ಪ್ರಯೋಗಗಳ ಬಹು ಮುಖ್ಯ ಲಕ್ಷಣಗಳು ಹಾಗೂ ಒಂದು ಸಕಾರಾತ್ಮಕ ಸಂಗತಿ ಎಂದರೆ, ಎಲ್ಲೂ ಕೂಡ 'ಕಲಿಸಿ ಕೊಡುವುದು' ಎಂಬ ಭಾವ ಇಲ್ಲ. ಬದಲಾಗಿ ಕಲಿಕೆಗೆ ಬೇಕಾದ 'ಕುತೂಹಲವನ್ನು ಅರಳಿಸುವುದು' ಮುಖ್ಯ ಸಂಗತಿಯಾಗಿದೆ. ಮಗುವಿನ ವಯೋಮಾನ ಮತ್ತು ಮನಸ್ಸು ಗಮನಾರ್ಹ ಸಂಗತಿಯಾಗಬೇಕು ಎಂದೇ ಕಾರಂತರು ಬಯಸಿದ್ದರು. ಮಗುವಿನ ವಯಸ್ಸು ನಿರಂತರವಾದ ಚಟುವಟಿಕೆಯಿಂದ ಕೂಡಿರುವಂತಹದು. ಆದರೆ ನಾವು ತರಗತಿಯ ಶಿಕ್ಷಣದ ನೆಪದಲ್ಲಿ ಮಗುವಿನ ಚಟುವಟಿಕೆಗೆ ತಡೆಯನ್ನು ನೀಡುತ್ತೇವೆ ಎಂದು

ಹೇಳುತ್ತಾ, ಆ ಚಟುವಟಿಕೆಗಳ ಮೂಲಕವೇ ಕಲಿಕೆ ಸಾಧ್ಯ ಎನ್ನುವುದನ್ನು ತೋರಿಸಿದರು. ಬೋಧನೆಗಿಂತಲೂ ಕಲಿಕೆಯ ಆವರಣದಲ್ಲಿ ಪ್ರಚೋದನೆಯನ್ನು ಉಂಟು ಮಾಡಬೇಕು ಎಂಬ ಚಿಂತನೆ ಆಧುನಿಕ ಕಾಲದ ಶಿಕ್ಷಣ ಚಿಂತನೆಯ ಜೊತೆ ಬಹಳ ಎತ್ತರದಲ್ಲಿ ನಿಲ್ಲಬಹುದಾದ ಯೋಚನೆಯೇ ಆಗಿದೆ.

ಮುಂದೆ ಕಾರಂತರು ಆಯೋಜಿಸಿದ ಮಕ್ಕಳ ಕೂಟ ಮತ್ತು 'ಬಾಲವನ' ಶಾಲಾ ಶಿಕ್ಷಣ ಹಾಗೂ ಪಠ್ಯ ಪುಸ್ತಕ ತಯಾರಿಯ ಸಂದರ್ಭದಲ್ಲಿ ಈ ಅಂಶಗಳು ಪ್ರಾಯೋಗಿಕ ಸಾಕಾರತೆಯನ್ನು ಪಡೆಯುತ್ತದೆ. ಚಿತ್ರ ಬಿಡಿಸುವ ಮೂಲಕ ತಾವು ನಿತ್ಯ ಬದುಕಿನ ಸನ್ನಿವೇಶದಲ್ಲಿ ಕೇಳಿದ ಹಾಡುಗಳನ್ನು ಹಾಡುವ, ಸುತ್ತಲಿನ ಪರಿಸರದಲ್ಲಿ ಸಿಗುವ ವಸ್ತುಗಳನ್ನೇ ಬಳಸಿಕೊಂಡು ಕಲಿಕೆಯ ಆಸಕ್ತಿಯನ್ನು ಹುಟ್ಟಿಸುವ ಮತ್ತು ಅಭಿವ್ಯಕ್ತಿಯ ಸಾಧನವನ್ನಾಗಿಸುವ ಮೂಲಕ ಪ್ರಯೋಗ ವಿಶಿಷ್ಟವಾಗುತ್ತದೆ. ಇಡೀ ಈ ಶಿಕ್ಷಣ ಕ್ರಮದ ಮುಖ್ಯವಾದ ಇನ್ನೊಂದು ಗುಣವೆಂದರೆ, ಇದು ಮಕ್ಕಳ ಸೃಷ್ಟಿಕ್ರಿಯೆಗೆ ಪೂರಕವಾದುದು. ತಮ್ಮ 'ಸ್ಮೃತಿ ಪಟಲ'ದಿಂದ ಪುಸ್ತಕದಲ್ಲಿ ಮಕ್ಕಳ ಕೂಟದ ಸಂದರ್ಭದಲ್ಲಿ ತಾವು ಕಂಡ ಮಕ್ಕಳ ಸೃಷ್ಟಿಕ್ರಿಯೆಯನ್ನು ವರ್ಣಿಸುತ್ತಾರೆ. ಮಕ್ಕಳಲ್ಲಿ ಹುದುಗಿರುವ ಸುಪ್ತ ಶಕ್ತಿಯ ಅನಾವರಣಕ್ಕೆ ಈ ಪ್ರಯೋಗಗಳು ಪೂರಕವಾಗಿತ್ತು. ಅದರ ಕೆಲವು ಫಲಿತಗಳನ್ನು ಕಾರಂತರೇ ಹೇಳಿಕೊಂಡಿದ್ದಾರೆ. "ರಾಮ ವಾರಿಯರ್ ಎಂಬಾತ ಮಕ್ಕಳ ಕೂಟದಲ್ಲಿ ಚಿತ್ರ ಬರೆಯುವುದರಲ್ಲಿ ಆಸಕ್ತಿ, ಉತ್ಸಾಹವನ್ನು ತೋರಿದವ. ಇಂದು ಪೈಂಟಿಂಗ್ ಉದ್ಯಮದಲ್ಲಿ ಜೀವನ ನಡೆಸುತ್ತಿದ್ದಾನೆ. ಇನ್ನೊಬ್ಬ ನಾಟಕ, ಹಾಡುಗಾರಿಕೆಯಲ್ಲಿ ಉತ್ಸಾಹ ತೋರಿಸಿದ ಕಿರಿಯ ವ್ಯಕ್ತಿ ಇದಿನಬ್ಬ. ಆತ ತನ್ನ ಸಾಹಿತ್ಯ ಗೀತೆಗಳ ಅಭಿರುಚಿಯಿಂದ ಪ್ರಸಿದ್ಧನಾಗಿದ್ದಾನೆ. ಮಕ್ಕಳ ಕೂಟದಲ್ಲಿ ಸೇರಿಕೊಂಡ ಕುಳಕುಂದ ಶಿವರಾಯನೆಂಬಾತ ಇಂದು ನಿರಂಜನನಾಗಿ ಕರ್ನಾಟಕದಲ್ಲಿ ಹೆಸರಾಗಿದ್ದಾನೆ. ಇವಾವುವೂ ಮಕ್ಕಳ ಕೂಟದಿಂದಲೇ ಆದ ಕೆಲಸಗಳಲ್ಲ. ಅಲ್ಲಿ ಭಾಗವಹಿಸಿದ ಮಕ್ಕಳಲ್ಲಿ ಎಂತೆಂಥ ಸುಪ್ತಶಕ್ತಿಗಳನ್ನು ಗುರುತಿಸಲು ಬಂದಿತೆಂಬುದಕ್ಕೆ ನಿದರ್ಶನ"[೧] ಎನ್ನುತ್ತಾರೆ. ಈ ಮಾತೇ ಹೇಗೆ ಒಂದು ಕೂಟವು ಕ್ರಿಯಾತ್ಮಕವಾದ ಬಗೆಯಲ್ಲಿ ರೂಪುಗೊಂಡಾಗ ಯಾವ ಬಗೆಯಲ್ಲಿ ಪ್ರತಿಭೆಯ ಅನಾವರಣಕ್ಕೆ ಕಾರಣವಾದೀತು ಎಂಬುದನ್ನು ಹೇಳುತ್ತದೆ.

ಬಾಲವನದಲ್ಲೂ ಭಾಷಾ ಶಿಕ್ಷಣದಲ್ಲಿ ಭಾಷಾ ಶಿಕ್ಷಣ ತಜ್ಞ ಬಲ್ಲಾರ್ಡ್‌ನ ಸೂತ್ರಗಳನ್ನು ಅನುಸರಿಸಿ ಚಿತ್ರ ಬರೆದು, ವಾಕ್ಯದಿಂದ ಭಾಷೆ ಕಲಿಸುವ ಕ್ರಮವನ್ನು ಅನುಸರಿಸಿದ್ದರು. ಕಾರಂತರಿಗೆ ಶಿಶು ಕೇಂದ್ರೀಕೃತ ಜ್ಞಾನ ಎಂಬುದೇ ಮುಖ್ಯವಾಗಿತ್ತು. ಹಾಗಾಗಿ ಮಗುವಿಗೆ ಮಾತುಗಾರಿಕೆಯನ್ನು ಕಲಿಸುವಾಗ ಗ್ರಾಮದ ಸುತ್ತಲಿನ ವಸ್ತುಗಳನ್ನು ತೋರಿಸುತ್ತಲೇ ಕಲಿಸಬೇಕು ಎಂದು ಬಯಸುತ್ತಿದ್ದರು. "ಸುತ್ತಲಿನ ಗಿಡ ಮರಗಳ ಸೊಬಗನ್ನು ನೋಡುತ್ತಲೇ ಅವುಗಳ ಬಗ್ಗೆ ಆಸಕ್ತಿ ಹುಟ್ಟಿ ಆ ಮೂಲಕ

ನಿರರ್ಗಳ ಮಾತುಗಾರಿಕೆಯನ್ನು ಕಲಿಯಬಹುದು. ಮುಂದೆ ಬರಹಕ್ಕೂ, ಈ ಜ್ಞಾನ ಸಂಬಂಧದ ವಸ್ತುಗಳಿಗೂ ಸಂಬಂಧ ಬೆಳೆಸಬಹುದು”[೩] ಎನ್ನುತ್ತಾರೆ. ಈ ಮಾತು ಕಾರಂತರ ಶಿಕ್ಷಣ ದೃಷ್ಟಿಯ ಸೂಕ್ಷ್ಮ ಒಳನೋಟವೇ ಹೌದು. ಈ ಒಳನೋಟ ಅನುಭವದಿಂದಲೇ ಹುಟ್ಟಿದ್ದಾಗಿತ್ತು. ಈ ಪ್ರಯೋಗ ಸಾಫಲ್ಯತೆಯನ್ನು ಸ್ವತಃ ಕಾರಂತರೇ ಗುರುತಿಸುತ್ತಾರೆ. “ನನ್ನ ನಾಲ್ವರು ಮಕ್ಕಳೂ ಪ್ರಾಥಮಿಕ ಶಾಲೆಗೆ ಹೋಗದೆ ಮನೆಯಲ್ಲೇ ಆಟ, ನೋಟದಲ್ಲಿ ಕಳೆದರು. ಯಾವ ಹಕ್ಕಿ ಬಂದಿದೆ? ಯಾವ ಪತಂಗ ಹಾರುತ್ತಿದೆ? ಎಂಬ ಕುತೂಹಲದಲ್ಲಿ ಅನ್ವೇಷಣೆಗಳ ಕುತೂಹಲವನ್ನು ಬೆಳೆಯಿಸಿಕೊಂಡರು. ಸಮಯವನ್ನು ಚಟುವಟಿಕೆ ಮತ್ತು ವಿಸ್ಮಯದಿಂದಲೇ ಕಳೆಯುತ್ತಿದ್ದರು. ನೋಡಿದ್ದರ ಬಗ್ಗೆ ಪ್ರಶ್ನೆ ಕೇಳುತ್ತಿದ್ದರು. ಓದಿ ತಿಳಿಯಬೇಕು ಎಂಬ ವಿಚಾರದಲ್ಲಿ ಅಭಿರುಚಿ, ಆಸಕ್ತಿಯನ್ನು ಬೆಳೆಸಿದ್ದರಿಂದ ಓದು ಬರಹ ಸುಲಭವಾಯಿತು. ಅವರಲ್ಲಿ ಆಸಕ್ತಿಯನ್ನು ಕೆರಳಿಸಬಲ್ಲ ಆವರಣ, ಕ್ರಮಗಳು ಇದ್ದಾಗ ಕಠಿಣ ವಿಷಯವೂ ಪಾಠವಾಗುವುದು ತಪ್ಪಿ ಆಟವಾಗುತ್ತದೆ”[೪] ಎಂಬ ಮಾತುಗಳು ಈ ಬಗೆಯ ಶಿಕ್ಷಣ ಎನ್ನುವುದು ಆಸಕ್ತಿ, ಅಭಿರುಚಿ, ಸ್ವ-ವಿಚಾರ ಶಕ್ತಿಯನ್ನು ಬೆಳೆಯಿಸಿತು ಎಂಬುದಕ್ಕೆ ಸಾಕ್ಷಿಯಾಗಿ ನಿಲ್ಲುತ್ತದೆ. ಅಂದರೆ ಕಲಿಯುವಿಕೆ ಎಂಬುದು ಈ ಬಗೆಯ ಪದ್ಧತಿಯಿಂದ ಸಾಧ್ಯ ಎಂಬುದನ್ನು ಪ್ರಯೋಗ ಸಿದ್ಧ ಎಂಬಂತೆ ತೋರಿಸುತ್ತದೆ.

ಭಾಷಾ ಬೋಧನೆಯನ್ನು ಕೇಳಿ ಕಲಿಯಬೇಕು, ಹೊರತು ವ್ಯಾಕರಣದಿಂದಲ್ಲ ಎಂಬುದನ್ನು ಕಾರಂತರು ಶಿಕ್ಷಣ ಕ್ರಮದಲ್ಲಿ ಅಳವಡಿಸಿಕೊಂಡಿದ್ದರು. ಮಗು ತನ್ನ ಅನುಭವವನ್ನು ತೋಡಿಕೊಳ್ಳುವುದಕ್ಕೆ ಯಾವ ಬಗೆಯ ಪದ ಸಂಪತ್ತು ಅನಿವಾರ್ಯ ಎಂಬುದನ್ನು ಯೋಚಿಸಿ, ಅವು ಯಾವ ಅರ್ಥ ಮತ್ತು ಭಾವನೆಯನ್ನು ಉಂಟು ಮಾಡುತ್ತದೆ? ಎಂದು ತಿಳಿದು ಭಾಷಾ ಕಲಿಕೆಯನ್ನು ಮಾಡುವಲ್ಲಿ ಕಾರಂತರ ಪ್ರಯೋಗ ವಿಶೇಷವಾಗಿ ತೊಡಗಿಸಿಕೊಂಡಿತ್ತು. ಕಾರಂತರು ಭಾಷಾ ಕಲಿಕೆಯ ವರ್ತಮಾನದ ಕ್ರಮದ ದೋಷವನ್ನು ಗುರುತಿಸುತ್ತಲೇ ಮಗುವು ಸಹಜ ಸಂದರ್ಭದಲ್ಲಿ ಹೇಗೆ ಭಾಷೆಯನ್ನು ಕಲಿಯುತ್ತದೋ ಹಾಗೆಯೇ ಕಲಿಸಬೇಕು ಎಂದು ಹೇಳುತ್ತಿದ್ದರು. ತಾಯಿ ಮಗುವಿಗೆ ಭಾಷೆ ಕಲಿಸುವುದು ವ್ಯಾಕರಣದಿಂದಲ್ಲ, ಸಂಭಾಷಣೆಯಿಂದ ಎಂಬ ಸೂಕ್ಷ್ಮವನ್ನು ಅರಿತಿದ್ದ ಕಾರಂತರು ತಮ್ಮ ಪ್ರಯೋಗದ ಸಂದರ್ಭದಲ್ಲಿ ಇದೇ ಮಾದರಿಯನ್ನು ಕಲಿಕೆಗೆ ಬಳಸಿಕೊಂಡರು. ಅಕ್ಷರಗಳ ಬೋಧನೆಯಿಂದ ಮಕ್ಕಳ ಗ್ರಹಣ ಶಕ್ತಿಗೆ ಹಾನಿಯಾಗುತ್ತದೆ, ಅಮೂರ್ತವಾದ ಅಕ್ಷರಗಳ ಕಲಿಕೆಯಿಂದ ಅರ್ಥಪೂರ್ಣತೆ ಹೊರಹೊಮ್ಮುವುದಿಲ್ಲ, ಒಂಟಿ ಅಕ್ಷರಕ್ಕೆ ಯಾವ ಅರ್ಥವೂ ಇಲ್ಲ ಎನ್ನುವ ಕಾರಂತರು ಅಕ್ಷರ ಪದ್ಧತಿಯಲ್ಲಿ ಮೊದಲು ಬರೀ ಸಂಕೇತಗಳನ್ನು ಕಲಿತು ಬಳಿಕ ಪದ, ವಾಕ್ಯಕ್ಕೆ ಬರುವ ತ್ರಾಸದಾಯಕ ಕ್ರಮದ ಮಿತಿಯನ್ನು ಅರಿತು ಅದನ್ನು ಬದಲಿಸಿದ್ದರು.

ಇಂತಹದ್ದೊಂದು ಬದಲಾವಣೆಯನ್ನು ಆ ಬಳಿಕದ ಶಿಕ್ಷಣ ಕ್ರಮದಲ್ಲಾದರೂ ಅಳವಡಿಸಿಕೊಳ್ಳಲು ಸಾಧ್ಯವಾಗದೇ ಇರುವುದಾದರೂ ಯಾಕೆ ಎಂಬುದನ್ನು ಯೋಚಿಸಬೇಕು.

ಶಬ್ಧ ಬೋಧನೆಯೇ ಭಾಷಾ ಕಲಿಕೆಗೆ ಹೆಚ್ಚು ಸುಲಭ ಮತ್ತು ಆಕರ್ಷಕ ಎಂಬ ತತ್ವವನ್ನು ಕಾರಂತರು ಪ್ರತಿಪಾದಿಸಿದರು. ಇದಕ್ಕಾಗಿ ಅವರೇ ಒಂದು ಕ್ರಮವನ್ನು ಅಳವಡಿಸಿಕೊಂಡಿದ್ದರು. ಚಿತ್ರ ಅಥವಾ ವಸ್ತುವನ್ನು ಕುರಿತು ಸಂಭಾಷಣೆ, ಸಂಭಾಷಣೆಯಿಂದ ಹೊಮ್ಮುವ ಶಬ್ಧ, ಆ ಶಬ್ಧದ ಬಿಂಬ ಕಲ್ಪನೆ, ಬಳಿಕ ಅಕ್ಷರದ ಪರಿಚಯ... ಹೀಗೆ ಶಬ್ಧ ಬೋಧನೆ ಸಾಗುವಾಗ ಒಂದು ಅಕ್ಷರ ಪರಿಚಯಕ್ಕಾಗಿಯೇ ಶಬ್ಧಗಳನ್ನು ಕೊಡಬಾರದು ಎನ್ನುತ್ತಾ ಇದರ ಬದಲಿಗೆ ಮಗುವಿನ ಆವರಣದಲ್ಲಿರುವ, ಮಗು ನಿತ್ಯವೂ ಕೇಳುವ ಸಹಜ ಬಳಕೆಯ ಶಬ್ಧಗಳಿಗೆ ಪ್ರಾಶಸ್ತ್ಯ ನೀಡಬೇಕು ಎಂಬ ಕಾರಂತರ ಪ್ರಯೋಗಶೀಲ ಮಾತುಗಳು ಭಾಷಾ ಬೋಧನೆಯ ಬಗೆಗೆ ಬಹಳ ಬೆಲೆಯುಳ್ಳ ಮಾತುಗಳಾಗಿ ತೋರುತ್ತದೆ. ಈ ಯೋಚನೆಗಳು ಕಾರಂತರ ಪ್ರಯೋಗದ ಮೌಲಿಕತೆಯನ್ನು ತೋರಿಸಿ ಕೊಡುವ ದಿಗ್ದರ್ಶಕಗಳಾಗಿ ಕಾಣುತ್ತವೆ. ಪಠ್ಯ ಪುಸ್ತಕಗಳೂ ಕೂಡ ನಿರುಪಯುಕ್ತ ಪದಗಳನ್ನು ಬಳಸದೆ, ಅರ್ಥದ ನಿಖರತೆಗಾಗಿ ಗಮನ ವಹಿಸಬೇಕು ಎಂಬುದನ್ನು ಹೇಳುತ್ತಾರೆ.

ಕಾರಂತರ ಪ್ರಯೋಗದಲ್ಲಿ ಗುರುತಿಸಬಹುದಾದ ಇನ್ನೊಂದು ಇತ್ಯಾತ್ಮಕ ಸಂಗತಿ ಎಂದರೆ ತಮ್ಮ ಕಾಲದ ಪಠ್ಯದಲ್ಲಿ ಯಾವೆಲ್ಲ ಬಗೆಯ ಕೊರತೆಗಳು ಎಂಬುದಿದೆಯೊ, ಅದನ್ನು ತಾನೇ ಪಠ್ಯಪುಸ್ತಕಗಳ ರಚನೆಯನ್ನು ಮಾಡಿದಾಗ ಆ ಕೊರತೆಗಳನ್ನು ನಿವಾರಿಸುವಲ್ಲಿ ಗಮನ ವಹಿಸಿದ್ದು. ಭಾಷಾ ಪಾಠಗಳಲ್ಲಿ ಪದಗಳು, ವಾಕ್ಯಗಳು ಮತ್ತೆ ಮತ್ತೆ ಆವರ್ತನಗೊಳ್ಳಬೇಕು ಎಂಬ ಚಿಂತನೆಯ ಕಾರಂತರು ತಮ್ಮ ಕಾಲದ ಪಠ್ಯಗಳಲ್ಲಿ ಈ ಸಂಗತಿಗಳು ಇಲ್ಲದೇ ಹೋದಾಗ, ತಾನೇ ಪಠ್ಯ ರಚಿಸಿದಾಗ ಪದಗಳ ಆವರ್ತನ ಸಾಕಷ್ಟು ಪ್ರಮಾಣದಲ್ಲಿರುವಂತೆ ನೋಡಿಕೊಂಡಿದ್ದಾರೆ.

ಭಾಷೆಯ ವ್ಯಾಕರಣವನ್ನು ಕಲಿಸುವುದು ಹೇಗೆ ಎಂಬುದರ ಬಗ್ಗೆ ಕಾರಂತರು ವೈಜ್ಞಾನಿಕವಾದ ಆಲೋಚನೆಗಳನ್ನು ಪ್ರತಿಪಾದಿಸಿ ಪ್ರಯೋಗಗೊಳಿಸಿದ್ದರು. ಭಾಷೆ ಕೇಳಿ ಕಲಿಯುವ ವಿಷಯವಾದುದರಿಂದ, ವ್ಯಾಕರಣವೂ ಕೇಳಿಯೇ ಕಲಿಯಬೇಕು. ವ್ಯಾಕರಣದ ಸೂತ್ರಗಳನ್ನು ಕಂಠಪಾಠಗೊಳಿಸುವುದರಿಂದ ಭಾಷೆ ಕರಗತವಾಗುವುದಿಲ್ಲ. ವ್ಯಾಕರಣದ ಪ್ರಯೋಜನವನ್ನು ಸೂಚ್ಯವಾಗಿ ತಿಳಿಸಿಕೊಡಬೇಕೇ ಹೊರತು ಅದನ್ನು ಪ್ರತ್ಯೇಕ ವಿಷಯವೆಂಬಂತೆ ಹೇಳಿಕೊಡಬೇಕಾಗಿಲ್ಲ. ವ್ಯಾಕರಣ ಬೋಧನೆ ಕ್ರಿಯಾತ್ಮಕವಾಗಿರಬೇಕು ಎಂಬ ಮಾತುಗಳನ್ನು ಹೇಳುವ ಕಾರಂತರ ಬಗೆಗೆ ಡಾ.ಮಹಾಬಲೇಶ್ವರ ರಾವ್ ಹೇಳುವ ಈ ಮಾತು ಪ್ರತಿಶತ ಸತ್ಯವೆಂದೇ ಕಾಣುತ್ತದೆ. "ಓರ್ವ ಭಾಷಾ ವಿಜ್ಞಾನಿ ತರಗತಿಯ ಅಧ್ಯಾಪಕನಿಗೆ ಹೇಳಬಹುದಾದ ಮಾತುಗಳನ್ನು ಕಾರಂತರು ಅಧಿಕಾರವಾಣಿಯಿಂದ ಹೇಳುತ್ತಾರೆ"[೬] ಎನ್ನುತ್ತಾರೆ.

ಹೀಗೆ ಕಾರಂತರು ನಡೆಸಿದ ಒಂದೊಂದು ಬಗೆಯ ಪ್ರಯೋಗ ಶೀಲತೆಯಲ್ಲಿ ಉತ್ಕೃಷ್ಟ ಗುಣಗಳು ಇದ್ದಿತಾದರೂ ಅವುಗಳನ್ನು ತೂಗಿ ಮೌಲ್ಯಮಾಪನ ಮಾಡಿ ಗ್ರಹಿಸಬಲ್ಲ ವ್ಯವಸ್ಥೆ, ಸಾರ್ವಜನಿಕ ಜನಾಭಿಪ್ರಾಯ ಆ ಕಾಲದಲ್ಲಿ ಮೂಡಿ ಬರದೇ ಹೋದುದು ದುರಂತ.

ಭಾಷಾ ಶಿಕ್ಷಣ ಕ್ಷೇತ್ರದಲ್ಲಿ ಕಾರಂತರಂತೆ ಕೆಲಸ ಮಾಡಿದ ಬೇರೆ ವ್ಯಕ್ತಿಗಳನ್ನು ಗುರುತಿಸುವುದು ಕಷ್ಟ. ಭಾಷಾ ಬೋಧನೆಯ ಬಗೆಗೆ ಹೇಳಿದರು. ಪುಸ್ತಕಗಳನ್ನು ಬರೆದರು. ಭಾಷಾ ವಿಜ್ಞಾನದ ಹಿನ್ನೆಲೆಯನ್ನು ಕಾರಂತರು ಅಧ್ಯಯನ ಮಾಡಿದ್ದರೂ ಅದರ ಬಗೆಗೂ ಪುಸ್ತಕ ರಚಿಸಿದರು. ಪ್ರಯೋಗ ನಡೆಸಿದರು. ಇಷ್ಟೇ ಅಲ್ಲದೆ ಭಾಷೆಯನ್ನು ಕಲಿಸುವ ಉದ್ದೇಶವೇನು?, ಭಾಷಾ ಬೋಧನೆಯ ಕ್ರಮವೇನು ಎಂಬುದನ್ನು ಹೇಳುತ್ತಲೇ ಅದಕ್ಕೆ ಪೂರಕವೆಂಬಂತೆ ಪಠ್ಯ ಪುಸ್ತಕ ರಚನೆಯ ಮಹತ್ವವನ್ನು ಜನಕ್ಕೆ ತಿಳಿಸುತ್ತಾ ಅಂತಹ ಪಠ್ಯ ಪುಸ್ತಕಗಳನ್ನು ರಚಿಸಿದರು. ಭಾಷಾ ಪಠ್ಯ ಪುಸ್ತಕಗಳ ರಚನೆಯ ಮೂಲಕ ಆ ಕ್ಷೇತ್ರದಲ್ಲಿ ಅವರು ಕೈಗೊಂಡ ಪ್ರಯೋಗಗಳು ಹಲವು ಮಿತಿಗಳನ್ನು ಹೊಂದಿರಬಹುದಾದರೂ ಕೂಡ ಇಂದಿಗೂ ಆ ಕ್ಷೇತ್ರದಲ್ಲಿ ಮಾರ್ಗದರ್ಶಕ ಪ್ರಯತ್ನವಾಗಿಯೇ ಕಾಣುತ್ತದೆ. ಪಠ್ಯಪುಸ್ತಕಗಳು ಹೇಗೆ ವಿಸ್ತಾರವಾದ ಆಯಾಮವನ್ನು, ವಸ್ತು ವಿಷಯಗಳಲ್ಲಿ ಬಹುಮುಖತೆಯನ್ನು ಪಡೆಯಬಹುದು ಎಂಬುದಕ್ಕೆ ಕಾರಂತರ ಈ ಪಠ್ಯಗಳೇ ಸಾಕ್ಷಿ.

ಅವರ ಪಾಠಮಾಲೆಗಳೂ ಕೂಡ ಮಕ್ಕಳಲ್ಲಿ ಕಲಿಯುವಿಕೆಯ ಆಸಕ್ತಿ ಕುದುರಿಸುವಂತೆ ರಚನೆಯಾಗಿರುವುದು ಕಾಣಬರುತ್ತದೆ. ಇದರಿಂದಾಗುವ ಲಾಭವೆಂದರೆ, ಸಾಮಾನ್ಯವಾಗಿ ಪಾಠ ಪುಸ್ತಕ ಎನ್ನುವುದು ಒಂದು ಹೊರೆ ಎಂಬ ಭಾವನೆ ಬರುವಂತಹ ಸಂದರ್ಭದಲ್ಲೇ, ಅದೂ ಕೂಡ ಒಂದು ಲವಲವಿಕೆಯ, ಉತ್ಸಾಹದ ನಿರೂಪಣೆಯ ದಾಟಿಯನ್ನು ಹೊಂದಿದ್ದಾಗ ಮಕ್ಕಳಲ್ಲೂ ಆಸಕ್ತಿ ಮೂಡಿಸಲು ಸಾಧ್ಯವಾಗುತ್ತದೆ ಎನ್ನುವುದು ಸತ್ಯ. ಈ ನಿಟ್ಟಿನಲ್ಲಿ ಕಾರಂತರ ಪರಿಶ್ರಮವನ್ನು ವಿಶೇಷವಾಗಿ ಗುರುತಿಸಲೇ ಬೇಕಾಗುತ್ತದೆ.

ಕಾರಂತರು ನಿರಂತರವಾಗಿ ಶಿಕ್ಷಣ ಕ್ಷೇತ್ರದ ಬಗ್ಗೆ ಮಾತನಾಡಿದವರು. ಸಾಧ್ಯವಾದಾಗಲೆಲ್ಲಾ ಅದನ್ನು ಬೇರೆ ಬೇರೆ ಬಗೆಯಲ್ಲಿ ಪ್ರಯೋಗಕ್ಕೆ ಒಡ್ಡಿದರು. ಮಾತನಾಡಿದ ಪ್ರತಿ ಸಂದರ್ಭದಲ್ಲೂ ತಮ್ಮ ಕಾಲದ ವಿದ್ಯಾಭ್ಯಾಸದ ಲೋಪಗಳನ್ನು ಎತ್ತಿ ಹೇಳುತ್ತಿದ್ದರು. ಜೊತೆಗೆ ಶಿಕ್ಷಕರಲ್ಲೂ ಹೊಸ ಬಗೆಯಲ್ಲಿ ಅಭಿರುಚಿಯನ್ನು ಹುಟ್ಟಿಸಲು, 'ಬೋಧನೆ' ಎಂಬ ಪರಿಕಲ್ಪನೆಯನ್ನು ಸ್ಪಷ್ಟಪಡಿಸುತ್ತಾ, ಮಗುವಿಗೆ ಬೇಕಾದುದು ಎಷ್ಟು ಪ್ರಮಾಣ ಬೋಧನೆ ಇನ್ನೆಷ್ಟು ಪ್ರಮಾಣ ಪ್ರಚೋದನೆ ಎಂದು ತಿಳಿಸಿಕೊಟ್ಟರು. ಬೋಧನೆಯ ಉದ್ದೇಶ ಮತ್ತು ವಿಧಾನವನ್ನು ತಿದ್ದುವ ಪ್ರಯತ್ನವನ್ನು ಮಾಡಿದ್ದಾರೆ. ಸಾರ್ವಜನಿಕ ವೇದಿಕೆಗಳಲ್ಲಿ ಮಾತನಾಡುವಾಗಲೆಲ್ಲ ವಿದ್ಯಾಭ್ಯಾಸದ ಮಹತ್ವವನ್ನು ಅರಿವು ಮೂಡಿಸಲು ಪ್ರಯತ್ನಿಸಿದ್ದಾರೆ. ಇದಕ್ಕಾಗಿಯೇ ಸ್ವತಃ ವಯಸ್ಕರಿಗಾಗಿ ಶಿಕ್ಷಣವನ್ನು ಕೊಡುವ ಬೇರೆ ಬೇರೆ

ವಿಧಾನಗಳನ್ನು ಶೋಧಿಸುತ್ತಾ, ಅವರಿಗಾಗಿ ಪಠ್ಯಗಳನ್ನು, ಅನ್ಯ ಪುಸ್ತಕಗಳನ್ನು ಬರೆದರು. ಶಿಕ್ಷಣ ಕ್ಷೇತ್ರವಲ್ಲೇ ತೊಡಗಿದ ಸಂಶೋಧಕನೊಬ್ಬ ಮಾಡಲಾಗದೇ ಇರುವ ಮಹತ್ವದ ಕೆಲಸವನ್ನು ಕಾರಂತರು ನಿರ್ವಹಿಸಿದ್ದಾರೆ.

ಕಾರಂತರ ಬಗೆಗೆ ಡಾ. ಮಹಾಬಲೇಶ್ವರ ರಾವ್ ಅವರ ಮಾತುಗಳು ಬಹಳ ಮುಖ್ಯ ಪ್ರತಿಕ್ರಿಯೆ ಎಂಬಂತಿದೆ. "ಕಾರಂತರು ಔಪಚಾರಿಕ ಅರ್ಥದಲ್ಲಿ ಶಿಕ್ಷಣ ತಜ್ಞರಲ್ಲ. ತಾನು ಓರ್ವ ಶಿಕ್ಷಣ ತಜ್ಞನೆಂದು ಅವರು ಎಲ್ಲೂ ಹೇಳಿಕೊಂಡಿಲ್ಲ. ಆದರೆ ಆರೇಳು ದಶಕಗಳಿಂದ ಶಿಕ್ಷಣದ ಸಮಸ್ಯೆಗಳ ಬಗೆಗೆ ಗಾಢವಾದ ಚಿಂತನೆ ನಡೆಸಿ ಪ್ರಯೋಗಗಳನ್ನು ಮಾಡಿ ತಮ್ಮದೇ ಆದ ಒಂದು ಸಿದ್ಧಾಂತವನ್ನು ರೂಪಿಸಿಕೊಂಡಿದ್ದಾರೆ. ವಿಚಾರಗಳನ್ನು ಪರೀಕ್ಷೆಗೆ ಒಡ್ಡಿ, ಪ್ರಯೋಗಗಳಿಂದ ಕಂಡುಕೊಳ್ಳುವ ಕಾರಂತರ ಚಿಕಿತ್ಸಕ ಪ್ರವೃತ್ತಿ ಅನನ್ಯವಾದುದು. ಓರ್ವ ವಿಜ್ಞಾನಿಯಲ್ಲಿ ಮಾತ್ರ ನಾವು ಇಂತಹ ಗುಣವನ್ನು ಕಾಣಬಲ್ಲೆವು"[೩] ಈ ಮಾತುಗಳು ಕಾರಂತರ ಶಿಕ್ಷಣ ಚಿಂತನೆ ಪ್ರಯೋಗಗಳ ಅನನ್ಯತೆಯನ್ನು ಒಳ ಸೂಕ್ಷ್ಮತೆಯನ್ನು ಅನಾವರಣ ಮಾಡುತ್ತದೆ.

ಕಾರಂತರ ಪ್ರಯೋಗದ ಇನ್ನೊಂದು ವೈಶಿಷ್ಟ್ಯತೆ ಎಂದರೆ ಅವರ ಪ್ರಯೋಗದ ಉದ್ದಕ್ಕೂ ಮಗುವಿನಲ್ಲಿ ಸ್ಮರಣ ಶಕ್ತಿಯನ್ನು ಹೆಚ್ಚುಗೊಳಿಸುತ್ತಾ ಹೋಗುವ ಮಾದರಿಯದ್ದಲ್ಲ. ಸ್ಮರಣೆಯೇ ಶಿಕ್ಷಣ ಎಂದ್ಧಾಗಿ ಬಿಟ್ಟಿರುವಾಗ, ಕಾರಂತರು ಪಡೆದ ಜ್ಞಾನವನ್ನು ಜೀವನಾನುಭವದ ಜೊತೆಗೆ ಹೊಂದಿಸಿಕೊಳ್ಳುವುದು ಹೇಗೆ ಎಂಬುದರ ಬಗ್ಗೆ ಮಾತನಾಡುತ್ತಾರೆ. ಹೊಂದಿಕೆ ಬಾರದಿದ್ದಲ್ಲಿ ಯಾಕೆ ಬರಲಿಲ್ಲ? ಎಂಬ ಪ್ರಶ್ನೆಯನ್ನು ಹಾಕುತ್ತಾರೆ. ಇದಕ್ಕೆ ಬದಲಾಗಿ ಕಾರಂತರು ಶಿಕ್ಷಣದಿಂದ ವಿಕಾಸವಾಗಬೇಕಾದುದು ವಿವೇಚನಾಶಕ್ತಿ ಎಂದು ಹೇಳುತ್ತಾರೆ. ವಿವೇಚನಾ ಶಕ್ತಿ ವಿಕಾಸವಾಗಬೇಕಾದರೆ, ಮಗುವಿನಲ್ಲಿ ಕುತೂಹಲವನ್ನು ಬೆಳೆಸಬೇಕು. ಹಾಗೆ ಉಂಟಾಗುವ ಕುತೂಹಲವೇ ಜೀವನದ ಸಂದರ್ಭದಲ್ಲೂ ಬಳಕೆಯಾಗುತ್ತದೆ. ಕುತೂಹಲ ಹುಟ್ಟದೆ ಏನನ್ನೂ ಹೇಳಿಕೊಡಬೇಕಾಗಿಲ್ಲ ಎನ್ನುವ ಮಾತು ಶಿಕ್ಷಣದ ಪೂರ್ಣತೆಯ ತಿಳುವಳಿಕೆಯಾಗಿ ಕಾಣುತ್ತದೆ. ಕುತೂಹಲ ಹುಟ್ಟಿದಾಗ ಅದನ್ನು ಮಕ್ಕಳಿಗೆ ತಿಳಿಸಿ ಕೊಡುವ ವ್ಯವಸ್ಥೆ ಇರಬೇಕು ಎಂದೇ ಕಾರಂತರು ಬಯಸಿದ್ದರು. ಅವರು ಬಾಲವನದ ಶಿಕ್ಷಣ ಪದ್ಧತಿಯನ್ನು ಹೇಳುತ್ತಾ "ಬಾಲವನದ ಆವರಣದಲ್ಲಿ ಮಕ್ಕಳು ಕಂಡ ಯಾವುದೇ ವಿಷಯವನ್ನೆ ಕೇಳಿದಾಗಲೆಲ್ಲಾ ಉಪಾಧ್ಯಾಯರು ಉತ್ತರಿಸಬೇಕು"[೪] ಎಂದು ಹೇಳುತ್ತಾರೆ.

ಹೀಗೆ ಕಾರಂತರ ಶಿಕ್ಷಣದ ಚಿಂತನೆ ಮತ್ತು ಪ್ರಯೋಗಶೀಲತೆಯಲ್ಲಿ ಬಹಳ ಗಂಭಿರವಾಗಿ ಗಮನಿಸಬೇಕಾದ ಇತ್ಯಾತ್ಮಕವಾದ ಅಂಶಗಳಿವೆ. ಶಿಕ್ಷಣ ಕ್ಷೇತ್ರದಲ್ಲಿ ಈ ಬಗೆಯ ತಜ್ಞತೆಯನ್ನು ಕಾರಂತರು ಸಂಪಾದಿಸಲು ಬಹಳ ಮುಖ್ಯ ಕಾರಣ ಅವರು ಬಹಳ ದೀರ್ಘ ಕಾಲದಿಂದ ಮಕ್ಕಳ

ಶಿಕ್ಷಣದ ಸಮಸ್ಯೆಯನ್ನು ಪ್ರತ್ಯಕ್ಷ ಕಂಡಿದ್ದರು. ತನ್ನ ಬಾಲ್ಯದಲ್ಲಿ ತಾನದನ್ನು ಅನುಭವಿಸಿದ್ದರು. ಮತ್ತು ಕಾರಂತರ ಚಟುವಟಿಕೆಪೂರ್ಣ ಕ್ರಿಯಾಶೀಲ ವ್ಯಕ್ತಿತ್ವಕ್ಕೆ ಜಗತ್ತಿನ ನಾನಾ ಭಾಗಗಳ ಜ್ಞಾನದ ತಿಳುವಳಿಕೆ ಇತ್ತು. ಈ ತಿಳುವಳಿಕೆಯ ಕಾರಣದಿಂದಲೇ ಅವರು ಬಾಲಪ್ರಪಂಚ, ವಿಜ್ಞಾನ ಪ್ರಪಂಚ, ಪ್ರಾಣಿ ಪ್ರಪಂಚದಂತಹ ವಿಶ್ವಕೋಶಗಳನ್ನು ರಚಿಸಲು ಸಾಧ್ಯವಾದುದು. ನಿರಂತರವಾದ ಉತ್ಸಾಹ, ದಣಿವಾಗದ ವ್ಯಕ್ತಿತ್ವ ಅವರದ್ದಾಗಿದ್ದುದರಿಂದ ಒಂದೊಂದು ಸಂಗತಿಯನ್ನು ಮತ್ತೆ ಮತ್ತೆ ಪ್ರಯೋಗ ಮಾಡಿ, ಅಳೆದು ತೂಗಿ ನೋಡುವ ಸ್ವಭಾವ ಅವರಲ್ಲಿತ್ತು. ತಮ್ಮ ಕಾಲದ ಸಾರ್ವಜನಿಕರ ಸಹಕಾರ, ಸರ್ಕಾರದ ಇಲಾಖೆಗಳ ಸಹಕಾರ ಇವರಿಗೆ ಹೇಳಿಕೊಳ್ಳುವ ಮಟ್ಟಿಗೆ ದೊರೆಯದೇ ಹೋದುದು ಅವರ ಪ್ರಯೋಗಗಳಿಗೆ ಕೆಲವಾರು ಮಿತಿಗಳನ್ನು ತಂದೊಡ್ಡಿತು. ಸರ್ಕಾರದ ಸಹಾಯವೇ ಇಲ್ಲದೆ, ಇನ್ನು ಕೊಲವೊಮ್ಮೆ ಸರಕಾರದ ಅಡ್ಡಿಗಳ ಹೊರತಾಗಿಯೂ ಸ್ವಂತ ಪರಿಶ್ರಮ ಮತ್ತು ಕೆಲವೇ ಹಿತಾಕಾಂಕ್ಷಿಗಳ ಆರ್ಥಿಕ ಸಹಕಾರದಿಂದ ಈ ಪ್ರಯೋಗಗಳನ್ನು ನಡೆಸಿಕೊಂಡು ಹೋಗಬೇಕಾಯಿತು. ಇದರ ನಡುವೆಯೂ ಕಾರಂತರು ನಮ್ಮ ಕಾಲದಲ್ಲೂ ಮತ್ತೊಮ್ಮೆ ತೆರೆದು ನೋಡಬಹುದಾದ ಹಲ-ಕೆಲವು ಬದಲಾವಣೆಗಳೊಂದಿಗೆ ಪ್ರಯೋಗಕ್ಕೆ ಒಡ್ಡಬಹುದಾದ ಹಲವು ಉತ್ತಮಾಂಶಗಳು ಇದೆ ಎನ್ನುವುದರಲ್ಲೇ ಕಾರಂತರ ಪ್ರಯೋಗದ ಉನ್ನತಿಕೆಯನ್ನು ಹೇಳುತ್ತದೆ. ಇವೆಲ್ಲಕ್ಕೂ ಇದ್ದ ಬಹಳ ಮುಖ್ಯ ಕಾರಣ ಕಾರಂತರ ಮನಸ್ಸಿನ ಒಂದು ಬಗೆಯ ಉತ್ಸಾಹ, ಅಧಮ್ಯ ಒತ್ತಡ ಎಂದೇ ಹೇಳಬೇಕು.

೪.೩ ನೇತ್ಯಾತ್ಮಕ ಅಂಶಗಳು

ಕಾರಂತರಿಗೆ ತಮ್ಮ ಕಾಲದ ಶಿಕ್ಷಣ ಮಕ್ಕಳ ಸ್ವಬುದ್ಧಿಯ, ಸೃಷ್ಟಿಕ್ರಿಯೆಯ, ವಿಚಾರಶೀಲತೆಗಳ ವಿಕಾಸಕ್ಕೆ, ಅವುಗಳ ಬೆಳವಣಿಗೆಗೆ ಅವಕಾಶ ಮಾಡಿಕೊಡುವ ಪ್ರಯೋಗಗಳಾಗಿ ಕಾಣದೆ ಅವು ಒಂದು ಯಾಂತ್ರಿಕ ಕ್ರಿಯೆಯಾಗಿ ಗೋಚರವಾಗುತ್ತದೆ. ಶಾಲೆಯ ಶಿಕ್ಷಣಕ್ರಮ ಮಕ್ಕಳಲ್ಲಿ ಜ್ಞಾನತೃಷೆಯನ್ನು ಉಂಟು ಮಾಡುತ್ತಿಲ್ಲ. ವಿವೇಚನಾ ಶಕ್ತಿಯನ್ನು ಮೂಡಿಸುತ್ತಿಲ್ಲ. ಹೀಗಾಗಿ ಅಲ್ಲಿ ಕೇವಲ ಒಂದು ಶುಷ್ಕವಾದ ತರಬೇತಿಯಾಗಿ ಕಾಣುತ್ತದೆ. ಒಟ್ಟಿನಲ್ಲಿ ಶಿಕ್ಷಣ ಅಭಿರುಚಿಯನ್ನು ಬೆಳೆಸುವಲ್ಲಿ ವಿಫಲವಾದದ್ದರಿಂದ ಶಿಕ್ಷೆಯಾಗಿ ಪರಿಣಮಿಸಿದ್ದರಿಂದ ಕಾರಂತರು ತಾವು ಸ್ವತಃ ತಮ್ಮ ಶೈಕ್ಷಣಿಕ ಚಿಂತನೆಗಳನ್ನು ಕಾರ್ಯರೂಪಕ್ಕೆ ತರಲು ಅನುಕೂಲವಾಗುವಂತೆ ಕೆಲವು ಪ್ರಯೋಗಗಳನ್ನು ಮಾಡಿದರು. ಈ ಪ್ರಯೋಗಗಳು ವಿಶಿಷ್ಟವಾಗಿತ್ತು. ಅನೇಕ ಉತ್ಕೃಷ್ಟ ಗುಣಗಳನ್ನು ಹೊಂದಿದ್ದವು. ಹೀಗಿದ್ದೂ ಅವು ಕಾರ್ಯರಂಗದಲ್ಲಿ ಪೂರ್ಣ ಪ್ರಮಾಣದಲ್ಲಿ ಯಶಸ್ವಿಯಾಗಲಿಲ್ಲ. ಹಾಗೆ ಯಶಸ್ವಿಯಾಗದೇ ಇದ್ದುದು ಮಾತ್ರವಲ್ಲ, ಅವರ 'ಬಾಲವನ' ದಂತಹ ವಿಶೇಷ ಶಾಲಾ ಪರಿಕಲ್ಪನೆಯ

ಸಾಧ್ಯತೆಯ ಪರೀಕ್ಷೆಗೂ ಒಂದು ಸರಿಯಾದ ಅವಕಾಶ ಸಿಗಲಿಲ್ಲ. ಬೆರಳೆಣಿಕೆಯ ಮಕ್ಕಳು, ಅದೂ ಕೆಲವೇ ಸಮಯ. ಇಂತಹ ಶಿಕ್ಷಣ ಪದ್ಧತಿಯ ಕೆಲವೊಂದು ದೋಷಗಳನ್ನು ಇಲ್ಲಿ ಮುಖ್ಯವಾಗಿ ಗುರುತಿಸಬಹುದು.

ಪಠ್ಯ ವಿಷಯಗಳ ಬಗೆಗೆ, ಬೋಧನಾ ಕ್ರಮದ ಕುರಿತು ಹಾಗೂ ಕಲಿಕಾ ಪರಿಸರದ ಬಗೆಗೆ ಕಾರಂತರು ಅನೇಕ ಮಾತುಗಳನ್ನಾಡಿದ್ದು, ಈ ಎಲ್ಲಾ ಮಾತುಗಳು ಸತ್ಯವೆಂದೇ ತಿಳಿದರೂ, ಒಂದು ವರ್ಷದುದ್ದಕ್ಕೂ ತರಗತಿಗಳಲ್ಲಿ ಚಟುವಟಿಕೆ ಆಟದ ಮೂಲಕವೇ ಪಾಠ ಕಲಿಸಲು ಸಾಧ್ಯವೇ? ಕೆಲವೊಂದು ಪಠ್ಯ ವಿಷಯಗಳಲ್ಲಿ ಆ ಬಗೆಯ ಚಟುವಟಿಕೆಗಳೂ ಹೆಚ್ಚಿರುವುದಿಲ್ಲ. ಅಷ್ಟು ಮಾತ್ರವಲ್ಲ ಈ ಚಟುವಟಿಕೆ ಪ್ರಧಾನ ಶಿಕ್ಷಣವನ್ನು ಸಾರ್ವತ್ರಿಕಗೊಳಿಸುವುದಾದರೂ ಎಷ್ಟೋ ಶಾಲೆಗಳಲ್ಲಿ ಶಿಕ್ಷಕರಿಲ್ಲ, ಕೊಠಡಿಗಳಿಲ್ಲ, ಇನ್ನಿತರ ಸೌಲಭ್ಯಗಳೂ ಇಲ್ಲ. ಹೀಗಿರುವಾಗ ಯಶಸ್ವಿಯಾಗುವುದು ಹೇಗೆ? ಎಂಬ ಪ್ರಶ್ನೆ ಸಹಜವಾಗಿಯೇ ಬರುತ್ತದೆ. ಕೆಲವೊಮ್ಮೆ ಕಾರಂತರು ಸಮಕಾಲೀನ ಶಿಕ್ಷಣ ವ್ಯವಸ್ಥೆಯನ್ನು ಟೀಕಿಸುವಾಗ ಅತಿರಂಜಿತವಾಗಿ ಹೇಳಿದ್ದೂ ಉಂಟು. 'ಶಾಲೆಗಳು ಕಸಾಯಿಖಾನೆಗಳಾಗಿವೆ', 'ಮಕ್ಕಳನ್ನು ಕ್ಲಾಸಿನ ಪಂಜರದಲ್ಲಿ ನಿರ್ಬಂಧಿಸಿದ್ದೇವೆ' ಎಂಬ ಮಾತು ಈ ಮಾತಿನ ಪ್ರಮಾಣದಲ್ಲಿ ಸತ್ಯವೆಂದು ಒಪ್ಪಿಕೊಳ್ಳಲಾಗದು. ಕಾರಂತರು 'ಬಾಲವನ' ಎಂಬ ವಿಶಿಷ್ಟ ಶಾಲೆಯನ್ನೇನೋ ಆರಂಭಿಸಿದರು. ಈ ಶಾಲೆಗೆ ಸರಕಾರದ ಅಂಗೀಕಾರ ಇಲ್ಲವಾದುದರಿಂದ ಊರಿನ ಜನ ಆ ಶಾಲೆಗೆ ಮಕ್ಕಳನ್ನು ಕಳುಹಿಸಿ ಕೊಡಲಿಲ್ಲ. ಯಾವ ಪ್ರಯೋಗ ಚಟುವಟಿಕೆಪೂರ್ಣವಾಗಿ, ಆಟದ ಮೂಲಕ ನಡೆಯುವ ಪಾಠವಾಗಿ ಆಕರ್ಷಕವಾಗಬೇಕಾಗಿತ್ತೊ, ಆ ಶಾಲೆಗೆ ಮಕ್ಕಳೇ ಬರಲಿಲ್ಲ. ಕಾರಂತರೇ ಹೇಳುವಂತೆ "ಆಟದ ಮೂಲಕ ಪಾಠ ಮಾಡಿಸಬೇಕಾದರೆ, ಒಂದೊಂದು ತರಗತಿಯಲ್ಲಿ ಆರೆಂಟು ಮಕ್ಕಳಾದರೂ ಬೇಕು. ನಾನು ಕೇವಲ ಮೂರು ತರಗತಿಗಳನ್ನು ನಡೆಸಿದರೂ ಅದಕ್ಕೆ ೨೫ ಮಕ್ಕಳಾದರೂ ಬೇಕು. ಸಮೀಪದ ಮೂವರು ಬಡ ಮಕ್ಕಳು ಅಲ್ಲಿಗೆ ಬರತೊಡಗಿದರು. ಅವರ ಜೊತೆಗೆ ಹೊರಗಿಂದ ಮೂರು ನಾಲ್ಕು ಮಂದಿ ಅನಾಥರನ್ನು ತಂದು ಹಾಕಿ, ಒಟ್ಟಿಗೆ ಹತ್ತು ಮಂದಿ ವಿದ್ಯಾರ್ಥಿಗಳನ್ನು ಕೂಡಿಸುವುದಕ್ಕೆ ನನಗೆ ಸಾಕು ಬೇಕಾಯಿತು"[೭] ಎನ್ನುತ್ತಾರೆ. ಬಹುಶಃ ಈ ಮಾತಿನ ಹಿಂದೆ ಒಂದು ಬಗೆಯ ವಿಷಾದವಿದೆ. ಕಾರಂತರು ಬಾಲವನ ಎಂಬ ಕಲ್ಪನೆಯನ್ನೇನೋ ಅದ್ಭುತವಾಗಿ ಕಟ್ಟಿದ್ದರೂ ಬೇಕಾದ ವ್ಯವಸ್ಥೆಗಳನ್ನು ಮಾಡಿಸಿದ್ದರು. ಆದರೆ ಮಕ್ಕಳಿಲ್ಲದೆ ಹೋದರೆ ಪ್ರಯೋಗದ ಸಫಲತೆಯನ್ನು ಅಳೆಯುವುದಾದರೂ ಹೇಗೆ? ಇರುವ ಮಕ್ಕಳಲ್ಲೂ ಆಸಕ್ತಿಯಿಂದ ಬಂದವರಲ್ಲ. ಅನಾಥರನ್ನು ತಂದು ಹಾಕಿ ಮಾಡಿದೆ ಎನ್ನುತ್ತಾರೆ. ಇದಕ್ಕೆ ಬಹಳ ಮುಖ್ಯವಾದ ಕಾರಣ ಜನರಲ್ಲಿ ಈ ಬಗೆಗೆ ಆಸಕ್ತಿ ಇಲ್ಲದೇ ಹೋದುದು. ಕಾರಂತರು ಇಂತಹ ಪ್ರಯೋಗವೊಂದಕ್ಕೆ ಬೇಕಾದ ಹಾಗೆ ಜನರ ಮಾನಸಿಕತೆಯಲ್ಲಿ ಬದಲಾವಣೆಯನ್ನು ತಂದಿದ್ದಾಗಿದ್ದರೆ, ಪ್ರಯೋಗದ ಕಲ್ಪನೆಯನ್ನು ಮೂಡಿಸಿದ್ದಾಗಿದ್ದರೆ ಬಹುಶಃ

ಯಶಸ್ವಿಯಗಬಹುದಿತ್ತು. ಈ ಬಗೆಯ ಕಲಿಕೆಯ ಸಾಧ್ಯತೆಯೊಂದರ ಪ್ರಾತ್ಯಕ್ಷಿತೆ ಅದು ಜನರಿಗಾಗಿರಲಿಲ್ಲ. ಅಲ್ಲಿಗೆ ಜ್ಞಾನದ ಹಸಿವಿನಿಂದ ಬರುವ ಮಕ್ಕಳು ಕಾಣಲಿಲ್ಲ. ಅದು ಹೊಟ್ಟೆ ಹಸಿದವರಿಗೆ ಒಂದು ಅನಾಥಾಲಯವನ್ನು ತೆರೆದಂತಾಯಿತು ಎಂದು ಕಾರಂತರೇ ಹೇಳುತ್ತಾರೆ. ಮೂರು ವರ್ಷ ಕುಂಟುತ್ತಾ ನಡೆದ ಪ್ರಯೋಗ ಕೊನೆಗೆ ನಿಂತು ಹೋಯಿತು. "ಶಿಕ್ಷಣವನ್ನು ಹೊರಗಿನಿಂದ ಹೇರದೆ ಒಳಗಿನಿಂದ ಅರಳುವಂತೆ ಮಾಡುವ ಹಲವಾರು ಕಾರ್ಯಕ್ರಮಗಳನ್ನು ಅವರು ಅಲ್ಲಿ ನಡೆಸಿದ್ದರು. ಸುತ್ತಲಿನ ಪ್ರಕೃತಿಯನ್ನು ನೋಡುವ, ಅರ್ಥಮಾಡಿಕೊಳ್ಳುವ ಅದರ ಮೂಲಕವಾಗಿಯೇ ಕಲಿಯುವ ಅವಕಾಶವನ್ನೂ ಕಾರಂತರು ಕಲ್ಪಿಸಿದ್ದರು. ಸಮಾಜದ ಹಾಗೂ ಜನತೆಯ ಬೆಂಬಲ ಕಾರಂತರ ಉತ್ಸಾಹಕ್ಕೆ ಅನುಗುಣವಾಗಿದ್ದಿದ್ದರೆ 'ಬಾಲವನ'ವೂ 'ಶಾಂತಿನಿಕೇತನ'ದ ಹಾಗೆ ಬೆಳೆಯಬಹುದಾಗಿತ್ತು"[೪] ಎಂಬ ಹಾ. ಮಾ. ನಾಯಕರ ಮಾತು ಅಕ್ಷರಶಃ ಸತ್ಯ.

ಈ ಬಗೆಯ ಪ್ರಯೋಗವೊಂದು ಸಾಮಾಜಿಕವಾಗಿ, ಸ್ವೀಕಾರಾರ್ಹವಾಗದೇ ಹೋದದ್ದು, ಪ್ರಯೋಗದ ಮಿತಿ ಎಂದು ಹೇಳಲಾಗದು. ಆ ಬಗೆಯ ಪ್ರಯೋಗವನ್ನು ಸಕಾರಾತ್ಮಕವಾಗಿ ಸ್ವೀಕರಿಸಬಲ್ಲ ಜನ ಇರಲಿಲ್ಲ. ಆ ಬಗೆಯ ಜಾಗೃತಿಯೂ ಇರಲಿಲ್ಲ. ಕಾರಂತರು ನಡೆಸಿದ ಮಕ್ಕಳ ಕೂಟ ಕೂಡ ಮಕ್ಕಳ ಸುಪ್ತ ಶಕ್ತಿಯನ್ನು ಬೆಳಕಿಗೆ ತರುವ ನಿಟ್ಟಿನಲ್ಲಿ ಮಹತ್ವದ ಪ್ರಯೋಗವೇ ಆದರೂ ಅದು ಒಂದು ವಾರ್ಷಿಕ ಶಿಬಿರವಾಗಿಯಷ್ಟೇ ಉಳಿಯಬಹುದಿತ್ತೇ ಹೊರತು ಅದೇ ಕ್ರಮ ನಿತ್ಯ ಶಿಕ್ಷಣ ಪದ್ಧತಿಯ ಒಂದು ಭಾಗವಾಗುವ ಅವಕಾಶವಿರಲಿಲ್ಲ. ಇಲ್ಲಿ ಕಲಿತ ಸಂಗತಿಗಳು ನಿತ್ಯ ಶಿಕ್ಷಣ ಕ್ರಮದಲ್ಲಿ ಇರುವ ಸಂಗತಿಗಳಾಗಿರಲಿಲ್ಲ.

ಕಾರಂತರ ಈ ಎಲ್ಲಾ ಪ್ರಯೋಗಗಳೂ ಕೂಡ ಒಂದು ಬಗೆಯಲ್ಲಿ ಕಚ್ಚಾ ಸಾಮಾಗ್ರಿಯಂತಿತ್ತೇ ಹೊರತು ಅವುಗಳಿಗೆ ಒಂದು ಸುಧಾರಿತ ರೂಪವೆಂಬುದು ಇರಲಿಲ್ಲ. ಅಷ್ಟೇ ಅಲ್ಲದೇ ಈ ಬಗೆಯ ಶಿಕ್ಷಣ ಕ್ರಮವೊಂದು ಎಲ್ಲೋ ಪ್ರಯೋಗಗೊಂಡು ಅಲ್ಲಿ ಯಶಸ್ವಿಯಾದ ಉದಾಹರಣೆಯೂ ಇರಲಿಲ್ಲ. ತಮ್ಮ ಸಮಕಾಲೀನ ಶಿಕ್ಷಣ ಕ್ರಮದ ಯಾವೊಂದು ಸಂಗತಿಯೂ ಇದ್ದಿರಲಿಲ್ಲವಾದುದರಿಂದ ಸ್ವೀಕಾರಾರ್ಹವಾಗಲಿಲ್ಲ. ಒಂದು ವೇಳೆ ಆಗಾಗಲೇ ಸರ್ಕಾರಿ ಶಾಲೆಗಳಲ್ಲಿ ಜಾರಿಯಲ್ಲಿದ್ದ ಶಿಕ್ಷಣ ಕ್ರಮದ ಒಂದಷ್ಟು ಸಂಗತಿಗಳನ್ನು, ಅವುಗಳ ಅಧಿಕೃತತೆಯನ್ನು ಸ್ವೀಕಾರ ಮಾಡಿ, ಅವುಗಳ ಜೊತೆಗೆ ತಮ್ಮ ಪ್ರಯೋಗವನ್ನು ಕೂಡಿಸಿಕೊಂಡದ್ದಾಗಿದ್ದರೆ ಸಾಮಾಜಿಕ ಸ್ವೀಕಾರಾರ್ಹತೆಯೂ ಸಿಗುತ್ತಿತ್ತು. ಪ್ರಯೋಗಕ್ಕೆ ಅವಕಾಶವೂ ಸಿಗುತ್ತಿತ್ತು. ಆದರೆ ಕಾರಂತರು ಆಧುನಿಕ ಶಿಕ್ಷಣ ಕ್ರಮದ ಕಟ್ಟಾ ವಿರೋಧಿಯಾಗಿಯೇ ಇದ್ದುದರಿಂದ ಇಂತಹ ಒಂದು ಅವಕಾಶವನ್ನು ಕಳೆದುಕೊಂಡಿದ್ದರು.

ಕಾರಂತರೇ ಅನೇಕ ಸಲ ತಮ್ಮ ಪ್ರಯೋಗಗಳ ಲೋಪಗಳನ್ನು ಒಪ್ಪಿಕೊಂಡಿದ್ದಾರೆ. ಹೀಗಿದ್ದೂ ಕಾರಂತರು ತಮ್ಮ ಯೋಚನೆಗಳನ್ನು ಒಂದು ಸಿದ್ಧಾಂತದ ರೂಪದಲ್ಲಿ ಬಹಳ ದೃಢವಾಗಿ ಸಾರುತ್ತಾ

ಬಂದುದರಿಂದ ಮುಂದೆ ಯಾವುದೇ ಬದಲಾವಣೆಗಳನ್ನು ಮಾಡಿಕೊಳ್ಳಲು ಸಿದ್ಧರಿರಲಿಲ್ಲ. ಹೀಗಾಗಿ ಅವರ ಪ್ರಯೋಗಗಳಿಗೆ ಕೆಲವು ಮಿತಿಗಳು ಬಂದೊದಗಿದವು. ಇಂತಹ ಸಂಗತಿಗಳನ್ನು ನಾವು ಒಪ್ಪದೇ ಇದ್ದರೂ ಶಿಕ್ಷಣ ಕ್ಷೇತ್ರದ ಬಹುಮುಖತೆಯನ್ನು ಈ ಪರಿಯಲ್ಲಿ ಅರ್ಥೈಸಿಕೊಂಡು ಅದಕ್ಕೆ ಸ್ಪಂಧಿಸಿ ಕೆಲವನ್ನು ಟೀಕಿಸಿ, ಪರ್ಯಾಯವಾಗಿ ತನ್ನದೇ ಪ್ರಯೋಗಗಳನ್ನು ತೋರಿಸಿಕೊಟ್ಟ ಇನ್ನೊಬ್ಬ ವ್ಯಕ್ತಿಯನ್ನು ನಾವು ಕಾಣುವುದು ಕಷ್ಟ. ಹಾಗಾಗಿ ಮಿತಿಗಳು ಅದು ವ್ಯಕ್ತಿಯಾಗಿ ಕಾರಂತರ ಮಿತಿಗಳಲ್ಲ. ಆ ಕಾಲದ, ಲಭ್ಯ ಸಂಗತಿಗಳ, ಜನರ ಮಾನಸಿಕತೆಯ, ಸರ್ಕಾರಿ ವ್ಯವಸ್ಥೆಗಳೆಲ್ಲದರ ಮಿತಿಯೂ ಹೌದು. ಹೀಗಾಗಿ ಕಾರಂತರು ಎಂದೂ ನಿಲ್ಲಬಹುದಾದ ಒಬ್ಬ ಶಿಕ್ಷಣ ಚಿಂತಕರಾಗಿಯೇ ಕಾಣುತ್ತಾರೆ.

ಸಂದರ್ಭಸೂಚಿ

೧. ಶಿವರಾಮ ಕಾರಂತ: 'ಸ್ಮೃತಿ ಪಟಲದಿಂದ –೧', ರಾಜಲಕ್ಷ್ಮಿ ಪ್ರಕಾಶನ, ಬೆಂಗಳೂರು, ೧೯೭೭, ಪುಟ ೩೮೧

೨. ಮಾಲಿನಿ ಮಲ್ಯ (ಸಂ): 'ಶಿವರಾಮ ಕಾರಂತರ ಲೇಖನಗಳು ಸಂ–೨', ಪ್ರಸಾರಾಂಗ, ಮಂಗಳೂರು ವಿ.ವಿ, ೧೯೯೪, ಪುಟ ೧೮೬

೩. ಶಿವರಾಮ ಕಾರಂತ: 'ಸ್ಮೃತಿ ಪಟಲದಿಂದ –೧', ರಾಜಲಕ್ಷ್ಮಿ ಪ್ರಕಾಶನ, ಬೆಂಗಳೂರು, ೧೯೭೭, ಪುಟ ೪೨೧

೪. ಡಾ. ಮಹಾಬಲೇಶ್ವರ ರಾವ್: 'ಶಿಕ್ಷಣ ಕಾರಂತರ ದೃಷ್ಟಿ ಸೃಷ್ಟಿ', ಕರ್ನಾಟಕ ಸಂಘ, ಪುತ್ತೂರು ೧೯೯೨, ಪುಟ ೧೮

೫. ಅದೇ .... ಪುಟ ೪೩

೬. ಶಿವರಾಮ ಕಾರಂತ: 'ಸ್ಮೃತಿ ಪಟಲದಿಂದ –೧', ರಾಜಲಕ್ಷ್ಮಿ ಪ್ರಕಾಶನ, ಬೆಂಗಳೂರು, ೧೯೭೭, ಪುಟ ೪೦೦

೭. ಅದೇ .... ಪುಟ ೪೦೦

೮. ಮನು ಬಳಿಗಾರ್ (ಸಂ): 'ಬಹುಮುಖಿ', ಹಾ.ಮಾ. ನಾಯಕ್, 'ಕಾರಂತರ ಗೃಹ ವಿಜ್ಞಾನ'(ಲೇ) ಪರಮಶಂಕರ ಪ್ರಕಾಶನ ಶಿಗ್ಲಿ, ಬೆಳಗಾವಿ ೧೯೯೯, ಪುಟ ೪೨

೫. ಅಧ್ಯಯನದ ಫಲಿತಗಳು

೫. ಅಧ್ಯಯನದ ಫಲಿತಗಳು

ಶಿವರಾಮ ಕಾರಂತರನ್ನು ಕಾದಂಬರಿಕಾರರಾಗಿ ಗ್ರಹಿಸಿಕೊಂಡು ಈವರೆಗೆ ನಡೆದ ಅಧ್ಯಯನಗಳಿಗಿಂತ ಭಿನ್ನವಾಗಿ ಕಾರಂತರ ಶೈಕ್ಷಣಿಕ ವಾಙ್ಮಯವನ್ನು ಅವರ ಪ್ರಯೋಗ ಶೀಲತೆಯನ್ನು ಅದರ ಎಲ್ಲಾ ಸಾಧ್ಯತೆಯನ್ನು ಈ ಸಂಪ್ರಬಂಧ ತನ್ನ ಅಧ್ಯಯನದ ವ್ಯಾಪ್ತಿಯ ಒಳಗೆ ಪರಿಶೀಲಿಸಿದೆ. ಕಾರಂತರು ಶಿಕ್ಷಣ ಸಂಬಂಧವಾಗಿ ಬರೆದ ಲೇಖನಗಳು, ಮಾತನಾಡಿದ ಮಾತುಗಳು, ಮಾಡಿದ ಪ್ರಯೋಗಗಳನ್ನು ಈ ಸಂಶೋಧನೆಯ ಸಂದರ್ಭದಲ್ಲಿ ಮುಖ್ಯ ಆಕರಗಳಾಗಿ ಬಳಸಿಕೊಳ್ಳಲಾಗಿದೆ.

ಕಾರಂತರ ಬದುಕೇ ಒಂದು ಪ್ರಯೋಗಶೀಲತೆಯ ಸಾಕಾರ ರೂಪ. ಅವರು ಪ್ರಯೋಗ ಮಾಡಿದ್ದು ಕೇವಲ ಒಂದು – ಎರಡು ಕ್ಷೇತ್ರಗಳಲ್ಲಿ ಅಲ್ಲ. ಯಕ್ಷಗಾನ, ನಾಟಕ, ಚಲನಚಿತ್ರ, ಪತ್ರಿಕೆ, ಶಿಕ್ಷಣ ಮೊದಲಾದ ಕ್ಷೇತ್ರಗಳಲ್ಲಿ ಹೊಸ ಹೊಸ ಶೋಧವನ್ನು ಮಾಡಿದವರು. ಈ ಬಗೆಯ ಶೋಧದ ಮೂಲಕವೇ ಹೊಸತನವನ್ನು ಕಂಡುಕೊಂಡವರು. ಇಂತಹ ಪ್ರಯೋಗಗಳನ್ನು ಕೈಗೊಂಡಾಗ ಸಾಮಾಜಿಕವಾಗಿ ಅನೇಕ ಅಡ್ಡಿ, ತಡೆಗಳನ್ನು ಎದುರಿಸಬೇಕಾಯಿತು. ಪ್ರತಿರೋಧವನ್ನು ಎದುರಿಸಬೇಕಾಯಿತು. ಆದರೆ ಕಾರಂತರು ಇವೆಲ್ಲವನ್ನು ಮುಕ್ತವಾಗಿ ಸ್ವೀಕರಿಸಿದ್ದಾರೆ. ತನ್ನ ಪ್ರಯೋಗಗಳ ದೋಷಗಳನ್ನು ಒಪ್ಪಿಕೊಂಡೇ ಮತ್ತೆ ನಾವಿನ್ಯತೆಯ ಕಡೆ ಮುನ್ನುಗ್ಗಿದವರು.

ಕಾರಂತರು ಶಿಕ್ಷಣ ಸಂಬಂಧಿತವಾಗಿ ಮಾಡಿದ ಚಿಂತನೆಯಲ್ಲಿ ಅನೇಕ ಸಂಗತಿಗಳು ಇಂದಿಗೂ ಕೂಡ ನಿಜವಾಗಿಯೇ ಇದೆ. ಈ ಸಂಪ್ರಬಂಧದಲ್ಲಿ ಈ ಬಗೆಯ ಚಿಂತನೆಯ ಸ್ವರೂಪವನ್ನು ವಿಶ್ಲೇಷಿಸುತ್ತಾ, ಅವುಗಳ ಮೌಲ್ಯವನ್ನು ಶೋಧಿಸಲಾಗಿದೆ. ಶಿಕ್ಷಣವನ್ನು ಗ್ರಹಿಸಿಕೊಂಡ ಬಗೆಯನ್ನು ನಿರೂಪಿಸುವ ಮೂಲಕ ಕಾರಂತರು ಬಹು ಕಾಲ ನಿಲ್ಲಬಲ್ಲ ಒಂದು ಬಾಲ ಶಿಕ್ಷಣ ಕ್ರಮವನ್ನು ಕಂಡುಕೊಂಡಿದ್ದಾರೆ ಎಂಬುದನ್ನು ಒಪ್ಪಿಕೊಳ್ಳಬಹುದು. ಆ ಮೂಲಕ ವರ್ತಮಾನದ ಶಿಕ್ಷಣ ಕ್ಷೇತ್ರದ ಚಿಂತನೆಗೆ ಕಾರಂತರ ಚಿಂತನೆಯನ್ನು ಪುನರ್ ಸಂಯೋಜಿಸಿಕೊಳ್ಳಬಹುದಾದ ಸಾಧ್ಯತೆಯನ್ನು ಪ್ರಬಂಧದ ಸಂದರ್ಭದಲ್ಲಿ ಶೋಧಿಸಲಾಗಿದೆ. ಮಕ್ಕಳ ಶಿಕ್ಷಣದ ಸಂದರ್ಭದಲ್ಲಿ ಕಾರಂತರು ಕಂಡುಕೊಂಡ ಸಂಗತಿಗಳನ್ನು ಅವುಗಳ ಎಲ್ಲ ಮಿತಿಗಳ ನಡುವೆಯೂ ಅವುಗಳಲ್ಲಿ ಅನೇಕ ಪ್ರಾಯೋಗಿಕ ಸಾಧ್ಯತೆಗಳನ್ನು ಕಂಡುಕೊಳ್ಳಬಹುದಾಗಿದೆ.

ಕಾರಂತರು ತಮ್ಮ ಒಟ್ಟು ಶೈಕ್ಷಣಿಕ ಚಿಂತನೆಯನ್ನು ತಮ್ಮ ಕಾಲದ ವಾಸ್ತವದ ಶಿಕ್ಷಣ ಕ್ರಮದ ಲೋಪಗಳನ್ನು ಶೋಧಿಸುತ್ತಾ, ಅದಕ್ಕೆ ಪ್ರತಿಕ್ರಿಯೆಯ ರೂಪದಲ್ಲೇ ರೂಪಿಸಿದವರು. ಹೀಗಾಗಿ 'ಸ್ವ' ಚಿಂತನೆ ಎನ್ನುವುದು ಪ್ರತಿಕ್ರಿಯಾತ್ಮಕವಾದ ಸ್ವರೂಪದಲ್ಲೇ ಆಕಾರ ತಾಳಿದರೂ ಅವುಗಳ ಒಳಗಡೆ ಸ್ವೋಪಜ್ಞತೆ ಇದೆ. ಈ ಬಗೆಯ ಮೌಲಿಕತೆ ಕಾರಂತರ ಚಿಂತೆನೆಯ ಒಳಗಡೆ ಇದ್ದುದರಿಂದಲೇ ಅವರ

ಚಿಂತನೆಯ ನೆಲೆಗಳು ಕೇವಲ ಚಿಂತನೆಯ ಸ್ವರೂಪದಲ್ಲಿ ಉಳಿಯದೆ ಅವುಗಳು ಒಂದು ಪ್ರಾಯೋಗಿಕ ಸನ್ನಿವೇಶವೊಂದನ್ನು ತಾವಾಗಿಯೇ ಸೃಷ್ಟಿಸಿಕೊಂಡಿರುವುದು ಕಾಣುತ್ತೇವೆ.

ತಮ್ಮ ಚಿಂತನೆಯ ಮಕ್ಕಳ ಶಿಕ್ಷಣದ ಸ್ವರೂಪವನ್ನು ಕಾರಂತರು ಮಕ್ಕಳ ಕೂಟ, ಬಾಲವನ ಹಾಗೂ ಸ್ವಯಂ ಪಠ್ಯ ಪುಸ್ತಕ ರಚನೆಯ ಸಂದರ್ಭದಲ್ಲಿ ಅಳವಡಿಸಿಕೊಂಡರು. ಆ ಮೂಲಕ ತಮ್ಮ ಚಿಂತನೆಯ ಸೃಷ್ಟಿಕ್ರಿಯೆಗೆ ಪೂರಕವಾಗುವ, ಮಕ್ಕಳಲ್ಲಿ ಕುತೂಹಲವನ್ನು ಉಂಟುಮಾಡುವ, ಉತ್ಪಾದಕ ಶಕ್ತಿಯನ್ನು ಹೆಚ್ಚಿಸುವ ಬಗೆಯಲ್ಲಿ ಈ ಪ್ರಯೋಗಗಳು ನಡೆದಿರುವುದನ್ನು ಕಾಣುತ್ತೇವೆ. ಈ ಪ್ರಯೋಗಗಳು ಸಾಫಲ್ಯತೆಯನ್ನು ಪಡೆದ ಕುರಿತು ದಾಖಲಾದ ಅಂಶಗಳು ಕಡಿಮೆಯಾದರೂ ಆ ಬಗೆಯ ಸಾಧ್ಯತೆಗಳು ಇರುವುದು ಈ ಅಧ್ಯಯನದ ಸಂದರ್ಭದಲ್ಲಿ ಕಂಡುಕೊಳ್ಳಲಾಗಿದೆ. ಭಾಷಾ ಶಿಕ್ಷಣವನ್ನು ಕಲಿಸುವ ಸಂದರ್ಭದಲ್ಲಿ ಕಾರಂತರು ಅನುಸರಿಸಿದ ಪದ್ಧತಿ ಬಲ್ಲಾರ್ಡ್‌ನಿಂದ ಪ್ರಭಾವಿತವಾದುದು. ಅವರು ಹೇಳುವಂತೆ ಜೀವಂತ ಭಾಷೆಯನ್ನು ಮಾತಿನ ಸಂದರ್ಭದಲ್ಲಿ ಸಂಭಾಷಣೆಯ ಮೂಲಕ ಕಲಿಸಬೇಕಾದುದೇ ಹೊರತು ಅಕ್ಷರ ಮಾಲೆ, ಪದಗಳಿಂದ ಅಲ್ಲ ಎಂಬ ಮಾತು ಇಂದಿಗೂ ಮನನೀಯವಾದುದು.

ಕಾರಂತರು ತಾವು ಕಂಡುಕೊಂಡ ಮಕ್ಕಳ ಸೃಜನಶೀಲ ಶಕ್ತಿಯನ್ನು ತಮ್ಮ ಪ್ರಯೋಗದ ಮೂಲಕ ಅನಾವರಣಗೊಳಿಸಿದ ಬಗೆ ಹಾಗೂ ಸಮಕಾಲೀನ ಶಾಲಾ ಶಿಕ್ಷಣದಲ್ಲಿ ಆ ಬಗೆಯ ಅವಕಾಶ ಇಲ್ಲದಿರುವ ಸಂಗತಿಯನ್ನು ಗುರುತಿಸುವಾಗ ಒಟ್ಟು ಶಿಕ್ಷಣ ವ್ಯವಸ್ಥೆಯ ಮಿತಿಗಳನ್ನು ಶೋಧಿಸಲು ಸಾಧ್ಯವಾಗುತ್ತದೆ.

ಕಾರಂತರು ರೂಪಿಸಿಕೊಂಡ ಶಿಕ್ಷಣದ ಅರ್ಥ ವಿಸ್ತಾರದಲ್ಲಿ ಬಹಳ ಮುಖ್ಯವಾಗಿ ಕಾಣುವುದು ಸ್ವತಃ ಕಾರಂತರಿಗಿದ್ದ ಜ್ಞಾನತೃಷೆ. ಹೀಗಾಗಿ ಪಠ್ಯ ಪುಸ್ತಕದ ರಚನೆಯನ್ನು ಮಾತ್ರವಲ್ಲ, ಮಕ್ಕಳ ಓದಿಗೆ ಪೂರಕವಾಗುವ ಬಗೆಯಲ್ಲಿ ಅವರು ರಚಿಸಿದ ವಿಶ್ವಕೋಶ ಮಾದರಿಯ ಪುಸ್ತಕಗಳು, ಅವುಗಳು ಎಲ್ಲೂ ಶಬ್ದಾಡಂಭಾರವಾಗದೆ ತನ್ನ 'ಟಾರ್ಗೆಟ್ ಗ್ರೂಪ್' ಅನ್ನು ತಲುಪುವಲ್ಲಿ ಪ್ರಾಮಾಣಿಕವಾಗಿ ನಡೆಸಿದ ಪ್ರಯತ್ನಗಳನ್ನು ಈ ಅಧ್ಯಯನದ ಸಂದರ್ಭದಲ್ಲಿ ಅವುಗಳ ಗುಣ ವೈಶಿಷ್ಟ್ಯತೆಯನ್ನು ಗುರುತಿಸಲಾಗಿದೆ.

ಕಾರಂತರು ಮಕ್ಕಳ ಶಿಕ್ಷಣಕ್ಕೆ ಸಂಬಂಧಿಸಿದಂತೆ, ಅದಕ್ಕೆ ಪೂರಕವಾಗಿ ಶಿಶು ಸಾಹಿತ್ಯ ಅದರಲ್ಲೂ ಕವಿತೆ, ಕತೆಗಳನ್ನು ಬರೆಯುವ ಪ್ರಯತ್ನವನ್ನು ಮಾಡಿದ್ದಾರೆ. ನೀರಸವಾಗಬಹುದಾದ ಭೂಗೋಲದ ಪಾಠವನ್ನು ತನ್ನ ನಿರೂಪಣೆಯ ಕ್ರಮದಿಂದಲೇ ಸಚಿತ್ರ ಮಾದರಿಯಿಂದ ಆಕರ್ಷಕಗೊಳಿಸಿದ್ದಾರೆ. ತನ್ನ ಕಾಲದಲ್ಲಿ ಮಾಹಿತಿಗಳ ಲಭ್ಯತೆಯ ಮಿತಿ ಇದ್ದಾಗಲೂ, ಜಗತ್ತಿನ ಮೂಲೆ ಮೂಲೆಗಳಿಂದಲೂ ಮಾಹಿತಿಯನ್ನು ತರಿಸಿ ವಿಶ್ವಕೋಶ ಮಾದರಿಯ ಪುಸ್ತಕಗಳನ್ನು

ರಚಿಸಿದ್ದಾರೆ. ಇದು ಆ ಕಾಲದಲ್ಲಿ ಮಾತ್ರವಲ್ಲ ಅನೇಕ ವಿಷಯಗಳಿಗಾಗಿ ಇಂದಿಗೂ ಮಕ್ಕಳಿಗೆ ಉಪಯುಕ್ತವಾಗಿಯೇ ಉಳಿದಿರುವುದನ್ನು ಕಾಣುತ್ತೇವೆ. ಇಂತಹ ಅದ್ಭುತವಾದ ಮಕ್ಕಳ ಸಾಹಿತ್ಯವನ್ನು ನಿರ್ಮಾಣ ಮಾಡಿದ ಕಾರಂತರು, ವೈಶಿಷ್ಟ್ಯಪೂರ್ಣವಾಗಿ ಇವುಗಳನ್ನು ರಚಿಸಿದ್ದಾರೆ. ಇಲ್ಲಿ ಈ ಸಾಹಿತ್ಯ ಕೃತಿಗಳ ಸಂಕ್ಷಿಪ್ತ ಪರಿಚಯದ ಜೊತೆ ಅವುಗಳ ವೈಶಿಷ್ಟ್ಯತೆಯನ್ನು ಗುರುತಿಸಲಾಗಿದೆ. ಅವುಗಳ ಸ್ವರೂಪ ವೈಶಿಷ್ಟ್ಯ, ಭಾಷಾ ವೈಶಿಷ್ಟ್ಯಗಳನ್ನು ಗುರುತಿಸುತ್ತಲೇ ಅವುಗಳಲ್ಲಿ ಈ ಕಾಲದ ನಮಗೆ ಕಾಣಬಹುದಾದ ಮಿತಿಗಳನ್ನು ಕೂಡ ದಾಖಲು ಮಾಡಲಾಗಿದೆ.

ಕಾರಂತರ ಶಿಕ್ಷಣ ಚಿಂತನೆ ಅದು ತಮ್ಮ ಸಮಕಾಲೀನ ಮತ್ತು ಪೂರ್ವದ ಕೆಲವು ಶಿಕ್ಷಣ ತಜ್ಞರ ಚಿಂತನೆಗಳಿಂದ ಪ್ರಭಾವಿತವಾಗಿ ರೂಪಿತಗೊಂಡಿರುವುದು ಕಾಣುತ್ತದೆ. ರೂಸೊ, ಟಾಗೋರ್, ಬಲ್ಲಾರ್ಡ್ ಮೊದಲಾದವರ ಶಿಕ್ಷಣ ಚಿಂತನೆಗಳೊಂದಿಗೆ ಕಾರಂತರ ಚಿಂತನೆ ಮತ್ತು ಪ್ರಯೋಗಗಳನ್ನು ಜೊತೆಗಿಟ್ಟು ಅವುಗಳ ಪ್ರಭಾವದ ನೆಲೆಗಳು ಹಾಗೂ ಅವುಗಳ ಮೂಲಕ ಕಾರಂತರು ರೂಪಿಸಿಕೊಂಡ ಮಾದರಿಯ ಭಿನ್ನ ಆಯಾಮಗಳನ್ನು, ಕೆಲವು ನಿರ್ದಿಷ್ಟ ಸಂಗತಿಗಳನ್ನು ಗುರುತಿಸುವ ಮೂಲಕ ವಿಶ್ಲೇಷಿಸಲಾಗಿದೆ ಮತ್ತು ಅದೇ ಸಂದರ್ಭದಲ್ಲಿ ಕಾರಂತರಿಗಿದ್ದ ಸೌಲಭ್ಯ ಮತ್ತು ಸಹಕಾರದ ಕೊರತೆಯಿಂದಾಗಿ ಅವುಗಳನ್ನು ಪೂರ್ಣ ಪ್ರಮಾಣದಲ್ಲಿ ಪ್ರಯೋಗಿಸಲಾಗದ ಸಂಗತಿಯನ್ನು ಇಲ್ಲಿ ಕಂಡುಕೊಳ್ಳಲಾಗಿದೆ.

ಕಾರಂತರು ಓದುವ ಆಟ, ಸಿರಿಗನ್ನಡ ಪಾಠಮಾಲೆ, ಹೂಗನ್ನಡ ಪಾಠಮಾಲೆ ಎಂಬ ಪಠ್ಯ ಪುಸ್ತಕಗಳನ್ನು ತಯಾರು ಮಾಡಿರುವುದರಿಂದ ಈ ಅಧ್ಯಯನದ ಸಂದರ್ಭದಲ್ಲಿ ಈ ಪಾಠ ಪುಸ್ತಕಗಳ ವೈಶಿಷ್ಟ್ಯತೆ, ಅವುಗಳು ನಿರೂಪಿಸುವ ಸಚಿತ್ರ ವಿವರಗಳು, ಭಾಷಾ ಕಲಿಕೆಯ ಮಾದರಿಯ ವೈಶಿಷ್ಟ್ಯ ಹಾಗೂ ಮಿತಿಗಳನ್ನು ಈ ಅಧ್ಯಯನದ ಸಂದರ್ಭದಲ್ಲಿ ಶೋಧಿಸಲಾಗಿದೆ. ಆ ಕಾಲಕ್ಕೆ ಮಾತ್ರವಲ್ಲ, ನಮ್ಮ ಕಾಲದಲ್ಲೂ ವಿಶಿಷ್ಟವಾಗಿ ಮತ್ತು ಅನನ್ಯವಾಗಿ ಕಾಣಬಹುದಾದ ಈ ಪಠ್ಯ ಪುಸ್ತಕದಲ್ಲಿ ಕಾಣುವ ಕಾರಂತರ ಶ್ರಮ, ಸೃಜನಶೀಲ ಚಿಂತನೆ, ಬಾಲ ಶಿಕ್ಷಣದ ಕುರಿತ ಚಿಂತನೆಗಳೊಂದಿಗೆ ಅವುಗಳು ಹೊಂದಿರುವ ತಾತ್ವಿಕ ಸಂಬಂಧವನ್ನು ಇಲ್ಲಿ ಗುರುತಿಸಲಾಗಿದೆ. ಪಠ್ಯಗಳಲ್ಲಿ ಬಹಳ ಭಿನ್ನವಾಗಿ ಕಾಣುವ ವಿಷಯದ ನಿರೂಪಣೆಯ ದಾಟಿಯನ್ನು ಗುರುತಿಸಿ ಅವು ಉಂಟುಮಾಡಬಹುದಾದ ಪರಿಣಾಮದ ಸಾಧ್ಯತೆಗಳನ್ನು ಹೇಳಲಾಗಿದೆ. ಮಕ್ಕಳಲ್ಲಿ ಕಲಿಕೆಯ ಕುತೂಹಲವನ್ನು ಉಂಟುಮಾಡುವ ಬಗೆಯಲ್ಲಿ ಹೇಗೆ ಈ ಪಠ್ಯ ವಿಶಿಷ್ಟವಾಗಿದೆ ಎಂಬುದನ್ನು ಇಲ್ಲಿ ಶೋಧಿಸಲಾಗಿದೆ.

ಕಾರಂತರು ವಯಸ್ಕರ ಶಿಕ್ಷಣ ಕ್ಷೇತ್ರದಲ್ಲಿ ಕೂಡ ಯುನೆಸ್ಕೊದ ಜೊತೆ ಸೇರಿ ಪ್ರಾಯೋಗಿಕವಾಗಿ ಅದನ್ನು ಅನುಷ್ಠಾನದಲ್ಲಿ ಯತ್ನಿಸಿದವರು ಮತ್ತು ಮುಂದೆ ಅನಕ್ಷರಸ್ಥರಿಗಾಗಿ ಪಠ್ಯ

ಹಾಗೂ ಹೆಚ್ಚಿನ ಓದಿನ ಅನುಕೂಲಕ್ಕಾಗಿ ಪುಸ್ತಕವನ್ನು ಬರೆದವರು. ಇದು ಕಾರಂತರ ಒಂದು ಯಶಸ್ವಿ ಪ್ರಯೋಗಗಳಲ್ಲಿ ಒಂದಾಗಿದೆ. ಬಹುವರ್ಷಗಳ ನಂತರವೂ ಕಾರಂತರ ಈ ಪಠ್ಯಗಳು ಮರು ಮುದ್ರಣಗೊಂಡು ವಯಸ್ಕರ ಶಿಕ್ಷಣದ ಪಠ್ಯವಾಗಿ ಉಳಿದದ್ದು ಕಾಣುತ್ತದೆ. ವಯಸ್ಕರ ವಯಸ್ಸು ಮತ್ತು ಮನಸ್ಸಿಗೆ ತಟ್ಟಬಲ್ಲಂತೆ ಪಠ್ಯಗಳ ನಿರೂಪಣೆ, ಪಠ್ಯದ ಜೊತೆಗೆಯೇ ಒಂದು ಬಗೆಯ ಸಾಮಾಜಿಕ ಎಚ್ಚರವನ್ನು ಮೂಡಿಸುವಲ್ಲಿ ನಡೆಸಿದ ಯತ್ನಗಳು ವಿಶಿಷ್ಟವಾದುದು. ಈ ಅಧ್ಯಯನದಲ್ಲಿ ಈ ಪ್ರಯೋಗದ ವೈಶಿಷ್ಟ್ಯಪೂರ್ಣವಾದ ಫಲಿತಗಳನ್ನು ಗುರುತಿಸುವ ಕೆಲಸವನ್ನು ಮಾಡಲಾಗಿದೆ.

ಅಧ್ಯಯನದ ಕೊನೆಯಲ್ಲಿ ಒಟ್ಟಿನಲ್ಲಿ ಕಾರಂತರು ನಡೆಸಿದ ಶೈಕ್ಷಣಿಕ ಪ್ರಯೋಗಕ್ಕೆ ಒಂದಷ್ಟು ಇತ್ಯಾತ್ಮಕವಾದ ಮುಖವಿದೆ, ಇನ್ನೊಂದಷ್ಟು ನೇತ್ಯಾತ್ಮಕವಾದ ಸಂಗತಿಗಳಿವೆ. ಈ ಇತ್ಯಾತ್ಮಕ ಹಾಗೂ ನೇತ್ಯಾತ್ಮಕ ಸಂಗತಿಗಳನ್ನು ಇಲ್ಲಿ ಸ್ಥೂಲವಾಗಿ ಗುರುತಿಸಲಾಗಿದೆ. ಅವರ ಪ್ರಯೋಗದ ಇತ್ಯಾತ್ಮಕ ಅಂಶಗಳಿಗೆ ಬಹಳ ಮುಖ್ಯ ಕಾರಣ ಅವರು ಶಿಕ್ಷಣ ಸಂಬಂಧಿತ ಒಂದು ವ್ಯವಸ್ಥೆಯ ವಾಸ್ತವವನ್ನು ಬಹಳ ಹತ್ತಿರದಿಂದ ಕಂಡವರು ಮತ್ತು ಸುಧಾರಣೆಯ ಆಶಯವನ್ನು ಹೊತ್ತವರಾಗಿದ್ದರು. ಮಕ್ಕಳ ಕಲಿಕೆಯಲ್ಲಿ ಅವರಲ್ಲಿ ಕುತೂಹಲ ಹುಟ್ಟಿಸುವ ಬಗೆಯಲ್ಲಿ ಇಲ್ಲದಿರುವುದನ್ನು ಕಂಡ ಕಾರಂತರು ಕುತೂಹಲವನ್ನು ಉಂಟು ಮಾಡುವ ರೀತಿಯ ಒಂದು ಪದ್ಧತಿಯನ್ನು ರೂಢಿಸುವ ಪ್ರಯತ್ನ ಮಾಡಿರುವುದು ಕಾಣುತ್ತದೆ. ಹಾಗೆಯೇ ಅವರ ಪ್ರಯೋಗಗಳಿಗೆ ಒಂದು ವಿಸ್ತಾರವಾದ ಆಯಾಮ ದೊರೆಯದೇ ಹೋದುದರಿಂದ ಅದು ಕೆಲವಾರು ಮಿತಿಗಳನ್ನು ಹೊಂದಿತ್ತು. ಇದಕ್ಕಿದ್ದ ಕಾರಣವೆಂದರೆ ಕಾರಂತರ ಪ್ರಯೋಗವನ್ನು ಅಂದಿನ ಸಮಾಜ ಸ್ವೀಕಾರ ಮಾಡದೆ ಹೋದುದೂ ಆಗಿದೆ. ಹೀಗಾಗಿ ಇದನ್ನು ಪ್ರಯೋಗದ ಒಳಗಿನ ಮಿತಿ ಎನ್ನುವುದಕ್ಕಿಂತ ಕಾಲದ ಗ್ರಹಿಕೆಯ ಸಮಸ್ಯೆಯಾಗಿ ಕಾಣಬೇಕಾಗುತ್ತದೆ. ಈ ಸಂಗತಿಗಳನ್ನು ಅದರ ಭಿನ್ನ ಮುಖಗಳಿಂದ ಶೋಧಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

ಒಟ್ಟಿನಲ್ಲಿ ಶಿವರಾಮ ಕಾರಂತರೆಂಬ ಕನ್ನಡದ ಮೇರು ಸಾಹಿತಿಯೊಬ್ಬರ ಸಾಹಿತ್ಯಿಕವಾದ ಸಾಧನೆ, ವೈಶಿಷ್ಟ್ಯತೆಗಳಿಗಿಂತ ಬಹಳ ಭಿನ್ನವಾಗಿ ಈವರೆಗೆ ಹೆಚ್ಚು ಚಿಂತನೆ, ಚರ್ಚೆಗೆ ಒಳಗಾಗದೇ ಇದ್ದ ಕಾರಂತರ ಶೈಕ್ಷಣಿಕ ಚಿಂತನೆ ಹಾಗೂ ಪ್ರಯೋಗಶೀಲತೆಯನ್ನು ಅದು ಉಂಟು ಮಾಡಿದ ಪರಿಣಾಮ ಹಾಗೂ ವರ್ತಮಾನದಲ್ಲೂ ಅದು ಚಿಂತನೆಗೆ ಯೋಗ್ಯವಾದ ಸಂಗತಿಯಾಗಿ ಉಳಿದಿರುವುದನ್ನು ಲಭ್ಯವಾದ ಬೇರೆ ಬೇರೆ ಮಾಹಿತಿಗಳನ್ನು ಇಟ್ಟುಕೊಂಡು, ಅವುಗಳ ಬಹು ಆಯಾಮವನ್ನು ಜಿಜ್ಞಾಸೆಗೆ ಒಳಪಡಿಸುವ ಪ್ರಯತ್ನ ಈ ಅಧ್ಯಯನವಾಗಿದೆ. ಕಾರಂತರ ಶಿಕ್ಷಣದ ಚಿಂತನೆಯ ತಾತ್ವಿಕ ಸ್ವರೂಪವನ್ನು ಇನ್ನೂ ವಿಸ್ತಾರವಾಗಿ ನೋಡುವ ಅವಕಾಶ ಈ ಅಧ್ಯಯನದ ಸಂದರ್ಭದಲ್ಲಿ ಕಂಡುಬರುತ್ತವೆ.

೬. ಪರಾಮರ್ಶನ ಕೃತಿಗಳು

೬. ಪರಾಮರ್ಶನ ಕೃತಿಗಳು

೧. ಡಾ. ಶಿವರಾಮ ಕಾರಂತ: 'ಸ್ಮೃತಿ ಪಟಲದಿಂದ' ಸಂ.೧
ರಾಜಲಕ್ಷ್ಮಿ ಪ್ರಕಾಶನ, ಬೆಂಗಳೂರು, ೧೯೭೭

೨. ಬಿ. ಮಾಲಿನಿ ಮಲ್ಯ (ಸಂ): 'ಶಿವರಾಮ ಕಾರಂತರ ಲೇಖನಗಳು ಸಂ.೨'
ಪ್ರಸಾರಾಂಗ, ಮಂಗಳೂರು ವಿ.ವಿ. ೧೯೯೪

೩. ಡಾ. ಮಹಾಬಲೇಶ್ವರ ರಾವ್: 'ಶಿಕ್ಷಣ ಕಾರಂತರ ದೃಷ್ಟಿ–ಸೃಷ್ಟಿ' ಕರ್ನಾಟಕ ಸಂಘ,
ಪುತ್ತೂರು ೧೯೯೨

೪. ಮನು ಬಳಿಗಾರ್ (ಸಂ): 'ಬಹುಮುಖಿ'
ಪರಮಶಂಕರ ಪ್ರಕಾಶನ, ಶಿಗ್ಲಿ, ಬೆಳಗಾವಿ, ೧೯೯೯

೫. ನಾಗ ಐತಾಳ (ಸಂ): 'ಕಾರಂತ ಚಿಂತನ – ಕಡಲಾಚೆಯ ಕನ್ನಡಿಗರಿಂದ'
ಅಕ್ಷರ ಪ್ರಕಾಶನ, ಹೆಗ್ಗೋಡು
ಸಾಗರ, ೨೦೦೦

೬. ಕು.ಶಿ. ಹರಿದಾಸ ಭಟ್ಟ (ಸಂ): 'ಕಾರಂತ ಪ್ರಪಂಚ'
ಗೀತಾ ಬುಕ್ ಹೌಸ್, ಮೈಸೂರು ೧೯೬೯

೭. ಡಾ. ಶಿವರಾಮ ಕಾರಂತ: 'ಹುಚ್ಚು ಮನಸ್ಸಿನ ಹತ್ತು ಮುಖಗಳು'
ಎಸ್.ಬಿ.ಎಸ್.ಪಬ್ಲಿಷರ್ಸ್ ಡಿಸ್ಟ್ರಿಬ್ಯೂಟರ್ಸ್, ಬೆಂಗಳೂರು,
೨೦೦೪

೮. ಡಾ. ತಾಳ್ತಜೆ ವಸಂತ ಕುಮಾರ: 'ಶಿವರಾಮ ಕಾರಂತ'
ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು ೨೦೦೩

೯. ಡಾ. ಸುಕುಮಾರ ಗೌಡ: 'ಗುಣಶೋಧ'
ಹಳೆ ವಿದ್ಯಾರ್ಥಿ ಪ್ರಕಾಶನ
ಡಾ. ಟಿ.ಎಂ.ಎ. ಪೈ. ಶಿಕ್ಷಣ ಕಾಲೇಜು, ಉಡುಪಿ
೨೦೦೪

೧೦. ಶಿವರಾಮ ಕಾರಂತ: 'ಚಿತ್ರಮಯ ದಕ್ಷಿಣ ಕನ್ನಡ'
ಬಾಸೆಲ್ ಮಿಶನ್ ಬುಕ್ ಆ್ಯಂಡ್ ಟ್ರಕ್ಟ್ ಡೆಪೊಸಿಟರಿ,
ಮಂಗಳೂರು ೧೯೩೪

೧೧. ಶಿವರಾಮ ಕಾರಂತ: 'ವಿಜ್ಞಾನ ಪ್ರಪಂಚ, ಈ ಜಗತ್ತು ಸಂ.೧'
ಹರ್ಷ ಮುದ್ರಣಾಲಯ, ಪುತ್ತೂರು ೧೯೫೯

೧೨. ಶಿವರಾಮ ಕಾರಂತ: 'ವಿಜ್ಞಾನ ಪ್ರಪಂಚ, ಜೀವ ಜೀವನ ಸಂ.೨'
ಹರ್ಷ ಮುದ್ರಣಾಲಯ, ಪುತ್ತೂರು ೧೯೬೦

೧೩. ಶಿವರಾಮ ಕಾರಂತ: 'ವಿಜ್ಞಾನ ಪ್ರಪಂಚ, ವಸ್ತು ಚೈತನ್ಯ ಸಂ.೩'
ಹರ್ಷ ಮುದ್ರಣಾಲಯ, ಪುತ್ತೂರು ೧೯೬೨

೧೪. ಶಿವರಾಮ ಕಾರಂತ: 'ವಿಜ್ಞಾನ ಪ್ರಪಂಚ, ವಿಜ್ಞಾನ ಸಾಧನ ಸಂ.೪'
ಹರ್ಷ ಮುದ್ರಣಾಲಯ, ಪುತ್ತೂರು ೧೯೬೪

೧೫. ಡಾ. ಶಿವರಾಮ ಕಾರಂತ: 'ಬಾಲ ಪ್ರಪಂಚ, ಸಂ.೧'
ಶಿವರಾಮ ಕಾರಂತ ಅಧ್ಯಯನ ಕೇಂದ್ರ, ಪುತ್ತೂರು ೨೦೦೨

೧೬. ಡಾ. ಶಿವರಾಮ ಕಾರಂತ: 'ಬಾಲ ಪ್ರಪಂಚ, ಸಂ.೨'
ಡಾ.ಕೆ. ಶಿವರಾಮ ಕಾರಂತ ಸಂಶೋಧನಾ ಮತ್ತು ಅಧ್ಯಯನ ಸಂಸ್ಥೆ, ಸಾಲಿಗ್ರಾಮ ೨೦೦೭

೧೭. ಬೊಳುವಾರು ಮಹಮ್ಮದ್ ಕುಂಞ (ಸಂ): 'ತಟ್ಟು ಚಪ್ಪಾಳೆ ಪುಟ್ಟ ಮಗು'
ದಿವ್ಯ ಪ್ರಕಾಶನ ಬೆಂಗಳೂರು ೧೯೯೧

೧೮. ವಿ.ಎಂ. ಇನಾಂದಾರ್: 'ಶಿವರಾಮ ಕಾರಂತ: ಬದುಕು-ಬರಹ'
ರಾಷ್ಟ್ರಕವಿ ಗೋವಿಂದ ಪೈ ಸ್ಮಾರಕ ಸಂಶೋಧನಾ ಕೇಂದ್ರ, ಉಡುಪಿ, ೧೯೭೮

೧೯. ಶಿವರಾಮ ಕಾರಂತ: 'ದಕ್ಷಿಣ ಕನ್ನಡ ಅಂದು-ಇಂದು'
ಎಸ್.ಬಿ.ಎಸ್ ಪಬ್ಲಿಷರ್ ಆ್ಯಂಡ್ ಡಿಸ್ಟ್ರಿಬ್ಯೂಟರ್ಸ್, ಬೆಂಗಳೂರು, ೧೯೯೧

೨೦. ಶಿವರಾಮ ಕಾರಂತ: 'ಓದುವ ಆಟ – ೬'
ಎಸ್. ಬಿ.ಎಸ್. ಪಬ್ಲೀಷರ್ ಆ್ಯಂಡ್ ಡಿಸ್ಟ್ರಿಬ್ಯೂಟರ್ಸ್,
ಬೆಂಗಳೂರು, ೧೯೯೧

೨೧. ಶಿವರಾಮ ಕಾರಂತ: 'ಓದುವ ಆಟ – ೧'
ಕರ್ನಾಟಕ ಬುಕ್ ಏಜೆನ್ಸಿ, ಬೆಂಗಳೂರು, ೧೯೯೧

೨೨. ಶಿವರಾಮ ಕಾರಂತ: 'ಜೋಗಿ ಕಂಡ ಊರು, ದೇವ ಒಲಿದ ಊರು'
ಸಂಪೂರ್ಣ ಸಾಕ್ಷರತಾ ಆಂದೋಲನ,
ದ.ಕ. ಜಿಲ್ಲಾ ಪರಿಷತ್, ಮಂಗಳೂರು, ೧೯೯೧